ಜನಮನದ ದನಿ


# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

27 ಅಕ್ಟೋಬರ್ 2025 ಸೋಮವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 226 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮುಂಬೈನಲ್ಲಿ ನಡೆಯುತ್ತಿರುವ ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಬಾಂಗ್ಲಾದೇಶ ವಿರುದ್ಧದ ಕೊನೆಯ ಲೀಗ್ ಪಂದ್ಯದಲ್ಲಿ ಟಾಸ್ ಗೆದ್ದಿರುವ ಭಾರತ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿದೆ.


ಕಂಡೆಕ್ಟರ್ ನಮ್ಮ ಫ್ರೆಂಡೇ ಅಲ್ವಾ ! » 2


ಆರ್‌ಎಸ್‌ಎಸ್‌ನವರು ದೇವರಿಗಿಂತ ದೊಡ್ಡವರಾ » 3


ನಕ್ಸಲ್ ಮುಕ್ತ ಭಾರತ ಸನ್ನಿಹಿತ : ಮೋದಿ » 4

# ಸಿದ್ದರಾಮಯ್ಯಗಾಗಿ ತ್ಯಾಗಕ್ಕೆ ಮುಂದಾದ ಸಚಿವರು

## ಬಿಹಾರ ಚುನಾವಣೆ ಬಳಿಕ ಕ್ಷಿಪ್ರ ಬೆಳವಣಿಗೆ ಖಚಿತ | ಡಿ.ಕೆ.ಶಿವಕುಮಾರ್‌ಗೆ ಹಿನ್ನಡೆ

• ಪ್ರಜೋದಯ ವರದಿ

**ಬೆಂಗಳೂರು:** ಬಿಹಾರ ವಿಧಾನಸಭೆ ಚುನಾವಣೆ ಬಳಿಕ ರಾಜ್ಯ ಕಾಂಗ್ರೆಸ್‌ನಲ್ಲಿ ಮಹತ್ವದ ಬೆಳವಣಿಗೆಗಳು ಘಟಿಸುವ ಸಾಧ್ಯತೆ ದಟ್ಟವಾಗಿದ್ದು, ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರಿಸಲು ಅನೇಕ ಸಚಿವರು ತಮ್ಮ ಸ್ಥಾನ ತ್ಯಾಗಕ್ಕೆ ಮುಂದಾಗಿದ್ದಾರೆ. ಮುಖ್ಯಮಂತ್ರಿ ನೇತೃತ್ವದ ರಾಜ್ಯ ಸಚಿವ ಸಂಪುಟ ಪುನಾರಚನೆಗೆ ಸಿದ್ಧತೆ ನಡೆದಿದೆ. 12 ರಿಂದ 15 ಸಚಿವರನ್ನು ಪಕ್ಷದ ಸಂಘಟನೆಗೆ ನಿಯೋಜಿಸಿ ಹೊಸ ಮುಖಗಳಿಗೆ ಸಚಿವ ಸ್ಥಾನ ನೀಡುವ ಸಾಧ್ಯತೆ ಇದೆ.

ಏತನ್ಮಧ್ಯೆ ಸಿದ್ದರಾಮಯ್ಯ ಅವರಿಗೆ ಬೆಂಬಲ ವ್ಯಕ್ತಪಡಿಸಿರುವ ಆಪ್ತರು, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿಯಾಗಿ ಮುಂದು ವರೆಯುತ್ತಾರೆಂದರೆ ಸಚಿವ ಸ್ಥಾನ ತ್ಯಾಗ ಮಾಡಲು ಸಿದ್ಧವೆಂದು ಹೇಳಿದ್ದಾರೆ ಎನ್ನಲಾಗಿದೆ.



**ಹೈಕಮಾಂಡ್‌ಗೆ ಡಿ.ಕೆ.ಶಿ. ಒತ್ತಡ**

ಹೈಕಮಾಂಡ್ ಸಂಪುಟ ಪುನಾರ್ ರಚನೆಗೆ ಒಪ್ಪಿಗೆ ನೀಡಿ ಎರಡೂವರೆ ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ ನಂತರವೂ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿ ಆಗಿ ಮುಂದುವರಿಯಲು ಅವಕಾಶ ನೀಡಿದರೆ ಡಿ.ಕೆ.ಶಿವಕುಮಾರ್ ಅವರು ಹೈಕಮಾಂಡ್ ಮೇಲೆ ಒತ್ತಡ ಹೇರುವ ಸಾಧ್ಯತೆಗಳಿವೆ.

ಈ ನಡುವೆ ಪ್ರತಿಕ್ರಿಯೆ ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ ಅವರು, ಸಂಪುಟ ಪುನಾರಚನೆ ಮಾಡಬೇಕಾದರೆ ಅಥವಾ ನಾಯಕತ್ವ ಬದಲಾಯಿಸಬೇಕಾದರೆ

> **ನಾನು ನಿಯಮಿತವಾಗಿ ನವದೆಹಲಿಗೆ ಹೋಗುತ್ತೇನೆ. ಕೆಲಸ ಇದ್ದಾಗಲೆಲ್ಲಾ ಹೋಗುತ್ತೇನೆ. ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು, ವಿಶ್ರಾಂತಿ ಪಡೆಯಲು, ಶಾಪಿಂಗ್ ಮಾಡಲು ಮತ್ತು ನ್ಯಾಯಾಲಯದ ಪ್ರಕರಣಗಳಿಗೂ ಹೋಗುತ್ತೇನೆ. ಅದಕ್ಕೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ.**
> **-ಡಿ.ಕೆ.ಶಿವಕುಮಾರ್, ಡಿಸಿಎಂ**

ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಇಬ್ಬರೂ ಹೈಕಮಾಂಡ್ ಜೊತೆ ಸಮಾಲೋಚಿಸಿ ನಿರ್ಧರಿಸುತ್ತಾರೆ ಎಂದಿದ್ದಾರೆ.

ಮುಖ್ಯಮಂತ್ರಿ ಇರುತ್ತಾರೋ ಬಿಡುತ್ತಾರೋ ಬೇರೆ ಪ್ರಶ್ನೆ. ಈ ಸರ್ಕಾರ ಬಂದಾಗಲೇ ಮಂತ್ರಿ ಮಂಡಲದಿಂದ ಹೊರಗಿರುವವರಿಗೆ ಅವಕಾಶ ಕೊಡಬೇಕೆನ್ನುವುದು ನಿರ್ಧಾರವಾಗಿದೆ. ಆ ಸಂಪುಟ ಪುನಾರಚನೆ ಯಾವಾಗ ಆಗುತ್ತೆ ಎನ್ನುವುದನ್ನು ವರಿಷ್ಠರು ತೀರ್ಮಾನಿಸುತ್ತಾರೆಂದರು. ಸೂಕ್ತ ಸಮಯದಲ್ಲಿ ಸಂಪುಟದಿಂದ ಹೊರಗಿರುವ ಅರ್ಹರಿಗೆ ಅವಕಾಶ ಕೊಡಬೇಕೆಂದು ವರಿಷ್ಠರು ತೀರ್ಮಾನಿಸಿದ್ದಾರೆ. ಸಂಪುಟದ ಒಳಗಿರುವವರು ಕೂಡ ಅದಕ್ಕೆ ಒಪ್ಪಿದ್ದಾರೆ. ಇದು ಸ್ವಾಭಾವಿಕ ನ್ಯಾಯ, ಧರ್ಮ. ನಾನು ಹೊರಗೆ ಹೋದರು ಪರವಾಗಿಲ್ಲ. ಬೇರೆಯವರಿಗೆ ಅವಕಾಶ ಸಿಗಬೇಕು, ಇದು ತ್ಯಾಗ ಅಲ್ಲ ಕರ್ತವ್ಯವೆಂದು ಭಾವಿಸುತ್ತೇವೆಂದರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಮಾತನಾಡಿ, ಸಿದ್ದರಾಮಯ್ಯ ಅವರಿಗೆ ಸಹಾಯ ಮಾಡಲು ರಾಜೀನಾಮೆ ನೀಡಲು ಸಿದ್ಧ ಎಂದಿದ್ದರೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕೂಡ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವ

» ನಾಲ್ಕನೇ ಪುಟದಲ್ಲಿ

### ಅಹಿಂದ ನಾಯಕತ್ವದ ಬಗ್ಗೆ ಹೇಳಿದ್ದಾರೆ

ವಿಧಾನ ಪರಿಷತ್ ಸದಸ್ಯ ಡಾ|| ಯತೀಂದ್ರ ಸಿದ್ದರಾಮಯ್ಯ ಅಹಿಂದ ನಾಯಕತ್ವದ ಬಗ್ಗೆ ಹೇಳಿದ್ದಾರೆಯೇ ಹೊರತು, ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬಗ್ಗೆ ಅಲ್ಲವೆಂದು ಸಚಿವ ಸತೀಶ್ ಜಾರಕಿಹೊಳಿ ಅವರು ಪ್ರತಿಕ್ರಿಯಿಸಿದ್ದಾರೆ. ಪಕ್ಷವೇ ಬೇರೆ. ಅಹಿಂದ ಸಂಘಟನೆಯೇ ಬೇರೆ. ಮುಖ್ಯಮಂತ್ರಿ ಸ್ಥಾನಕ್ಕೂ ಅದಕ್ಕೂ ಸಂಬಂಧವಿಲ್ಲ. ಈ ವಿಚಾರದಲ್ಲಿ ಗೊಂದಲ ನಿರ್ಮಿಸುವ ಅಗತ್ಯವಿಲ್ಲ. ಸಂಪುಟ ಪುನರ್ ರಚನೆ ಆದಾಗ ಹಳಬರು ಹೋಗಿ, ಹೊಸಬರು ಬರುತ್ತಾರೆ. ಸರ್ಕಾರ ಅಧಿಕಾರಕ್ಕೆ ಬಂದ 30 ತಿಂಗಳ ನಂತರ ಸಂಪುಟ ಪುನರ್ ರಚನೆ ಮಾಡಲಾಗುತ್ತದೆ ಎನ್ನಲಾಗಿತ್ತು. ಈಗ ಆ ಚರ್ಚೆ ಅಂತಿಮ ಹಂತಕ್ಕೆ ಬಂದಿರಬೇಕು. ಯಾರನ್ನು ಸಚಿವ ಸ್ಥಾನದಿಂದ ಕೈಬಿಡುತ್ತಾರೆ ಎಂಬ ವಿಚಾರ ಪಕ್ಷದ ವರಿಷ್ಠರಿಗೆ ಬಿಟ್ಟಿದ್ದು. ಈ ಬಗ್ಗೆ ನಮ್ಮ ಹಂತದಲ್ಲಿ ಚರ್ಚೆಯಾಗಿಲ್ಲವೆಂದರು.

# ಸಂಜೀವಿನಿ ಸಹಕಾರಿ ಸಂಸ್ಥೆ ಚುನಾವಣೆ: ಶಾಸಕ ಹೆಚ್.ಪಿ.ಸ್ವರೂಪ್ ಬಣಕ್ಕೆ ಗೆಲುವು



• ಪ್ರಜೋದಯ ವರದಿ

**ಹಾಸನ:** ನಗರದ ಸಂಜೀವಿನಿ ಸಹಕಾರಿ ಆಸ್ಪತ್ರೆ ಹಾಗು ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಆಡಳಿತ ಮಂಡಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಶಾಸಕ ಹೆಚ್.ಪಿ. ಸ್ವರೂಪ್ ಬಣ ವಿಜಯ ಪತಾಕೆ ಹಾರಿಸಿದೆ.

ಸಂಸ್ಥೆಯ ಆಡಳಿತ ಮಂಡಳಿಯ ಸಾಮಾನ್ಯ 3, ಪರಿಶಿಷ್ಟ ಜಾತಿ 1 ಹಾಗು ವೈದ್ಯಕೀಯ ಕ್ಷೇತ್ರದ 1 ಸ್ಥಾನ ಸೇರಿ ಒಟ್ಟು 5 ಸ್ಥಾನಗಳಿಗೆ ನಗರದ ಎವಿಕೆ ಕಾಲೇಜಿನಲ್ಲಿ ಮತದಾನ ನಡೆಯಿತು. ಶಾಸಕ ಹೆಚ್.ಪಿ. ಸ್ವರೂಪ್ ಬಣದ ನಾಲ್ವರು ಅಭ್ಯರ್ಥಿಗಳು ವಿಜೇತರಾಗಿದ್ದಾರೆ. ಒಟ್ಟು 370 ಮತದಾರರಿದ್ದು, ಎಲ್ಲರೂ ತಮ್ಮ ಹಕ್ಕು ಚಲಾಯಿಸಿದ್ದಾರೆ.

ವಿವಿಧ ಕ್ಷೇತ್ರದ ಒಟ್ಟು 5 ಸ್ಥಾನಗಳಿಗೆ 9 ಮಂದಿ ಸ್ಪರ್ಧೆ ಮಾಡಿದ್ದರು. ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದ ಡಿ.ಅರುಣ್ ಕುಮಾರ್ 255 ಮತ ಪಡೆದಿದ್ದಾರೆ. ಬಿ.ಜಿ. ಶ್ರೀಧರ್ 217 ಮತ ಪಡೆದು ಗೆಲುವು ಕಂಡಿದ್ದಾರೆ. ಹೆಚ್.ಆರ್.ಸುರೇಶ್ 228 ಮತ್ತು ವೈದ್ಯಕೀಯ ಕ್ಷೇತ್ರದಿಂದ ಡಾ|| ಜಿ.ಕಾವ್ಯಶ್ರೀ 34 ಮತ (ಒಟ್ಟು 54 ಮತಗಳಿವೆ) ಪಡೆದಿದ್ದಾರೆ ಹಾಗು ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಸ್ಪರ್ಧಿಸಿದ್ದ ಹೆಚ್.ಸುರೇಶ್ 196 ಮತ ಪಡೆದು ಗೆಲುವು ತಮ್ಮದಾಗಿಸಿ ಕೊಂಡಿದ್ದಾರೆ. ಚುನಾವಣೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್ ಹೂ ಮಾಲೆ ಹಾಕಿ, ಸಿಹಿ ತಿನ್ನಿಸಿ ಅಭಿನಂದಿಸಿದರು. ಅಭಿಮಾನಿಗಳು ಪಟಾಕಿ ಸಿಡಿಸಿ ಸಂಭ್ರಮಾಚರಿಸಿದರು.

# ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿಗೆ ಆದ್ಯತೆ

• ಪ್ರಜೋದಯ ವರದಿ

**ಬೇಲೂರು:** ಗ್ರಾಮೀಣ ಪ್ರದೇಶಗಳ ರಸ್ತೆಗಳಿಗೆ ಕಾಯಕಲ್ಪ ನೀಡಲು ಆದ್ಯತೆ ನೀಡಲಾಗುವುದೆಂದು ಶಾಸಕ ಹೆಚ್.ಕೆ.ಸುರೇಶ್ ಅವರು ಹೇಳಿದರು.

ಯಗಚಿ ಯೋಜನೆ ಉಪ ವಿಭಾಗದಿಂದ ತಾಲ್ಲೂಕಿನ ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಾಯಪುರ ಕೊಪ್ಪಲು ಸೇರಿ ಸುತ್ತಲಿನ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ 50 ಲಕ್ಷ ರೂ. ವೆಚ್ಚದ ಕಾಂಕ್ರೀಟ್ ರಸ್ತೆ ಕಾಮಗಾರಿಗೆ ಭಾನುವಾರ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಪ್ರಥಮವಾಗಿ ಕ್ಷೇತ್ರದಲ್ಲಿರುವ ಗ್ರಾಮೀಣ ಪ್ರದೇಶದ ಜನರಿಗೆ ಉತ್ತಮ ಮೂಲಸೌಕರ್ಯ ಒದಗಿಸುವುದು ಹಾಗು ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿಪಡಿಸಿದರೆ ಸಾರ್ವಜನಿಕರು ಮತ್ತು ರೈತರ ಸಂಚಾರಕ್ಕೆ ಸುಲಭವಾಗುತ್ತದೆ. ಜೊತೆಗೆ



ರೈತರು ತಾವು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಲು ಸಹಕಾರಿಯಾಗುತ್ತದೆ ಎಂದರು.

ಮುಂದಿನ ದಿನಗಳಲ್ಲಿ ತಾಲ್ಲೂಕಿನ ಪ್ರತಿ ಗ್ರಾಮಕ್ಕೂ ಗುಣಮಟ್ಟದ ರಸ್ತೆ, ಶುದ್ಧ ಕುಡಿಯುವ ನೀರು ಮತ್ತು ವಿದ್ಯುತ್ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಗ್ರಾಮಗಳ ಅಭಿವೃದ್ಧಿ ಕೆಲಸಗಳನ್ನು ಮಾಡುವ ಸಂದರ್ಭದಲ್ಲಿ ಸಾರ್ವಜನಿಕರ ಸಹಕಾರ ಅಗತ್ಯ. ಜನರೇ ಮುಂದೆ ನಿಂತು ತಮ್ಮ ಗ್ರಾಮಗಳ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕೆಂದರು. ಬಂಟೇನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಧನಂಜಯ, ಮುಖಂಡರಾದ ಅಣ್ಣೇಗೌಡ, ನಾಗರಾಜ್, ಸಂತೋಷ್ ಇತರರಿದ್ದರು.

# ಬರಹಳ್ಳಕ್ಕೆ ಸೇರುತ್ತಿದೆ ಜಾವಗಲ್ ಕೆರೆ ನೀರು

## ನಾಲೆಯಲ್ಲಿ ಗಿಡಗಂಟಿ ಬೆಳೆದ ಪರಿಣಾಮ | ಸ್ಥಳಕ್ಕೆ ಮಾಜಿ ಸಚಿವ ಬಿ.ಶಿವರಾಮ್ ಭೇಟಿ

• ಪ್ರಜೋದಯ ವರದಿ

**ಜಾವಗಲ್:** ಇಲ್ಲಿನ ದೊಡ್ಡಕೆರೆಯ ಅಧಿಕ ನೀರು ಹರಿಸುವ ನಾಗಲಾಪುರ ಕಟ್ಟೆಯಿಂದ ಜಾವಗಲ್ ದೊಡ್ಡಕೆರೆ ವರೆಗಿನ ನಾಲೆಯು ದುರಸ್ತಿಗೀಡಾಗಿ ಜಾವಗಲ್ ಕೆರೆ ತಲುಪಬೇಕಿದ್ದ ನೀರು ಬರಹಳ್ಳದ ಮೂಲಕ ಬೇರೆ ಕಡೆಗೆ ಹರಿಯುತ್ತಿದೆ.

ಸಾರ್ವಜನಿಕರ ದೂರು ಆಧರಿಸಿ ಭಾನುವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಮಾಜಿ ಸಚಿವ ಬಿ.ಶಿವರಾಮ್ ಅವರು, ಕಳೆದ 8-10 ದಿನಗಳಿಂದ ಭಾರೀ ಮಳೆ ಬಿದ್ದ ಪರಿಣಾಮ ಹಾಗು ದೊಡ್ಡ ಕೋಡಿಹಳ್ಳಿ ಕೆರೆ ಕೋಡಿ ಬಿದ್ದಿರುವುದರಿಂದ ನೀರು ನಾಗಲಾಪುರ ಕಟ್ಟೆಯ ಮೂಲಕ ಜಾವಗಲ್ ಕೆರೆಗೆ ಹರಿದು ಬರುತ್ತಿದೆ. ನಾಗಲಾಪುರ ಕಟ್ಟೆಯಿಂದ ಜಾವಗಲ್



ದೊಡ್ಡಕೆರೆ ವರೆಗಿನ 3 ಕಿ.ಮೀ. ಫೀಡರ್ ಚಾನೆಲ್ (ನಾಲೆ) ಗಿಡಗಂಟಿಗಳಿಂದ ತುಂಬಿದ್ದು, ನೀರು ಸರಾಗವಾಗಿ ಹರಿಯದೇ ಬರಹಳ್ಳಕ್ಕೆ, ಖಲಂದರ್ ನಗರ, ಗಾಂಧಿನಗರ, ಹೌಸಿಂಗ್ ಬೋರ್ಡ್ ಕಾಲೋನಿಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾನಿ ಉಂಟಾಗಿದೆ.

ತಗ್ಗು ಪ್ರದೇಶದಲ್ಲಿನ ಮನೆಗಳಿಗೆ ನೀರು ನುಗ್ಗುತ್ತಿದ್ದು ತೊಂದರೆಯಾಗಿದೆ. ಹೌಸಿಂಗ್ ಬೋರ್ಡ್ ಕಾಲೋನಿ ಹಿಂಭಾಗದಿಂದ ಪ್ರಾರಂಭಗೊಳ್ಳುವ ಜಾವಗಲ್ ದೊಡ್ಡಕೆರೆಗೆ ಬರುವ ನಾಲೆಗೆ ಅಡ್ಡಲಾಗಿ ತಡೆಗೋಡೆ ಇಟ್ಟಿದ್ದು, ಶೌಚಾಲಯಕ್ಕೆ ಗುಂಡಿಗಳನ್ನು ಕಟ್ಟಿಸಿಕೊಳ್ಳದೆ ಚಾನಲ್‌ಗೆ ನೇರವಾಗಿ ಸಂಪರ್ಕ ನೀಡಿರುವುದು, ಅಕ್ಕಪಕ್ಕ ಒತ್ತುವರಿ ಮಾಡಿ ಮನೆಗಳನ್ನು ನಿರ್ಮಿಸಿ ಕೊಂಡಿರುವುದೇ ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದೆ ಸಮಸ್ಯೆಯುಂಟಾಗುತ್ತಿದೆ ಎಂಬುದನ್ನು ಮಾಜಿ ಸಚಿವರ ಗಮನಕ್ಕೆ ತರಲಾಗಿ ಸ್ಥಳಗಳಿಗೆ ಬಿ. ಶಿವರಾಮ್ ಭೇಟಿ ನೀಡಿ ಪರಿಶೀಲಿಸಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಣ್ಣ ನೀರಾವರಿ ಇಲಾಖೆಯ ಎಇಇ ರವರಿಗೆ ದೂರವಾಣಿ ಕರೆ ಮಾಡಿ ತ್ವರಿತವಾಗಿ ಗಿಡಗಂಟಿ, ಹೂಳು ತೆಗೆಸಿ ಜಾವಗಲ್ ಕೆರೆ ತುಂಬಿಸುವ ಪ್ರಯತ್ನ ಮಾಡಬೇಕೆಂದು ತಿಳಿಸಿದರು.

ಕಾರ್ಯಪ್ರವೃತ್ತರಾದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರವಿ, ಸಣ್ಣ ನೀರಾವರಿ ಇಲಾಖೆ ಎಇಇ ಸುಂದರರಾಜು ಮತ್ತು ಸಿಬ್ಬಂದಿ ಜೆಸಿಬಿ, ಹಿಟ್ಯಾಚಿ ಮೂಲಕ ಗಿಡಗಂಟಿಗಳ ನಿರ್ಮೂಲನೆ, ಹೂಳು ತೆಗೆದು ನಾಲೆಯ ಮೂಲಕ ನೀರು ಸರಾಗವಾಗಿ ಹರಿದು ಜಾವಗಲ್ ದೊಡ್ಡಕೆರೆ ತುಂಬಿಸುವಲ್ಲಿ ಸಫಲರಾದರು.

» ನಾಲ್ಕನೇ ಪುಟದಲ್ಲಿ

# ಧರ್ಮ ಪರಿಪಾಲನೆ ಅಗತ್ಯತೆ ಹೆಚ್ಚಿದೆ: ರಂಭಾಪುರಿ ಶ್ರೀ

• ಪ್ರಜೋದಯ ವರದಿ

**ಹಾಸನ:** ಧರ್ಮ ಮತ್ತು ಸಂಸ್ಕೃತಿ ಪರಿಪಾಲನೆಯಿಂದ ಒಳ್ಳೆಯ ಸಮಾಜ ಕಟ್ಟಲು ಸಾಧ್ಯವಿದ್ದು, ಅದರ ಅಗತ್ಯತೆ ಹೆಚ್ಚಿದೆ ಎಂದು ಶ್ರೀಮದ್ ರಂಭಾಪುರಿ ಪೀಠದ ಪ್ರಸನ್ನ ರೇಣುಕಾ ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಸ್ವಾಮೀಜಿ ಅವರು ಹೇಳಿದರು.

ಕಟ್ಟಾಯ ಹೋಬಳಿ ಮುಟ್ಟನಹಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಬಸವೇಶ್ವರಸ್ವಾಮಿ ದೇವಸ್ಥಾನದ ಪ್ರತಿಷ್ಠಾಪನೆ ಹಾಗು ಬ್ರಹ್ಮ ಕಳಸೋತ್ಸವ ಅಂಗವಾಗಿ ನಡೆದ ಅಡ್ಡ ಪಲ್ಲಕ್ಕಿ ಉತ್ಸವ, ಧಾರ್ಮಿಕ ಜಾಗೃತಿ ಸಭೆಯಲ್ಲಿ ಆಶೀರ್ವಚನ ನೀಡಿದ ಅವರು, ಮನುಷ್ಯನಲ್ಲಿ ಶಾಂತಿ



ಇಲ್ಲದಿರುವುದನ್ನು ನೋಡಿದರೆ ಧರ್ಮ ಸಂಸ್ಕೃತಿ ಪರಿಪಾಲನೆಯಾಗುತ್ತಿದೆ ಎಂಬುದು ವೇದ್ಯವಾಗುತ್ತದೆ. ಜೀವನದ ಉನ್ನತಿಗೆ ಧರ್ಮ ಸಂಸ್ಕೃತಿಗಳು ನೇರವಾಗುತ್ತವೆ. ಆದರ್ಶಪ್ರಾಯವಾದ ಜೀವನ ನಡೆಸುವುದು ಅಗತ್ಯವಿದೆ. ಸೌಹಾರ್ದತೆಯಿಂದ ಎಲ್ಲಾ ಸಮುದಾಯದ ಬೆಳವಣಿಗೆಗೆ ಆಡಳಿತ ನಡೆಸುವವರು ಯೋಚಿಸಬೇಕು. ಜಾತಿ ಜಾತಿಗಳಲ್ಲಿಯೇ ಅಸಮಾಧಾನ ಉಂಟಾಗದಂತೆ ತಡೆಯಬೇಕು. ಎಲ್ಲಾ ವರ್ಗದವರ ಪ್ರಗತಿಗೆ ಶ್ರಮಿಸಬೇಕೆಂದರು.

ಸಂಸದ ಕೋಟಾ ಶ್ರೀ ನಿವಾಸ ಪೂಜಾರಿ ಅವರ ಸಹಾಕಾರದಿಂದ ಬಸವೇಶ್ವರ ದೇವಸ್ಥಾನ ರೂಪು ಪಡೆದಿದ್ದು ಧಾರ್ಮಿಕ ಕಾರ್ಯಚಟುವಟಿಕೆಗೆ ವರದಾನವಾಗಿದೆ ಎಂದರು. ಮುಟ್ಟನಹಳ್ಳಿ ಅವಧೂತರಾದ ಪ್ರವೀಣ್ ಗೂರೂಜಿ ಅವರು ಮಾತನಾಡಿ, ಹಿಂದಿನ ಬಿಜೆಪಿ ಸರ್ಕಾರದ ಸಹಾಯಧನದಿಂದ ದೇವಸ್ಥಾನ ನಿರ್ಮಿಸಲು ಸಾಧ್ಯವಾಗಿದೆ ಎಂದರು.

» ನಾಲ್ಕನೇ ಪುಟದಲ್ಲಿ

## ಅ.28 ರಂದು ಸುವರ್ಣ ಮಹೋತ್ಸವ

**ಹಾಸನ :** ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಮೈದಾನದಲ್ಲಿ ಅ.28 ರಂದು ಮಧ್ಯಾಹ್ನ 2 ಗಂಟೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಂಸ್ಥಾಪನೆಗೊಂಡು 50 ವರ್ಷಗಳಾದ ಹಿನ್ನಲೆಯಲ್ಲಿ ಸುವರ್ಣ ಮಹೋತ್ಸವವನ್ನು ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ, ಇಂಧನ ಸಚಿವರೂ ಆದ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ ಜಾರ್ಜ್ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಕಾರ್ಯಕ್ರಮ ಉದ್ಘಾಟನೆ ಮಾಡಲಿದ್ದಾರೆ.

# ನಗರದಲ್ಲಿ ಆರ್‌ಎಸ್‌ಎಸ್ ಆಕರ್ಷಕ ಪಥ ಸಂಚಲನ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಸ್ವಯಂ ಸೇವಕ ಸಂಘ ನೂರು ವರ್ಷ ಪೂರೈಸಿದ ಹಿನ್ನಲೆ ನಗರದಲ್ಲಿ ಭಾನುವಾರ ಮಳೆ ನಡೆಯುವೆಯೂ ಆಕರ್ಷಕ ಪಥ ಸಂಚಲನ ನಡೆಯಿತು.

ನಗರದ ಹುಣಸಿನಕೆರೆ ರಸ್ತೆಯ ಕಾಶಿ ವಿಶ್ವನಾಥ ದೇವಾಲಯ ಬಳಿಯಿಂದ ಡಾಕ್ಟರ್ ಜೀ ಪಥ, ಸಂಗಮೇಶ್ವರ ಬಡಾವಣೆಯಿಂದ ಭಾರತಾಂಬೆ ಪಥ, ರವೀಂದ್ರ ನಗರದ ಬಿಜಿಎಸ್ ಆಂಗ್ಲ ಮಾಧ್ಯಮ ಶಾಲೆಯಿಂದ ಗುರೂಜಿ ಪಥ ಸಾಗಿಬಂದು ಸಹ್ಯಾದ್ರಿ ವೃತ್ತದ ಬಳಿ ಏಕಕಾಲಕ್ಕೆ ಸಂಗಮವಾದವು. ನಂತರ ಮಹಾವೀರ ವೃತ್ತ, ಕಸ್ತೂರ ಬಾ ರಸ್ತೆ, ದೇವಿಗೆರೆ, ನಗರ ಸಾರಿಗೆ ಬಸ್ ನಿಲ್ದಾಣ, ಹೇಮಾವತಿ ಪ್ರತಿಮೆ ಮುಂಭಾಗ ಬಂದು ಗಂಧದ ಕೋಠಿ ರಸ್ತೆ ಬಳಿ ಸಮಾಪ್ತಿಯಾಯಿತು. ರಸ್ತೆಯುದ್ದಕ್ಕೂ ರಂಗೋಲಿ ಬಿಡಿಸಿ, ಪುಷ್ಪ ವೃಷ್ಟಿ ಮೂಲಕ ಪಥ ಸಂಚಲನ ಸ್ವಾಗತಿಸಲಾಯಿತು. ರಸ್ತೆ ಬದಿ ನಿಂತವರು ಭಾರತ್ ಮಾತಾ ಕೀ ಜೈ,



» ನಾಲ್ಕನೇ ಪುಟದಲ್ಲಿ

# ಶಿಕ್ಷಣವಿದ್ದರೂ ಅಲ್ಪನಾಗುತ್ತಿರುವ ಮನುಷ್ಯ: ಶಂಭುನಾಥ ಶ್ರೀ




• ಪ್ರಜೋದಯ ವರದಿ

**ಶ್ರವಣಬೆಳಗೊಳ:** ಶಿಕ್ಷಣವಿದ್ದರೂ ವಿನಯ, ಜ್ಞಾನವಿಲ್ಲದೆ ಮನುಷ್ಯ ಅಲ್ಪ ಮಾನವನಾಗಿ ಬದಲಾಗುತ್ತಿದ್ದಾನೆಂದು ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಮಹಾ ಪೋಷಕರೂ ಆದ ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಅವರು ಹೇಳಿದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್‌ನಿಂದ ಭಾನುವಾರ ಪಟ್ಟಣದ ಗಣ್ಯರ ಅತಿಥಿ ನಿವಾಸದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾಧ್ಯಕ್ಷರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಸಾಹಿತ್ಯಕ್ಕೆ ಧರ್ಮ, ಜಾತಿ ಹಾಗು ಭಾಷೆ ಎಂಬ ಬೇಧವಿಲ್ಲ. ಕಿವಿಗೆ ಕೇಳಿಸುವ ಹಿತವಾದ ಪದಗಳೆಲ್ಲವೂ ಸಾಹಿತ್ಯವೇ ಆಗಿರುತ್ತದೆ ಎಂದರು.

ಹುಟ್ಟಿದಾಗ ವಿಶ್ವಮಾನವ ಎನಿಸಿಕೊಂಡವನು ಬೆಳೆ ಬೆಳೆಯುತ್ತ ಅಲ್ಪ ಮಾನವನಾಗುತ್ತಿದ್ದಾನೆ. ಶಿಕ್ಷಣವಿದ್ದರೂ ಜ್ಞಾನದ ಅರಿವಿಲ್ಲದೆ ದುರಾಸೆಯೊಂದಿಗೆ ಅಸೂಯೆ ಹೊಂದಿದ್ದು, ಮಾನವೀಯ ಮೌಲ್ಯಗಳನ್ನು ಬದಿಗೊತ್ತಿರುವುದೇ ಅದಕ್ಕೆ ಪ್ರಮುಖ ಕಾರಣವಾಗಿದೆ. ನಾಡು-ನುಡಿ, ನೆಲ-ಜಲ ಹಾಗು ಭಾಷೆಯ ಜೊತೆಗೆ ಸಾಹಿತ್ಯ ಭಾವನೆ ಮೂಡಿಸುವ ಮೂಲಕ ಕತ್ತಲೆಯಿಂದ ಬೆಳಕಿನೆಡೆಗೆ ಕೈ ಹಿಡಿದು ನಡೆಸುವುದೇ ಪರಿಷತ್‌ನ ಉದ್ದೇಶವೆಂದರು.

ಶಾಸಕ ಸಿ.ಎನ್.ಬಾಲಕೃಷ್ಣ ಅವರು ಮಾತನಾಡಿ, ಮಕ್ಕಳಲ್ಲಿ ಸಾಹಿತ್ಯ ಅಭಿರುಚಿ ಬೆಳೆಸುವ ಮೂಲಕ ನಾಡು-ನುಡಿ ಹಾಗು ಭಾಷಾ ಸಾಹಿತ್ಯದ ನೆಲೆಗಟ್ಟನ್ನು ತಳಮಟ್ಟದಿಂದ ಸುಭದ್ರವಾಗಿ ಕಟ್ಟುವಲ್ಲಿ ಮಕ್ಕಳ ಸಾಹಿತ್ಯ ಪರಿಷತ್‌ನ ಕಾರ್ಯವೈಖರಿ ಶ್ಲಾಘನೀಯವೆಂದು ಮೆಚ್ಚುಗೆ ವ್ಯಕ್ತಪಡಿಸಿ, ಶೈಕ್ಷಣಿಕ ವ್ಯವಸ್ಥೆಯಲ್ಲಿ ವ್ಯಾಕರಣ ಬದ್ಧ ಕನ್ನಡಕ್ಕೆ ಹೆಚ್ಚು ಆದ್ಯತೆ ನೀಡಬೇಕು. ವ್ಯವಹಾರಿಕ ಸಲುವಾಗಿ ಮಾತ್ರ ಆಂಗ್ಲ, ಹಿಂದಿ ಹಾಗು ಇತರೆ ಭಾಷೆಗಳ ಬಳಕೆ ಇರಲಿ. ಆದರೆ ಸದಾಕಾಲ ಮಾತೃ ಭಾಷೆಗೆ ಹೆಚ್ಚಿನ ಆದ್ಯತೆ ನೀಡಬೇಕೆಂದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್‌ನ ಯಾವ

» ನಾಲ್ಕನೇ ಪುಟದಲ್ಲಿ

# ಹರಿಹಳ್ಳಿ ಶ್ರೀ ಕೆಂಚಾಂಬಿಕೆ ಚಿಕ್ಕ ಜಾತ್ರೆ ಸಂಪನ್ನ

• ಪ್ರಜೋದಯ ವರದಿ

**ಆಲೂರು :** ಲಕ್ಷಾಂತರ ಭಕ್ತರಿಗೆ ದರ್ಶನ ನೀಡಿದ ಹಾಸನಾಂಬ ದೇವಿಯ ಹಿರಿಯ ಸಹೋದರಿ ಶ್ರೀ ಕೆಂಚಾಂಬಿಕೆ ದೇವಿ ಚಿಕ್ಕ ಜಾತ್ರೆ ವೈಭವದಿಂದ ಹರಿಹಳ್ಳಿ ಗ್ರಾಮದಲ್ಲಿ ಭಾನುವಾರ ನೆರವೇರಿತು.

ಹರಿಹಳ್ಳಿ ಗ್ರಾಮದ ಮೂಲ ದೇವಸ್ಥಾನದಲ್ಲಿ ಶನಿವಾರ ಸಂಜೆ ಮೂಲ ದೇವಸ್ಥಾನದಲ್ಲಿ ಸಪ್ತಮಾತೃಕೆಯರಿಗೆ ಅಲಂಕಾರ ಮಾಡಿ ದೇವಿಯರನ್ನು ಆಗಮನ ಮಾಡಿಕೊಂಡು ಉದ್ವಾರ್ಚನೆ ಪೂಜೆ ಸಲ್ಲಿಸಲಾಯಿತು. ನೆರೆದಿದ್ದ ಭಕ್ತರು ಸುಗ್ಗಿ ಕುಣಿದು ಕುಪ್ಪಳಿಸಿದರು.

ಭಾನುವಾರ ಬೆಳಿಗ್ಗೆ 8 ಗಂಟೆಗೆ ಮೂಲ ದೇವಸ್ಥಾನದಲ್ಲಿ ಪ್ರಾರಂಭಿಕ ಪೂಜೆ ಸಲ್ಲಿಸಿದ ನಂತರ, ಕೆಂಚಾಂಬಿಕೆ ದೇವಿಗೆ ಅಲಂಕರಿಸುವ ಒಡವೆಗಳ ಪೆಟ್ಟಿಗೆಯನ್ನು ಪ್ರಧಾನ ಅರ್ಚಕ ರಾಮಸ್ವಾಮಿಯವರು ಹೊತ್ತುಕೊಂಡರು. ಮೂಲ ದೇವಸ್ಥಾನದಿಂದ ಹೊರಟ ಮೆರವಣಿಗೆ ಛತ್ರ, ಚಾಮರ, ಪಟ ಸಹಿತ ದೇವಿಯ ಒಡವೆ ಪೆಟ್ಟಿಗೆ, ಪಾದಗಳು, ಮುಖವಾಡ, ದಂಡ, ಹೂವಿನ ಹೆಡಿಗೆ, ಉತ್ಸವ ದೇವರ ಸಹಿತ ಹೊರಟ ಮೆರವಣಿಗೆಯಲ್ಲಿ ಭಕ್ತಾದಿಗಳ ಜಯಘೋಷ, ಪೆಟ್ಟಿಗೆಗೆ



ಆರತಿ, ಈಡುಗಾಯಿ, ಹೂ ಸುರಿಮಳೆಯೊಂದಿಗೆ ಸುಮಾರು 10.30 ಕ್ಕೆ ಬನಕ್ಕೆ ಬಂದು ಸೇರಿತು.

ನಂತರ ಕೆಂಚಾಂಬಿಕೆ ದೇವಿಗೆ ಅಲಂಕಾರ ಮಾಡಿ ಅಭಿಷೇಕ, ಕುಂಕುಮಾರ್ಚನೆ ನಡೆದು ಮಧ್ಯಾಹ್ನ 1.30 ಕ್ಕೆ ಬಲಿಪ್ರದಾನ ಮಾಡಲಾಯಿತು. ಮಹಾ ಮಂಗಳಾರತಿ ನಂತರ ನೆರೆದಿದ್ದ ಭಕ್ತರಿಗೆ ದೇವಿ ಪಾದ ಮುಟ್ಟಿ ನಮಸ್ಕರಿಸಲು ಅನುಕೂಲ ಕಲ್ಪಿಸಲಾಯಿತು. ರಾತ್ರಿ 10 ಗಂಟೆವರೆಗೆ ಪಾದ ಮುಟ್ಟಿ ನಮಸ್ಕರಿಸಲು ಅವಕಾಶ ಕಲ್ಪಿಸಲಾಗಿತ್ತು. ನಂತರ ಪೂಜೆ ನೆರವೇರಿಸಿ ದೇವಸ್ಥಾನದ ಬಾಗಿಲು ಮುಚ್ಚಲಾಯಿತು. ಜಾತ್ರೆಯಲ್ಲಿ



ಕಡ್ಲೆಪುರಿ, ಮಡಕೆ ವ್ಯಾಪಾರ ವಿಶೇಷವಾಗಿದ್ದು, ಭಕ್ತಾದಿಗಳು ವಿಶೇಷವಾಗಿ ಕೊಂಡು ಹೋಗುತ್ತಾರೆ.

ರಾತ್ರಿ ವೇಳೆಯಲ್ಲಿ ದೇವಿ ದೇವಸ್ಥಾನದ ಆಜುಬಾಜಿನಲ್ಲಿ ಸಂಚರಿಸುತ್ತಿರುತ್ತಾಳೆಂಬ ಕಾರಣದಿಂದ ಒಂದು ವಾರದವರೆಗೆ ದೇವಸ್ಥಾನದ ಆಸುಪಾಸಿನಲ್ಲಿ ಯಾರೂ ಓಡಾಡುವುದಿಲ್ಲ. ಒಂದು ವಾರದ ನಂತರ ನ.2 ರಂದು ಪುಣ್ಯಾಹ, ಸಂಪ್ರೋಕ್ಷಣೆ ನಂತರ



ದೇವಸ್ಥಾನದ ಬಾಗಿಲು ತೆರೆಯುವ ಜಾತ್ರೆ ನಡೆಯುತ್ತದೆ.

ಶಾಸಕ ಸಿಮೆಂಟ್ ಮಂಜು, ತಹಸೀಲ್ದಾರ್ ಮಲ್ಲಿಕಾರ್ಜುನ, ಪೊಲೀಸ್ ಇನ್ಸ್‌ಪೆಕ್ಟರ್ ಮೋಹನ್ ರೆಡ್ಡಿ, ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಹೆಚ್.ಡಿ.ರಘು, ಸಾಹಿತಿ ಹೆಚ್. ಎನ್. ಸತ್ಯನಾರಾಯಣ ಸೇರಿ ಸಾವಿರಾರು ಭಕ್ತರು ದೇವಿ ದರ್ಶನ ಮಾಡಿ ಪುನೀತರಾದರು.

ಹರಿಹಳ್ಳಿ ವಿಪ್ರಮಹಾಕೂಟ ಸಹಯೋಗದಲ್ಲಿ ಕೆಂಚಾಂಬ ಅನ್ನದಾಸೋಹ ಸಮಿತಿ ವತಿಯಿಂದ ಅನ್ನಸಂತರ್ಪಣೆ ನಡೆಯಿತು. ತಾಲ್ಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆ ವತಿಯಿಂದ ಭಕ್ತರಿಗೆ ದೇವಿ ದರ್ಶನ ಮಾಡಲು ಸೂಕ್ತ ವ್ಯವಸ್ಥೆ ಬಂದೋಬಸ್ತ್ ಕಲ್ಪಿಸಲಾಗಿತ್ತು.

## ದೇವಾಲಯ ಬೀಗ ಮುರಿದು ಚಿನ್ನ-ಬೆಳ್ಳಿ ಕಳ್ಳತನ

**ಚನ್ನರಾಯಪಟ್ಟಣ:** ದೇವಸ್ಥಾನ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 1.30 ಲಕ್ಷ ರೂ. ಬೆಲೆಯ ಚಿನ್ನ ಹಾಗು ಬೆಳ್ಳಿ ಸಾಮಾಗ್ರಿಗಳನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಮಡಬ ಗ್ರಾಮದಲ್ಲಿ ನಡೆದಿದೆ.

ಊರಿನ ಬೆಂಕಿ ಆಂಜನೇಯಸ್ವಾಮಿ ದೇವಾಲಯಕ್ಕೆ ಅ.17ರಂದು ರಾತ್ರಿ ಪ್ರವೇಶಿಸಿರುವ ಕಳ್ಳರು ದೇವಸ್ಥಾನದ ಬಾಗಿಲ ಬೀಗ ಮುರಿದು ದೇವರ ಮುಖಕ್ಕೆ ಹಾಕಿದ್ದ ಬೆಳ್ಳಿ ಮುಖವಾಡ, 1-1/4 ಕೆಜಿ, ಬೆಳ್ಳಿ ಲಿಂಗ ಮತ್ತು ಬೆಳ್ಳಿ ಪಟ್ಟಿ 200 ಗ್ರಾಂ, 4 ಬೆಳ್ಳಿ ಛತ್ರಿ 300 ಗ್ರಾಂ, 10 ಗ್ರಾಂ ಇರುವ 2 ಚಿನ್ನದ ಓಲೆ, 10 ಗ್ರಾಂನ ಮೂಗುನತ್ತು ಕಳವು ಮಾಡಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## 4.50 ಲಕ ರೂ. ಬೆಲೆಯ ಚಿನ್ನಾಭರಣ ಕಳವು

**ಅರಸೀಕೆರೆ:** ಬಸ್ ಹತ್ತುತ್ತಿದ್ದಾಗ ಮಹಿಳೆ ಗಮನಕ್ಕೆ ಬಾರದಂತೆ ಬ್ಯಾಗ್‌ನಲ್ಲಿದ್ದ 4.50 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕದ್ದಿರುವ ಘಟನೆ ಬಸ್ ನಿಲ್ದಾಣದಲ್ಲಿ ನಡೆದಿದೆ.

ಹಾಸನದ ವಿವೇಕ ನಗರ ನಿವಾಸಿ ರತ್ನಬಾಯಿ ಚಿನ್ನಾಭರಣ ಕಳೆದುಕೊಂಡವರು. ಅವರು ಅ.24 ರಂದು ಹಾಸನಕ್ಕೆ ತೆರಳುವ ಬಸ್ ಹತ್ತುತ್ತಿದ್ದಾಗ ಘಟನೆ ನಡೆದಿದೆ. ಬಸ್ ನಿರ್ವಾಹಕ ಟಿಕೆಟ್ ಕೊಡಲೆಂದು ಬಂದಾಗ ಆಧಾರ್ ಕಾರ್ಡ್ ತೋರಿ ಸಲು ಬ್ಯಾಗ್ ಪರಿಶೀಲಿಸಿದಾಗ ಚಿನ್ನಾಭರಣ ಕಳುವಾಗಿರುವುದು ಗೊತ್ತಾಗಿದೆ. ನೂಕಾಟದಲ್ಲಿ ಯಾರೋ ಕಳ್ಳರು 15 ಗ್ರಾಂ ತೂಕದ ಚಿನ್ನದ ಜುಮುಕಿ ಓಲೆ, 19 ಗ್ರಾಂ ತೂಕದ ಚಿನ್ನದ ಸರ, 12 ಗ್ರಾಂ ತೂಕದ ಮಗುವಿನ ಚಿನ್ನದ ಸರ ಕಳವು ಮಾಡಿದ್ದಾರೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

CMYK CMYK CMYK CMYK

# ಕಂಡೆಕ್ಟರ್ ನಮ್ಮ ಫ್ರೆಂಡೇ ಅಲ್ವಾ !




**ಅ**ವನು ಆ ಹಳ್ಳಿಯ ಸೋಮಾರಿ ಕಟ್ಟೆಯ ಖಾಯಂ ಸದಸ್ಯ. ಒಂದು ತರದಲ್ಲಿ ಆ ಕಟ್ಟೆಯ ಬಳಗದ ಅಧ್ಯಕ್ಷನೇ ಇದ್ದಂತೆ! ಮಾತುಗಾರಿಕೆಯಲ್ಲಿ ಬಲು ನಿಪುಣ. ಒಂದು ಸತ್ಯಕ್ಕೆ ಒಂಬತ್ತು ಸುಳ್ಳು ಪೋಣಿಸಿ ಹೇಳುತ್ತಿದ್ದ ಅವನ ಮಾತನ್ನು ಇತರ ಜನ ಕಣ್ಣುಬಾಯಿ ಬಿಟ್ಟುಕೊಂಡು ಕೇಳುತ್ತಿದ್ದರು.

ಹಾಗಾಗಿ ರಾಮೇಗೌಡನೆಂಬ ಹೆಸರಿನ ಅವನು ಬೊಗಳೆ ರಾಮ ಎಂಬುದಾಗಿ ಪ್ರಸಿದ್ಧನಾಗಿದ್ದ. ಅವನ ಮಾತಿನ ಮೋಡಿಗೆ ಒಳಗಾಗಿದ್ದ ಕಟ್ಟೆಯ ಜನ ಅವನೇನಾದರೂ ಕಟ್ಟೆಗೆ ಬರುವುದು ತಡವಾದಲ್ಲಿ ಚಡಪಡಿಸುತ್ತಿದ್ದರು.

ವಿದುರನಾಗಿದ್ದ ಅವನು ಮನೆ ವ್ಯವಸಾಯದ ಕೆಲಸದಲ್ಲಿ ಭಾಗವಹಿಸದೆ ವಾರದ ಸಂತೆ. ಹತ್ತಿರದ ನೆಂಟರ ಮನೆ ಅಲ್ಲಿ ಇಲ್ಲಿ ತಿರುಗಾಡಿಕೊಂಡು ಕಾಲ ಹಾಕುತ್ತಿದ್ದ. ಮಗ ಸೊಸೆಯರು ಅವನನ್ನು ಉಪೇಕ್ಷೆ ಮಾಡಿ ಬಿಟ್ಟಿದ್ದರು. ಬೀಡಿ ಖರ್ಚಿಗಾಗುವಷ್ಟು ದುಡ್ಡನ್ನು ಹೇಗೋ ಸಂಪಾದಿಸಿಕೊಳ್ಳುತ್ತಿದ್ದ ಅವನು, ಕೆಲವೊಮ್ಮೆ ಆಗಾಗ ಸಣ್ಣಪುಟ್ಟ ಕೈಸಾಲಗಳನ್ನು ಮಾಡಿಕೊಳ್ಳುತ್ತಿದ್ದ.

ಮನೆಯವರು ಗದರಿಸಿದರೆ ಮುನಿಸಿಕೊಂಡು ಒಂದೆರಡು ದಿನ ಯಾವುದಾದರೂ ನೆಮಟರ ಮನೆಗೆ ಹೋಗಿ ಇದ್ದು ವಾತಾವರಣ ತಿಳಿಯಾದ ಮೇಲೆ ಹಿಂತಿರುಗಿ ಬರುತ್ತಿದ್ದ.

ಅವತ್ತು ಪಕ್ಕದ ಊರಿನಲ್ಲಿ ಸಂತೆ. ಅಲ್ಲಿಗೆ ಎಂದಿನಂತೆ ಹೋದವನು ಸಂಜೆ ಮಾಮೂಲಿ ಸಮಯಕ್ಕೆ ಬಂದಿರಲಿಲ್ಲ. ಅವನಿಲ್ಲದೆ ಸೋಮಾರಿಕಟ್ಟೆ ಭಣಗುಡುತ್ತಿತ್ತು. ಸಹ ಸದಸ್ಯರು ಕಾತುರರಾಗಿ ಅವನಿಗಾಗಿ ಕಾಯುತ್ತಾ ಕುಳಿತಿದ್ದರು.

ಸಂತೆಯ ಸಮೀಪದ ಹೋಟೆಲಿನವನ ಬಳಿ ಸ್ವಲ್ಪ ಕೈಸಾಲ ಮಾಡಿಕೊಂಡಿದ್ದ ಅವನು ತಪ್ಪಿಸಿಕೊಂಡು ತಿರುಗಾಡುತ್ತಿದ್ದ. ಅಂದು ಸಂತೆಯೊಳಗೆ ತಿರುಗಾಡುವಾಗ ಅಕಸ್ಮಾತ್ ಹೋಟೆಲಿನವನು ಎದುರಾಗಿದ್ದ. ಎಷ್ಟು ಪ್ರಯತ್ನಿಸಿದರೂ ಸಬೂಬು ಹೇಳಿ ನುಣುಚಿಕೊಳ್ಳಲು ಸಾಧ್ಯವಾಗಲಿಲ್ಲ. ಹೋಟೆಲಿನವನೂ ಚಾಣಾಕ್ಷ. ಬಾ ಎಂದು ಅವನನ್ನು ತನ್ನ ಹೋಟೆಲಿನ ಬಳಿ ಕರೆದುಕೊಂಡು ಹೋದ. ಕೂರಿಸಿ ಅರ್ಧ ಕಪ್ ಟೀ ಕೊಟ್ಟು ಒಳಗೆ ಹೋಗಿ ಕೊಡಲಿಯೊಂದನ್ನು ತಂದು ಅವನ ಮುಂದಿಟ್ಟು ಆ ಸೌದೆಯನ್ನೊಂದಿಷ್ಟು ಒಡೆದು ಕೊಟ್ಟು ಹೋಗು ಎಂದ.

ಆ ಸೌದೆಯನ್ನೆಲ್ಲಾ ಸೀಳಿ ಮುಗಿಸುವಷ್ಟರಲ್ಲಿ ಸಂಜೆಯಾಗಿ ಹೋಗಿತ್ತು. ಓಡೋಡುತ್ತಲೇ ಬಂದು ಕಟ್ಟೆಯ ಬಳಿ ಸೇರುವಲ್ಲಿ ತಡವಾಗಿ ಹೋಗಿತ್ತು.

ಸಂತೆಯಿಂದ ಸ್ವಾರಸ್ಯವಾದ ಪ್ರಸಂಗವನ್ನೇನಾದರೂ ತಂದಿರುತ್ತಾನೆಂದು ಕಾತರರಾಗಿ ಕುಳಿತಿದ್ದ ಅವರ ಪೈಕಿ ಒಬ್ಬ ಏನೋ ಮಾರಾಯ, ಇಷ್ಟ್ ಹೊತ್ತು ಏನ್ಮಾಡ್ತಿದ್ದೆಯೋ ಸಂತೇಲಿ ಎಂದ.

ಅದೇನ್ಹೇಳ್ತೀರಿ, ಗುಲಾಬಿ ಗೊತ್ತಲ್ಲ, ವಾರ ವಾರ ದೂರದಿಂದ ನೆಗಾಡಿ ಹೋಗ್ತಿದ್ದವಳು ಇವತ್ತು ಎದುರಿಗೇ ಬಂದು ಕೈ ಹಿಡುಕೊಂಡು ಬಿಡೋದಾ! ಸೀದಾ ಮನೆಗೇ ಕರ್ಕೊಂಡು ಹೋಗಿ ಬಾಗಿಲು ಹಾಕಿಕೊಂಡವಳು ಎಷ್ಟ್ ಹೊತ್ತಿಗೆ ಬಾಗಿಲು ತೆರೆದಳು ಅಂತೀರಿ!. ಅವನು ಹೇಳುತ್ತಲೇ ಇದ್ದ. ಇವರೆಲ್ಲಾ ಬಾಯಿಬಿಟ್ಟುಕೊಂಡು ಕುಳಿತಿದ್ದರು.

ಹೀಗೆ ಇರಬೇಕಾದರೆ ಒಂದು ಸಲ ಮನೆಯಲ್ಲಿ ಮಾತಿಗೆ ಮಾತಾಗಿ ಹೊರ ಹೋದವನು ಎಂಟುದಿನ ಕಳೆದು ಬಂದ. ಕಟ್ಟೆ ಬಳಗದ ಸದಸ್ಯರೆಲ್ಲಾ ಏನುಎತ್ತ ಎನ್ನುತ್ತಾ ಅವನ ಮಾತಿನ ಸ್ವಾರಸ್ಯಕ್ಕಾಗಿ ಕಾದರು.

ಅವನು ದೂರದ ಊರಿನ ತನ್ನ ಅಣ್ಣನ ಮಗಳ ಮನೆಯಲ್ಲಿದ್ದೆ ಎಂದು ಹೇಗೆ ಹೇಳುತ್ತಾನೆ! ಬೆಂಗಳೂರಿಗೆ ಹೋಗಿದ್ದೆ ಎಂದ. ಬೆಂಗಳೂರು ಹೆಸರು ಕೇಳಿಯೇ ಜನ ತಬ್ಬಿಬ್ಬಾದರು. ಅಲ್ಲಿ ಯಾರ ಮನೆಲಿದ್ದೆ ಮಾರಾಯ ಎಂದರು.

ನಮ್ಮ ಪೇಟೆಲಿ ಒಬ್ಬ ಪರಿಚಯದವನಿದ್ದ. ಅವನು ಈಗ ಬೆಂಗಳೂರಲ್ಲಿ ವಿಧಾನಸೌದ ಅಂತ ಐತೆ. ಅಲ್ಲಿ ದೊಡ್ಡ ಆಫೀಸರ್ ಆಗಿದಾನೆ. ಅವನ ಮನೆಗೆ ಹೋಗಿದ್ದೆ ಎಂದ. ಎದುರಿದ್ದವರು ಹುಬ್ಬೇರಿಸಿದರು.

ಅದೆಲ್ಲಾ ಸರಿ ಮಾರಾಯ, ಬೆಂಗ್ಳೂರೇನು ಇಲ್ಲೇ ಐತಾ? ನೂರಾರ್ ಮೈಲಿ ದೂರ, ಬಸ್ ಚಾರ್ಜ್ ಎಷ್ಟಾಗುತ್ತೆ? ಏನ್ ಕತೆ!. ಇಲ್ಲೇ ಹತ್ರ ಆದ್ರೆ ಕಂಡೆಕ್ಟ್ರು ಗುರುತಿರುವವರು. ಅವರ ಒಳಗಾಕೆಂಡ್ ಹೆಂಗೋ ಹೋಗಿ ಬುಡ್ತಿದ್ದೆ. ಎಂದ ಒಬ್ಬ.

ಇಲ್ಲಿಂದ ಪ್ಯಾಟೆಗೆ ಬಸ್ಸಲ್ಲಿ ಹೋದ್ನಾ. ಅಲ್ಲಿಂದ ರೈಲ್ ಹತ್ತಿದೆ ನೋಡು.ಎನ್ನತೊಡಗಿದಂತೆಯೇ ಎದುರಿನವರು ಎಲಾ ಇವ್ನಾ, ರೈಲಲಿ ಕೂತ್ ಬಂದಿದಾನಲ್ಲ, ದುಡ್ ಎಷ್ಟಾಗಿರಬಹುದು ಅಲ್ಲಿಯವರೆಗೂ ಹೋಗಕೆ, ಕಂಡೆಕ್ಟ್ರು ಸುಮ್ನೆ ಕರ್ಕಂಡ್ ಹೋಗ್ತಾನಾ ಎಂದು ಆಶ್ಚರ್ಯ ಚಕಿತರಾಗಿ ಅವನ ಮುಖವನ್ನೇ ನೋಡತೊಡಗಿದರು. ಒಬ್ಬ ಆ ಬಗ್ಗೆ ಕೇಳಿಯೇ ಬಿಟ್ಟ

ಅಯ್ಯೋ ಅದ್ಕೇ ನಿಮ್ಮನ್ನ ಮಲಸೀಮೆ ಮಂಗ ಅನ್ನದು. ಈ ಕೊಂಪೆ ಬಿಟ್ರೆ ನಿಮೇನ್ ಗೊತ್ತು? ರೈಲಲಿ ಏನು ಕಂಡೆಕ್ಟ್ರು ಇರ್ತರೆ ಅಂತ ತಿಳಿದೀರೇನೋ? ಮೊದ್ಲೇ ದುಡ್ ಕೊಟ್ಟು ಟಿಕೆಟ್ ತಗಂಡು ರೈಲು ಹತ್ತಿಗೆಳ್ಬೇಕು. ಮಧ್ಯದಲ್ಲಿ ಯಾರಾದ್ರೂ ಚೆಕಿಂಗಿಗೆ ಬಂದ್ರೆ ಟಿಕೆಟ್ ತೋರುಸ್ಬೇಕು ಅಷ್ಟೆ. ನನಗೆ ಐಡಿಯಾ ಗೊತ್ತಿತ್ತು. ಟಿಕೆಟ್ ತಗಳ್ದೆ ಬೋಗಿಯೊಳ್ಗೆ ಕೂತಿದ್ನಾ, ಆ ಕಡೆಯಿಂದ ಚಕಿಂಗ್‌ನವ್ರು ಬಂದ್ ಕೂಡ್ಲೆ ಈ ಕಡೆ ಕಕ್ಕಸ್ ರೂಮೊಳಗೆ ಹೋಗಿ ಕೂತ್ಕಂಡ್ ಬುಟ್ಟೆ, ಅವ್ರು ಮುಂದಿನ ಬೋಗಿಗೆ ಹೋದ ಮೇಲೆ ಮತ್ತೆ ಈಚೆಗೆ ಬಂದು ಕೂತ್ಕಂಡು ಆರಾಮಾಗಿ ಹೋದೆ ಎಂದ.

ಅವನ ಚಮತ್ಕಾರಕ್ಕೆ ಅವರೆಲ್ಲಾ ತಲೆದೂಗಿದರು. ಮತ್ತೆ ಹೇಗೋ ಮನೆಯವರ ಜೊತೆ ಹೊಂದಾಣಿಕೆ ಮಾಡಿಕೊಂಡ. ಮನೆಗೆ ಹೋಗಿ ಊಟ ಮಾಡಿಕೊಂಡು ಬರೋವಷ್ಟಕ್ಕೆ ದಾರಿ ಮಾಡಿಕೊಂಡ.

ಸೋಮಾರಿ ಕಟ್ಟೆಯವರು ಸಹಿಸಿಕೊಳ್ತಾರೆ ಅಂದ್ರೆ, ವ್ಯವಸಾಯದ ಕೆಲಸ ಮಾಡುವ ಮನೆಯವ್ರು ಕೂಳಿಗೆ ದಂಡವಾಗಿರುವ ಈ ಸೋಮಾರಿಯನ್ನು ಹೇಗೆ ಸಹಿಸಿಕೊಂಡಾರು?. ಮತ್ತೆ ಕಲಹವಾಯಿತು. ಮನೆ ಬಿಟ್ಟು ಹೋಗ್ತಿನಿ ಎಂದು ಬೆದರಿಕೆ ಹಾಕಿದ. ಹೋಗು ನಿನ್ನ ಕಟ್ಗೆಂಡು ನಮಗೇನಾಗಬೇಕು ಎಂದರು ಮನೆಯವರು.

ಆವೇಶದಲ್ಲಿ ಹೊರಟುಹೋದ. ಎಷ್ಟು ದಿನ ತಾನೇ ಅನ್ಯರ ಮನೆಯ ಹಂಗಿನಕೂಳು ನೆಚ್ಚಿಕೂರಲು ಸಾಧ್ಯ? ಇಪ್ಪತ್ತು ದಿನ ಕಳೆದಿತ್ತು. ಒಂದು ದಿನ ಸೋಮಾರಿಕಟ್ಟೆಯಲ್ಲಿ ಪ್ರತ್ಯಕ್ಷನಾದ. ಬೊಗಳೆ ರಾಮ ಇಷ್ಟು ಕಾಲ ದೀರ್ಘವಾಗಿ ಗೈರುಹಾಜರಾಗಿದ್ದು ಅದೇ ಮೊದಲು.

ಮೂಡಿಗೆಯ ಕತ್ತಲೆ ಕಾಡಿನಲ್ಲಿ ಯಾರೋ ಹಳೇ ನೆಂಟರಿದ್ದರಲ್ಲಾ ಅಲ್ಲಿಗೆ ಹೋಗಿರಬಹುದೇ? ಭಾಗಮಂಡಲದ ಹತ್ತಿರದ ಕರಿಕೆಯ ನೆಂಟರ ಮನೆಗೆ ಹೋಗಿರಬಹುದೇ? ಮುಂತಾಗಿ ಅವನ ಗೈರು ಹಾಜರಿಯಲ್ಲಿ ಜನ ವಿಧವಿಧವಾಗಿ ಮಾತಾಡಿಕೊಂಡರು.

ಕಟ್ಟೆಯ ಜನ ನಿಟ್ಟುಸಿರುಬಿಡುತ್ತಾ ಇಷ್ಟು ದಿನ ಎಲ್ಲಿಗೆ ಹೋಗಿದ್ದೆ ಮಾರಾಯ? ಎಂದು ಕಾತರರಾಗಿ ಅವನ ಮುಖವನ್ನೇ ನೋಡತೊಡಗಿದರು.

ಅಮೇರಿಕಕ್ಕೆ ಎಂದ. ಪ್ರತಿಕ್ರಿಯೆಯಾಗಿ ಅವರ ಕಣ್ಣುಗಳನ್ನೇ ದಿಟ್ಟಿಸಿದ. ಅವನ ಮಾತಿನಿಂದ ಅವರ ಮಧ್ಯ ಬಾಂಬ್ ಎಸೆದಂತೆ ಆಯಿತು.


ಹಾಸನ ಕೇಳಿದ್ರು.. ಬೆಂಗಳೂರು ಕೇಳಿದ್ರು. ಹೊರಗಿಂದ ಬಂದವರ ಬಾಯಲ್ಲಿ ಅಮೇರಿಕಾವನ್ನೂ ಕೇಳಿದ್ದರು. ಆದರೆ ಅದೆಲ್ಲೋ ಈ ಪ್ರಪಂಚದಿಂದ ಆಚೆಯೇ ಇರಬಹುದು ಎಂದುಕೊಂಡಿದ್ದರು.ಅವನು ಅಮೇರಿಕಾಕ್ಕೆ ಹೋಗಿರಲಾರ ಎಂದು ಅವರ ಮನದಲ್ಲಿ ಸಂಶಯ ಮೂಡತೊಡಗಿತು.

ಅಮೇರಿಕಾ ಅಂದರೆ ಯಾರೂ ಕಂಡು ಕೇಳರಿಯದ ದೇಶ. ಎಷ್ಟ್ ಸಾವಿರ ಮೈಲಿ ದೂರ ಆಗುತ್ತೋ? ಅಲ್ಲಿಗೆ ಹೋಗಕೆ ಬಸ್ ಚಾರ್ಜ್ ಎಷ್ಟ್ ಸಾವ್ರ ಆಗುತ್ತೋ? ಎಂದು ಒಬ್ಬ ಮೆಲ್ಲಗೆ ಸಂಶಯವನ್ನು ಹೊರಬಿಟ್ಟ.

ಹುಂ, ಅದೆಲ್ಲಾ ನಿಮ್ಗೆ ಗೊತ್ತಾಗದಿಲ್ಲ ಬುಡು ಎಂದು ರಾಮ ಹುಸಿನಗೆಯಾಡುತ್ತಾ ಗಡ್ಡ ನೀವಿಕೊಳ್ಳತೊಡಗಿದ.

**-ಹಾಡ್ಲಹಳ್ಳಿ ನಾಗರಾಜ್**

## ಟ್ರಂಪ್ ಮಾತಿಗೆ ಕಡಿವಾಣ ಸಾಧ್ಯವೇ?



**ರ**ಷ್ಯಾದಿಂದ ಭಾರತದ ತೈಲ ಖರೀದಿ ವಿಚಾರದಲ್ಲಿ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅನಿರ್ಬಂಧಿತ ಹೇಳಿಕೆ ನೀಡುತ್ತಲೇ ಇದ್ದಾರೆ. ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದ ವೇಳೆಯಿಂದ ಹಿಡಿದು, ಇಲ್ಲಿಯವರೆಗೂ ಅವರ ಹೇಳಿಕೆಗಳು ಸಾಗುತ್ತಲೇ ಇವೆ.

ವಿದೇಶಾಂಗ ವ್ಯವಹಾರದಲ್ಲಿ ಪ್ರೌಢಿಮೆ ಮುಖ್ಯ. ಆದರೆ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಲ್ಲಿ ಪ್ರೌಢಿಮೆ ಕಾಣೆ ಯಾಗಿದೆ. ಈಗಲೂ ಟ್ರಂಪ್ ಅವರು ಅದೇ ಕೆಲಸ ಮಾಡುತ್ತಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾದಿಂದ ತೈಲ ಖರೀದಿ ನಿಲ್ಲಿಸು ತ್ತೇನೆ ಎಂದು ವಾಗ್ದಾನ ಮಾಡಿದ್ದಾರೆ ಎಂದು ಹೋದಲ್ಲಿ, ಬಂದಲ್ಲಿ ಹೇಳಿ ಕೊಂಡು ಓಡಾಡುತ್ತಿದ್ದಾರೆ. ಆದರೆ, ವಿದೇಶಾಂಗ ಇಲಾಖೆಯೇ ಭಾರತ ಮತ್ತು ಅಮೇರಿಕದ ಮುಖ್ಯಸ್ಥರು ಇತ್ತೀಚಿನ ದಿನ ಗಳಲ್ಲಿ ಮಾತುಕತೆ ಯನ್ನೇ ನಡೆಸಿಲ್ಲ. ಹೀಗಾಗಿ, ಅಂಥ ಭರವಸೆ ನೀಡಲು ಸಾಧ್ಯವೇ ಇಲ್ಲ ಎಂದಿದ್ದರೂ, ಟ್ರಂಪ್ ಇದನ್ನು ಕಿವಿಗೇ ಹಾಕಿಕೊಳ್ಳುತ್ತಿಲ್ಲ.

ಇದರ ಮಧ್ಯೆಯೇ, ರಷ್ಯಾದ ಎರಡು ತೈಲ ಕಂಪೆನಿಗಳ ಮೇಲೆ ಅಮೇರಿಕಾ ದಿಗ್ಬಂಧನ ಹೇರಿದೆ. ಅದರಿಂದಾಗಿ ಜಾಗತಿಕವಾಗಿ ತೈಲ ದರ ಹೆಚ್ಚಾಗಬಹುದು ಎಂಬ ಆತಂಕಗಳಿವೆ. ಆದರೂ, ಭಾರತದ ಮೇಲೆ ಈ ದಿಗ್ಬಂಧನ ನಿರ್ಧಾರ ಯಾವುದೇ ಪರಿಣಾಮ ಬೀರುವುದಿಲ್ಲ ಎಂಬ ವಿಶ್ಲೇಷಣೆ ನಡೆದಿದೆ. ಇದುವ ರೆಗೆ ಭಾರತ, ದಿಗ್ಬಂಧನ ವಿಧಿಸಿರುವ ಎರಡ ಕಂಪೆನಿಗಳಿಂದ ನೇರವಾಗಿ ತೈಲ ಖರೀದಿ ಮಾಡಿಲ್ಲ. ಬದಲಾಗಿ ಮಧ್ಯವರ್ತಿ ಕಂಪೆನಿಗಳ ಮೂಲಕವೇ ಖರೀದಿ ಮಾಡುತ್ತಿದೆ. ಈ ನಿಟ್ಟಿನಲ್ಲಿ ಎಚ್ಚರಿಕೆಯ ಹೆಜ್ಜೆ ಇಡುವುದು ಮುಖ್ಯವಾಗಿದೆ.

ಈ ಬೆಳವಣಿಗೆಯ ನಡುವೆ, ಭಾರತ ಅಸಿಯಾನ್ ಶೃಂಗ ಸಭೆಗೆ ವರ್ಚ್ಯುವಲ್ ಆಗಿ ಹಾಜರಾಗಲು ನಿರ್ಧರಿಸಿದೆ. ಮಲೇಷ್ಯಾದ ಪ್ರಧಾ ನಿಯೇ ಈ ಬೆಳವಣಿಗೆ ಬಗ್ಗೆ ಮಾಹಿತಿ ನೀಡಿದ್ದಾರೆ. ಆದರೆ, ಪ್ರಧಾನಿ ಅವರ ನಿರ್ಧಾರವನ್ನು ಪ್ರತಿಪಕ್ಷ ಕಾಂಗ್ರೆಸ್ ಬೇರೆಯದ್ದೇ ರೀತಿಯಲ್ಲಿ ವ್ಯಾಖ್ಯಾನಿ ಸುತ್ತಿದೆ. ಈ ಶೃಂಗಕ್ಕೆ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೂಡ ಬರುತ್ತಿದ್ದು, ಇವರ ಭೇಟಿಯನ್ನು ತಪ್ಪಿಸಿಕೊಳ್ಳಲು ನರೇಂದ್ರ ಮೋದಿ ಅವರು ಕೌಲಾಲಂಪುರಕ್ಕೆ ಹೋಗುತ್ತಿಲ್ಲ ಎಂದು ವ್ಯಂಗ್ಯವಾಡಿದೆ. ಆದರೆ, ಮೋದಿ ಅವರು ಹೋಗದಿರುವುದೇ ಲೇಸು ಎಂಬುದು ಅನುಭವಿ ವಿದೇ ಶಾಂಗ ತಜ್ಞರ ಅಭಿಮತ. ರಷ್ಯಾ ಮತ್ತು ಉಕ್ರೇನ್ ಯುದ್ಧದ ವಿಚಾರ ದಲ್ಲಿ ಮನಸ್ಸಿಗೆ ಬಂದಂತೆ ವರ್ತಿಸುತ್ತಿ ರುವ ಟ್ರಂಪ್, ಕೌಲಾಲಂಪುರದಲ್ಲಿ ಯಾರನ್ನು ಮುಜುಗರಕ್ಕೀಡು ಮಾಡುತ್ತಾರೆ ಎಂಬ ಕುತೂಹಲವಿದೆ. ಈ ಹಿಂದೆಯೂ ಭಾರತದ ವಿಚಾರದಲ್ಲಿ ಮುಜುಗರ ಸೃಷ್ಟಿ ಮಾಡುವ ಯತ್ನವನ್ನು ಟ್ರಂಪ್ ನಡೆಸಿದ್ದರು. ಪಾಕ್ ಸೇನಾ ಮುಖ್ಯಸ್ಥ ಅಮೇರಿಕಾದಲ್ಲಿರುವಾಗಲೇ, ಮೋದಿ ಅವರನ್ನೂ ಟ್ರಂಪ್ ಆಹ್ವಾನಿಸಿದ್ದರು. ಆದರೆ, ಮೋದಿ ಜಾಣ ನಡೆ ಇಟ್ಟು ಟ್ರಂಪ್ ಆಹ್ವಾನ ತಿರಸ್ಕರಿಸಿದ್ದರು. ಈಗಲೂ ಕೌಲಾಲಂಪುರಕ್ಕೆ ಹೋಗದಿರುವುದರಲ್ಲಿ ಉತ್ತಮ ನಡೆ ಇದೆ ಎಂಬುದು ತಜ್ಞರ ಅಭಿಪ್ರಾಯ.

## ಕಾರಣ

**ಮೂ**ರು ಚಕ್ರದ ರಿಕ್ಷಾ ಪೇಟೆಯಿಂದ ಮನೆಯ ಕಡೆಗೆ ಓಡ್ತಾ ಇತ್ತು. ಜೋರು ಮಳೆ ಇದ್ದ ಕಾರಣ ತುರ್ತಾಗಿ ಮನೆಗೆ ತಲುಪಬೇಕಾದ ಅವಶ್ಯಕತೆ ಇದ್ದ ಕಾರಣ ಆಟವನ್ನು ಏರಿದ್ದೆ. ಅದು ನನ್ನ ಬದುಕಿಗೆ ದಾರಿದೀಪ ಆಗತ್ತೆ ಅಂತ ಅಂದುಕೊಂಡಿರಲಿಲ್ಲ. ಅವತ್ತು ಓಡಿಸ್ತಾ ಇದ್ದಂತಹ ನಾರಾಯಣಜ್ಜ ಮಾತಾಡ್ತಾ ಹೋದ್ರು, ಅವರಿಗೆ ಆಟೋ ಓಡಿಸುವುದಕ್ಕೆ ಇಷ್ಟ ಇರಲಿಲ್ಲ ಏನಾದ್ರೂ ಕೆಲಸ ಮಾಡಬೇಕು ಅಂತ ಅಂದುಕೊಂಡಿದ್ದರು, ಆದರೆ ಬದುಕಿನ ಅನಿವಾರ್ಯತೆ ಮನೆಯವರ ನೆಮ್ಮದಿ ಮತ್ತು ಖುಷಿ ಜೊತೆಗೆ ಜವಾಬ್ದಾರಿಯಿದ್ದ ಕಾರಣ ಆಟೋ ಕೈ ಹಿಡಿಯಿತು. ಅದಾದ ನಂತರ ಅದರ ಜೊತೆಗೆ ಬೇರೆ ಕೆಲಸವನ್ನು ಮಾಡುತ್ತಾ ಹೋದ್ರು. ಇದೆಲ್ಲ ಸಾಧ್ಯ ಆಗಿರೋದು ಕಾರಣ ಜೊತೆಯಿದ್ದಕ್ಕೆ. ಹಾಗಾಗಿ ಪ್ರತಿಯೊಬ್ಬರೂ ಬದುಕಿಗೊಂದು ಕಾರಣವನ್ನು ಹುಡುಕಿ ಕೊಡಬೇಕು. ಆ ಕಾರಣವನ್ನು ಗಟ್ಟಿಯಾಗಿ ನಂಬಿಕೊಳ್ಳಬೇಕು. ನಾಳೆ ಅದ್ಭುತವಾಗಿರುತ್ತೆ ಹಾಗಾಗಿ ನಿನ್ನ ಬದುಕು ಇನ್ನಷ್ಟು ಸುಂದರವಾಗಿರುತ್ತೆ ಮೊದಲು ಕಾರಣವನ್ನು ಹುಡುಕುವ ಕೆಲಸ ಮಾಡು. ಅವರ ಮಾತು ಕೇಳಿದಾಗ ಮನೆ ಬಂದಿತ್ತು ಮನೆ ಒಳಗೆ ಚಲಿಸಿಬಿಟ್ಟೆ ಅವರ ಮಾತುಗಳು ನನ್ನೊಂದಿಗೆ ಚಲಿಸುವುದ್ದಕ್ಕೆ ಆರಂಭ ಮಾಡಿದವು. ಅವರ ಮಾತಿನ ಕಂಪನ ಮಾಯವಾಗುವ ಮೊದಲು ಅದನ್ನ ಮನಸ್ಸು ಒಳಗೆ ಗಟ್ಟಿಯಾಗಿಟ್ಟುಕೊಂಡುಬಿಟ್ಟೆ.

**-ಧೀರಜ್ ಬೆಳ್ಳಾರೆ**

# ಬಿಳಿ ಕತ್ತಿನ ರಾಟವಾಳ ಹಕ್ಕಿ



**ಮ**ದುವೆಯಾದ ಹೊಸತರಲ್ಲಿ ಹತ್ತಿರದ ಸಂಬಂಧಿಕರು ಮತ್ತು ಸ್ನೇಹಿತರು ನವದಂಪತಿಗಳಾದ ನಮ್ಮನ್ನು ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸುತ್ತಿದ್ದರು. ಹೀಗೆ ಹಲವಾರು ಸಂಬಂಧಿಗಳ ಮನೆಗೆ ಸುತ್ತಾಡುತ್ತಾ ಮೈಸೂರಿಗೆ ಹೋಗಿದ್ದೆವು. ನಮ್ಮ ಆತ್ಮೀಯರಾದ ಒಂದಿಬ್ಬರ ಮನೆ ಗಳಿಗೆ ನಾವು ಹೋಗಬೇಕಿತ್ತು. ನಾನು ಮೈಸೂರಿನಲ್ಲಿ ಓದುತ್ತಿದ್ದಾಗ ತಮ್ಮ ಸ್ವಂತ ಮಗನಂತೆ ನನ್ನ ಬಗ್ಗೆ ಕಾಳಜಿ ಮಾಡುತ್ತಿದ್ದ ನರಸಿಂಹ ಮಾಮ ಮತ್ತು ಕಾವೇರತ್ತೆ ದಂಪತಿಗಳ ಮನೆಗೆ ಹೋಗಿದ್ದೆವು. ಮನೆಯ ವರೆಲ್ಲ ಬೆಳಗ್ಗಿನ ತಿಂಡಿಯ ತಯಾರಿಯಲ್ಲಿ ಇದ್ದರು, ನಾನು ಸ್ವಲ್ಪ ಹೊರಗೆ ವಾಕಿಂಗ್ ಹೋಗಿ ಬರುತ್ತೇನೆ ಎಂದು ಹೇಳಿ ನನ್ನ ಕ್ಯಾಮರಾ ಹಿಡಿದುಕೊಂಡು ಹೊರಟೆ.

ಅವರ ಮನೆಯಿಂದ ಸ್ವಲ್ಪ ದೂರದಲ್ಲೇ ರಾಗಿಯ ಹೊಲಗಳು ಇದ್ದವು. ಪೇಟೆಯ ಅಂಚಿನ ಊರಾದ್ದರಿಂದ ಜಾನುವಾರುಗಳು ಹೊಲಕ್ಕೆ ನುಗ್ಗದಿರಲಿ ಎಂದು ಮುಳ್ಳಿನ ಗಿಡಗಳ ಬೇಲಿ ಹಾಕಿದ್ದರು. ಆ ಮುಳ್ಳಿನ ಗಿಡಗಳ ನಡುವೆ ಒಣಗಿದ ಹುಲ್ಲಿನಿಂದ ಮಾಡಿದ ಚೆಂಡಿನಾಕಾರದ ಗೂಡೊಂದು ಅಡಗಿ ಕುಳಿತಿರುವುದು ಕಾಣಿಸಿತು. ಅಲ್ಲಿಂದ ಸ್ವಲ್ಪ ದೂರದಲ್ಲೇ ಇದ್ದ ರಾಗಿಯ ಗದ್ದೆಯಲ್ಲಿ ಬಲಿತ ರಾಗಿ ತೆನೆಯ ಮೇಲೆ ಯಾವುದೋ ಪುಟಾಣಿ ಹಕ್ಕಿ ಕುಳಿತಿರುವುದು ಕಾಣಿಸಿತು. ಕ್ಯಾಮರಾ ತೆಗೆದು ಫೋಟೋ ತೆಗೆಯೋಣ ಎನ್ನುವಷ್ಟರಲ್ಲಿ ಯಾವುದೋ ದೊಡ್ಡ ಬಂದೂಕು ನೋಡಿದವರಂತೆ ಹೆದರಿ ರಾಗಿಯ ಹೊಲದೊಳಗೆ ಹೋಗಿ ಅವಿತುಕೊಂಡವು. ನಾನೂ ಅಲ್ಲೇ ಇದ್ದ ಕಿಲೋಮೀಟರ್ ಕಲ್ಲಿನ ಮೇಲೆ ಕುಳಿತುಕೊಂಡು ಬೈನಾಕುಲರ್ ಮೂಲಕ ಗಮನಿಸತೊಡಗಿದೆ.

ತಿಳಿಕಂದು ಬಣ್ಣದ ದೇಹ, ಕುತ್ತಿಗೆ ಎದೆ ಮತ್ತು ಬೆನ್ನಿನ ಭಾಗದಲ್ಲಿ ತಿಳಿಬಿಳಿ ಬಣ್ಣ, ಚೂಪಾದ ತುದಿಯ ಬಾಲ, ಬಾಲ ಮತ್ತು ರೆಕ್ಕೆಯ ತುದಿಯಲ್ಲಿ ಕಪ್ಪು ಬಣ್ಣ. ಇದರ ಜೊತೆಗೆ ಬೆಳ್ಳಿ ಲೋಹದಿಂದ ಮಾಡಲಾಗಿದೆಯೋ ಎಂಬಂತೆ ಕಾಣುವ ಕೊಕ್ಕು. ಈ ಕೊಕ್ಕು ಧಾನ್ಯಗಳನ್ನು ತಿನ್ನಲು, ಹುಲ್ಲನ್ನು ಮುರಿಯಲು ಬಹಳ ಸಹಕಾರಿ. ತಕ್ಷಣ ನೋಡಲು ಗುಬ್ಬಚ್ಚಿಯಂತೆ ಕಂಡರೂ ಗುಬ್ಬಚ್ಚಿಗಿಂತ ಚಿಕ್ಕದು. ಮುನಿಯಾ ಅಥವಾ ರಾಟವಾಳಗಳ ಕುಟುಂಬಕ್ಕೆ ಸೇರಿದ ಹಕ್ಕಿ ಇದು. ಸಿಗುವ ಜಾಗಕ್ಕೆ ಹೊಂದಿಕೊಂಡು ಮುನಿಯಾ ಹಕ್ಕಿಗಳಂತೆ ಗೋಲಾಕಾರದ ಅಥವಾ ಕೊಳವೆಯಾಕಾರದ ಗೂಡನ್ನು ಮಾಡುತ್ತವೆ. ಒಂದು ಬದಿಯಿಂದ ಒಳಗೆ ಹೋಗಲು ಬಾಗಿಲು ಇರುತ್ತದೆ. ವಿಶೇಷ ಅಂದರೆ ಮರಿಗಳು ರೆಕ್ಕೆ ಬಲಿತು ಹಾರಲು ಕಲಿತ ನಂತರವೂ ಈ ಹಕ್ಕಿಗಳು ತಮ್ಮ ಗೂಡನ್ನು ಕೆಲವು ಸಮಯ ರಾತ್ರಿ ಮಲಗುವ ಕೋಣೆಯನ್ನಾಗಿ ಬಳಸುತ್ತವೆ. ಆಹಾರದ ಲಭ್ಯತೆಯನ್ನು ಆಧರಿಸಿ ವರ್ಷದ ಬೇರೆಬೇರೆ ಕಾಲದಲ್ಲಿಯೂ ಈ ಹಕ್ಕಿ ಗೂಡುಕಟ್ಟಿ ಮರಿಮಾಡುತ್ತವೆ.

ಭಾರತದ ನೈರುತ್ಯ ಭಾಗ, ಪೂರ್ವೋತ್ತರ ರಾಜ್ಯಗಳು, ಹಿಮಾಲಯ ಪ್ರದೇಶಗಳನ್ನು ಹೊರತಿಪಡಿಸಿ ದೇಶದ ಉದ್ದಗಲಕ್ಕೂ ಈ ಹಕ್ಕಿ ಕಾಣಲು ಸಿಗುತ್ತದೆ ಎಂದು ಪಕ್ಷಿತಜ್ಞರು ಹೇಳುತ್ತಾರೆ. ಕರ್ನಾಟಕದ ಪಶ್ಚಿಮ ಕರಾವಳಿ ಮತ್ತು ಮಲೆನಾಡು ಹೊರತುಪಡಿಸಿ ಉತ್ತರ ಕರ್ನಾಟಕ ಮತ್ತು ಮೈಸೂರು ಸೀಮೆಯ ಎಲ್ಲ ಕಡೆ ಈ ಹಕ್ಕಿ ಸಾಮಾನ್ಯವಾಗಿ ಕಾಣಲು ಸಿಗುತ್ತದೆ. ಗುಂಪು ಗುಂಪಾಗಿ ಓಡಾಡುವ ಈ ಹಕ್ಕಿಗಳು ರಸ್ತೆಯ ಬದಿಯಲ್ಲಿಯೂ ಸುಲಭವಾಗಿ ನೋಡಲು ಸಿಗುತ್ತವೆ. ಹುಡುಕ್ತೀರಲ್ಲ.. **-ಅರವಿಂದ ಕುಡ್ಲ, ಬಂಟ್ವಾಳ**

# ನೊಣವೊಂದರ ಮೊರೆತ



**ಹೊ**ರ ಕೋಣೆಯಲ್ಲಿ ಕಾಲೂರಿ ಕೂತು ಬೀಡಿ ಕಟ್ಟುತ್ತಿದ್ದ ಸುಮಯ್ಯಾಗೆ ಕಣ್ಣು ಮತ್ತು ಕಿವಿಯ ಸುತ್ತಲೇ ಆಗಾಗ ಗುಂಯ್.. ಎನ್ನುತ್ತಾ ನೊಣವೊಂದು ಸರಿಸುಮಾರು ಹದಿನೈದು ನಿಮಿಷಗಳಿಂದ ಹಾರಾಡುತ್ತಾ ಕಿರಿಕಿರಿ ಮಾಡುತ್ತಿತ್ತು. ಹಿಡಿದು ಹೊಸಕಿ ಹಾಕಬೇಕೆಂದರೆ ಕೈಗೆ ಸಿಗದೆ ಮೈ ಪರಚಿಕೊಳ್ಳಬೇಕೆನ್ನುವಷ್ಟು ಅಸಹಾಯಕತೆಗೆ ನಿಟ್ಟುಸಿರುಬಿಡುತ್ತಾ, ಆಗಾಗ ರಸ್ತೆ ಕಡೆ ಕಣ್ಣು ಹೊರಳಿಸುತ್ತಿದ್ದಳು. ದೃಷ್ಟಿ ತಟ್ಟನೆ ರಸ್ತೆ ಮೇಲೆ ಹೋಗುತ್ತಿದ್ದ ಬಾಯಮ್ಮನ ಕಡೆ ನೆಟ್ಟಿತು. ರಸ್ತೆ ತುಂಬಾ ಇಕ್ಕಟ್ಟಿನದೇ. ಸರಿಯಾಗಿ ಹೋದರೆ ಒಂದು ಬಾರಿ ಒಂದೇ ವಾಹನ ಬರಬಹುದು ಇಲ್ಲವೆ ಹೋಗಬಹುದು. ಆದರೂ ಅದು ಒನ್ ವೇ ಅಲ್ಲ. ಹೋಗುವ ಬರುವ ವಾಹನಗಳು ಬದಿಗೆ ಸರಿದು ನಿಂತೇ ಇನ್ನೊಂದಕ್ಕೆ ದಾರಿ ಮಾಡಿಕೊಡುವುದು. ರಸ್ತೆಯಂತೂ ಅರೆಬರೆ ಟಾರು ಹೊದ್ದುಕೊಂಡಿರುವ ಅಂಕುಡೊಂಕಿನ ದಾರಿ. ಆ ರಸ್ತೆಯಲ್ಲೇ ಹೆಬ್ಬಾವಿನ ಡೊಂಕು ಮೈ ಸವರಿ ಬರುತ್ತಿರುವಂತೆ ನುಲಿಯುತ್ತಾ ಬರುತ್ತಿದ್ದಳು ಬಾಯಮ್ಮ. ಬಾಯಲ್ಲಿ ಕೆಂಪು ಪಾನ್‌ಬೀಡಾ, ಕೈಯಲ್ಲೊಂದು ಛತ್ರಿ ಹಿಡಿದು ಅದನ್ನು ಬೀಸಿಕೊಂಡೇ ನಡೆಯುತ್ತಿದ್ದ ಬಾಯಮ್ಮ ಇವಳೆಡೆಗೆ ನೋಡಿಯೂ ನೋಡದಂತೆ ನಡೆಯುತ್ತಿದ್ದಳು. ಸುಮಯ್ಯಾ ಅಂದುಕೊಂಡಳು ಥೂ!. ಆ ಬ್ಯಾರಿ ಬಂದರೆ ಮಾತ್ರ ಇವಳಿಗೆ ಈ ಕಡೆ ಕಣ್ಣು ಹೊರಳುವುದಾ, ಈಗ ನೋಡಿದರೆ ತಿರುಗಿಯೂ ನೋಡದೆ ಹೋಗುವುದು. ಇವರಿಗೆಲ್ಲ ಗಂಡಸರ ದನಿ ಕೇಳಿದರೆ ಮಾತ್ರ ಕಿವಿ ಕೇಳುದಾ? ಇಲ್ಲದಿದ್ರೆ ಸುಮಾರು ಕಿವಿ ಇವಳದು ದಪ್ಪವೇ!!.

ಗುಂಯ್.. ಗುಂಯ್.. ಗುಂಯ್ ಎರಡೂ ಕೈ ಸೇರಿಸಿ ಟಫ್! ಟಫ್! ಎಲ್ಲಿಂದ ನುಸುಳಿ ಓಡಿತೋ! ಸಿಗದೆ ಹೋದ ಹತಾಶೆ, ಕೈಗಳೆರಡರ ಘರ್ಷಣೆಗೆ ಮೆದು ಹಸ್ತಕ್ಕೆ ಆದ ನೋವು. ಅಳದಿದ್ದರೂ ಕಣ್ಣಹನಿ ಕೆನ್ನೆಗಿಳಿದು, ಆಗಷ್ಟೆ ಚಿವುಟಿದ ಮೊಡವೆ ಮೇಲೆ ಹರಿದು ಗಾಯ ಚುರ್ರೆಂ ದಿತು. ಹಾಳಾದ ನೊಣ ಎಲ್ಲಿಂದ ಬರುತ್ತೋ? ಸರಿ ಇಷ್ಟೇ ಹೊತ್ತಿಗೆ. ದಿನವೂ ಬಾಯಮ್ಮನ ಸವಾರಿ ಪೇಟೆ ಕಡೆಯಿಂದ ಬಂದ ಹಾಗೆ.

ತಡೆಯಲಾಗಲೆ ಇಲ್ಲ ಕೂತು ಕೂತು ಬೇಸರ ನೀಗಲು ಏನಾದರೂ ಮಾತು ಬೇಕು.

ಹೋಯ್ ಎಂಥದಾ ಬಾಯಮ್ಮ. ನೋಡದೇ ಹೋಗುದು. ಡಿಸೋಜರು ವಿಟ್ಲದಿಂದ ಬಂದದ್ದಾ? ಅದಕ್ಕೆ ಬೇಗ ಬೇಗ ಹೋಗುದಾ? ಬಾಯಮ್ಮ ತಟ್ಟನೆ ತಿರುಗಿ ನಿಂತಳು ಬಂದೇ ಇರಾ!! ಸ್ವಲ್ಪ ಅರ್ಜೆಂಟ್ ಕೆಲಸವುಂಟು ಮಾರಾಯ್ತಿ,, ಸೋಸಾಯಿಟಿಗೆ ಹೋಗುದುಂಟು, ರೇಷನ್ ಕಾರ್ಡಿಗೆ ಆಧಾರ ಕಾರ್ಡು ಲಿಂಕ್ ಮಾಡಬೇಕಂತೆ, ಈ ಡಿಸೋಜಾರೋ ಎಣ್ಣೆಗಾಡಿ ಇನ್ನೂ ಬಂದೇ ಇಲ್ಲ. ಬಂದರೂ ನೆಟ್ಟಗೆ ನಡಿಲಿಕ್ಕುಂಟಾ ಈ ಹೊತ್ತಲ್ಲೀ.. ಹಾಳಾದ ಕಂಪ್ಯೂಟರ್‌ಗಳು ಬಂದದ್ದೆಲ್ಲ ನೂರೆಂಟು ತಾಪತ್ರಯ ಮಾರಾಯ್ರೇ, ಮತ್ತೆ ಬರುದಾ ಎನ್ನುತ್ತಾ ಬಿರಬಿರ ಹೊರಟೆ ಹೋದಳು. ಸುಮಯ್ಯಾ ತಲೆ ಮೇಲಿನ ದುಪಟ್ಟಾ ಸರಿ ಮಾಡಿಕೊಂಡಳು.

ಅಷ್ಟೊತ್ತಿಗೆ ಮಗ ಇಕ್ಬಾಲ್ ಓಡಿ ಬಂದ. ಅವನ ಹಿಂದೆ ಆಶ್ರಮದ ಹುಡುಗರು ಒಂದಿಬ್ಬರು ಬಂದರು.

ಉಮ್ಮಾ, ಕಲೆಂಜಿಮಲೆಗೆ ಹತ್ತಿ ಬರೋದಾ, ಇಲ್ಲೇ ಸ್ವಲ್ಪ ಮೇಲೆ..

ಮನೆಯ ಹಿಂಭಾಗದಲ್ಲೇ ಇರುವ ಆ ಬೆಟ್ಟ ಒಂದಾನೊಂದು ಕಾಲಕ್ಕೆ ಅಭಯಾರಣ್ಯವಾಗಿತ್ತಂತೆ. ಈಗ ಅಲ್ಲೊಂದು ಇಲ್ಲೊಂದು ಮರ ಬಿಟ್ಟರೆ ಬರಿ ಬೋಳು. ಮಗ ಆಶ್ರಮದ ಹುಡುಗರ ಜೊತೆಯಲ್ಲೇ ಇರುತ್ತಾನೆ. ಎಷ್ಟು ಹೇಳಿದರೂ ಕೇಳುವುದಿಲ್ಲ. ಕೆಲವು ಬಾರಿಯಂತೂ ಅಲ್ಲೆ ಭಜನೆ ಮಾಡಿ ಊಟ ಮಾಡಿದರೂ ಮಾಡಿದನೇ!! ಆಗಾಗ ತರಕಾರಿ ಅಂಗಡಿಯ ಮೆಹಬೂಬ್ ಸಾಬ್ ಮುಖ ಕೆಂಪಗೆ ಮಾಡಿ ಬೈಯ್ಯೋದಿದೆ. ಆದರೆ ಈ ಹುಡುಗನ ಹಿಡಿದುಕೊಂಡೇ ಕೂತರೆ ತನಗಾಗದು. ಇವರೆಲ್ಲ ಹೇಳಲು ಇರುವರೆ ಹೊರತೂ ಯಾರೂ ಬೇರೇ ನಕ್ಕೂ ಒದಗಿ ಬರಲಾಗ ದವರು. ಆಶ್ರಮದವರು ಪಾಪ ಅಂತಲೋ ಮಕ್ಕಳ ಜೊತೆ ಇರುವ ಮಗು ಅಂತಲೋ ಒಂದಿಷ್ಟು ಬಡಿಸಿದರೂ ಯಾವತ್ತು ಅದನ್ನು ಹೇಳಿಕೊಂಡಿಲ್ಲ. ತನ್ನ ಮಗನೂ ಆಗಾಗ ಆಶ್ರಮದ ಕೆಲಸಗಳಿಗೆ ಆವರಣ ಸ್ವಚ್ಛಗೊಳಿಸಲೂ ಹೋಗುತ್ತಿರುತ್ತಾನೆ. ಪಕ್ಕದ್ಮನೆಯ ಜೇಸನ್ ಬಂದು ಕರೆದರೂ ಹೋಗದ ಇಕ್ಬಾಲ್ ಆಶ್ರಮದ ವಿಘ್ನರಾಜ ಬಂದರೆ ಮಾತ್ರ ತಟ್ಟನೆ ಎದ್ದು ಹೋಗಿ ಬಿಡುತ್ತಾನೆ. ಅವರಿಬ್ಬರಲ್ಲೂ ಅದೆಂತದ್ದೋ ಸ್ನೇಹ. ಮೆಹಬೂಬಣ್ಣನ ಮಾತು ಕೇಳಿ ನಾನು ಈ ಹುಡುಗನ ಹಿಡಿಯಲುಂಟೇ!! ಎಂದುಕೊಂಡಳು. ನಾಳೆ ಕಟ್ಟಿದ ಬೀಡಿಯನ್ನೆಲ್ಲಾ ಡೇವಿಡ್ ಡಿಸೋಜ್‌ರ ಬೀಡಿಯಂಗಡಿಗೆ ಕೊಟ್ಟು ಬರಬೇಕು.

ನೊಣ ಮತ್ತೆ ಬಂದಿತ್ತು ಹಾರಿ ಕಿಟಕಿಯಿಂದ. ಕೈ ಬೀಡಿ ಹೊಸೆಯುತ್ತಿದ್ದರೆ, ಕಣ್ಣು ನೊಣದ ಬೇಟೆಯಾಡುತ್ತಿತ್ತು. ಆ ಸಣ್ಣ ಕೋಣೆಯಲ್ಲಿ ಎಲ್ಲಿ ಹೋದರೂ ಅದರ ಸದ್ದು, ಗುಂಯ್ಗುಡುವಿಕೆ. ಬೊಂತೆ ಮಾಡಿ ಕಟ್ಟಿಟ್ಟ ಹಳೆ ಬಟ್ಟೆಗಳ ಮೇಲೆ ಕೂತು, ಹಿಂಭಾಗ ಮೇಲೆತ್ತಿ ಕಾಲು ಕೈ ಉಜ್ಜಿಕೊಂಡಿತು. ಇಸ್ಸ್ಯ.. ಹೇತಿತು ಅಂದುಕೊಂಡಳು. ಶಾಲೆಗೆ ಹೋಗುವಾಗ ಮಾಸ್ಟ್ರು ಹೇಳಿದ್ದು ನೆನಪಿಗೆ ಬಂತು. ಅವು ಮೊಟ್ಟೆಯನ್ನೂ ಇಡೋದು ಹಾಗೇ. ಒಂದೇ ಸಲಕ್ಕೆ ಹತ್ತಾರು. ಎದ್ದು ಬಟ್ಟೆ ಗಂಟು ಝಾಡಿಸಿ ಬರಬೇಕೆಂದುಕೊಂಡಳು. ಎದ್ದೇಳುವಷ್ಟರಲ್ಲಿ ಪಕ್ಕಕ್ಕೆ ಕುಡಿದಿಟ್ಟ ಕಾಫಿ ಕಪ್ಪಿನಲ್ಲಿ ಬುಡದ ಕರಟದ ಮೇಲೆ ಕೂತು ಮೆಲ್ಲುತ್ತಿತ್ತು. ಛೀ. ಛೀ.. ಎಲ್ಲೆಲ್ಲೊ ಹೋಗಿ ಕೂತು ಬರುವುದು. ಮತ್ತೆ ಕಾಫಿ ಕಪ್ಪೋ, ಊಟದ ತಟ್ಟೆಯೋ ಅದರ ಮೇಲೆ ಕೂತುಬಿಡುವುದು.

ಹಚಾ! ಹಚಾ! ಕೈಯಾಡಿಸಿದಳು.. ಹಾರಿತಷ್ಟೇ ನೊಣ..ತಟ್ಟನೆ ಗುಂಯ್‌ಗುಡುವಿಕೆ ಮೇಲೆದ್ದು ಇವಳ ಕಿವಿಯೊಳಗೆ ಕೊರೆಯತೊಡಗಿತು.

ಎಲ್ಲಿ ಹೋಗಿ ಕೂತು ಬಂದಿರಬಹುದು. ಉದ್ದ ಹೊರಗೆ ಕಣ್ಣು ಕೀಲಿಸಿ ನೋಡಿದಳು. ಒಡೆದ ಪೈಪಿನ ಗಟಾರದ ನೀರು ಬಿಸಿಲಿಗೆ ಅರೆಬರೆ ಒಣಗಿತ್ತು ಅದರ ಮೇಲೆ. ಇಸ್ಸಿ ೀ.. ಛೀ..ಛೀ..

ಹೊರಗೆ ಹಾರಿದೆಯೋ ಹೇಸಿಗೆಯ ತಿನ್ನು, ಒಳಗೆ ಬಂದರೆ ಮಿಂದು ಅವಲಕ್ಕಿ ಉಣ್ಣು ಬಾಗಿಲು ಹಾಕಿದರೆ ಸೆಖೆಗೆ ಕುದಿಯಬೇಕು. ಸಾಧ್ಯವೇ ಇಲ್ಲ. ಈ ನೊಣ ಬರದಂತೆ ಮನೆಗೆ ಅದೇನೋ ರೂಮ್ ಫ್ರೆಶನರ್ ತಂದು ಹಾಕಬಹುದಂತೆ. ಈ ಬ್ಯಾರಿಗೆ ಎಷ್ಟು ದಿನ ಹೇಳಿದಳೊ? ತನಗೋ ತನ್ನ ಬಾಲಕ್ಕೋ ಅನ್ನುವ ಹಾಗೇ ವಾರದ ಸಾಮಾನು ಒಮ್ಮೆ ತಂದರೆ ಮುಗಿತು ತನ್ನ ಕೆಲಸ ಅಂದು ಕೊಳ್ಳುತ್ತಾನೆ. ಮತ್ತೇನಾದರೂ ಹೆಚ್ಚಿಗೆ ಹೇಳಿದರೆ ಉರಿದು ಬೀಳುತ್ತಾನೆ. ಅದೇ ಆ ಬಾಯಮ್ಮಗೆ ಪಾನಬೀಡಾ ಪುಕ್ಕಟೆ ಕೊಡಲು ಕಷ್ಟವಿಲ್ಲ ಅವನಿಗೆ.. ನೊಣ ಬರುವುದು ಅವನಿಗೂ ಇಷ್ಟವೇ ಇರಬೇಕು. ವಾಸನೆಯ ಗ್ರಹಿಸುವ ತನ್ನ ಬುದ್ದಿಗೆ ಹಳಿದುಕೊಂಡಳು.

ಕಾರು ರಸ್ತೆಯಲ್ಲಿ ಗಕ್ಕನೇ ಬಂದು ನಿಂತಿತು. ಮೋಜೆಸ್ ಒಮ್ಮೆ ಕಣ್ಣು ಕಿರಿದುಗೊಳಿಸಿ ಮನೆ ಯತ್ತ ನೋಡಿದಂತೆ ಮಾಡಿದ. ಹಾಗೆನ್ನಿಸಿತು ಆಕೆಗೆ. ಅವನಿಗೀಗ ನೋಡುವುದ ಬಿಟ್ಟೇಬಿಟ್ಟಿದ್ದಾನೆ. ಕಣ್ಣೀರು ಉಕ್ಕಿ ಮುಖದ ಮೇಲೆ ಮೂಡಿದ ಬೆವರ ಹನಿಗಳ ಕೂಡಾ ಕೆನ್ನೆಯ ಮೇಲೆ ಜೊತೆಯಾದವು. ತಲೆಯನ್ನು ಮುಚ್ಚಿದ ಸ್ಟಾಲ್ ಎಳೆದು ತೆಗೆದು ಹಾಕಿದಳು. ಅಬ್ಬಾ! ಎದೆಯ ಮೇಲಿನ ಸೆರಗೂ ಭಾರವೆನಿಸುತ್ತಿತ್ತು. ಸೆರಗು ತೆಗೆದು ಸೊಂಟಕ್ಕೆ ಸಿಕ್ಕಿಸಿದಳು. ಮೋಜೆಸ್ ಈಗ ನೋಡುತ್ತಿರುವಂತೆ ಅನ್ನಿಸಿತವಳಿಗೆ. ಮರುಕ್ಷಣ ಕಾರಿನಲ್ಲಿದ್ದವರ ದೃಷ್ಟಿಯೆಲ್ಲ ತನ್ನ ಕಡೆ ಇರು ವಂತಾಗಿ ತಟ್ಟನೇ ಸೆರಗು ಹೊದ್ದಳು. ಆದರೂ ಕಣ್ಣು ಕಾರಿನ ಮುಂಭಾಗದಲ್ಲಿ ಕೂತವರ ಹುಡುಕಿತು. ಮೊಜೆಸ್‌ನ ಪಕ್ಕಕ್ಕೆ ಕೂತಿರುವುದು ಹೆಂಗಸು. ಹೊಟ್ಟೆಯಲ್ಲಿ ಅದೆಂಥದ್ದೋ ತಳಮಳ.. ಅಲ್ಲ, ಹತಾಶೆ. ಪಟ್ಲದಿಂದ ಕಡೆಯೂರಿಗೂ, ಕಡೆಯೂರಿಂದ ಪಟ್ಲಕ್ಕೂ ದಿನವೂ ಕಾರು ಹೊಡೆಯುವುದನ್ನೆ ಕಸುಬಾಗಿಸಿಕೊಂಡವ ಮೊಜೆಸ್. ಅದೆಷ್ಟೋ ಹೆಂಗಸರು ಪಕ್ಕ ಬಂದು ಕೂತು ಕೊಳ್ಳುವ ಸಂದರ್ಭ ಸಹಜ. ಆದರೆ ಅವನಿಗೆ ಅದರಲ್ಲಿ ವ್ಯತ್ಯಾಸ ಇಲ್ಲವೆನ್ನುತ್ತಿದ್ದ. ಮೊಜೆಸ್‌ನಿಗೆ ಆ ದಿನ ಮನೆಯ ಸಾಮಾನು ತರಲಿಕ್ಕಿದ್ದು, ಪ್ರಯಾಣಿಕರಾರೂ ಇರಲಿಲ್ಲ. ಬ್ಯಾಂಕಿನಿಂದ ನಡೆದು ಬರುತ್ತಿದ್ದ ಸುಮಯ್ಯಾ ಕಣ್ಣಿಗೆ ಬಿದ್ದಿದ್ದಳು. ಹಿಂದಿನ ಸೀಟಿನ ತುಂಬಾ ಸಾಮಾನು. ಮುಂದಿನ ಸೀಟಿನಲ್ಲಿ ಇವರಿಬ್ಬರೇ!! ಸುಮಯ್ಯಾ ನೋಡು. ನೀ ಪಕ್ಕ ಕೂತರೇ ನಂಗೆ ಇಲ್ಲದ ಕಿರಿಕಿರಿ ಮಾರಾಯ್ತಿ. ಬೇರೆಯವರು ಕೂತರೆ ನಂಗೇ ಏನೂ ಆಗುದಿಲ್ಲವಾ? ನೀ ಕೂತರೇ ಏನೆಲ್ಲಾ ತಾಪತ್ರಯ ಮಾರಾಯ್ತಿ..

ತಾನೂ ಕಿಚಾಯಿಸಿದ್ದಳು. ನೀನೆಂಥದ್ದಾ ಪಿರ್ಕಿ ಹಾಗೇ ಮಾಡೋದು? ನಿಂಗೇ ಹುಡುಗಿ ಯರಾದರೆ ಸಾಕು. ನಿನ್ನ ಕಾರು ಬರಿ ಕಾರಲ್ಲ ಮಾರಾಯಾ, ವಿಮಾನ ಅಂದುಕೊಳ್ಳುದು ನೀನು.. ನಾ ಎಂಥದ್ದೂ ಅಲ್ಲ ನಿಂಗೆ? ಅದಕ್ಕೆ ನಾ ಕಿರಿಕಿರಿ ಆಗೋದು.

ಅಯ್ಯೋ ಅದಲ್ಲಾ ಮಾರಾಯ್ತಿ, ನಾ ಹಾಗೇ ಹೇಳಿದ್ದಲ್ಲ! ಕಿರಿಕಿರಿ ಅಂದ್ರೆ, ನಿಂಗೇ ಹೇಳುದ್ಯಾಂಗಾ?. ತಲೆಕೆರೆದುಕೊಂಡ ಎಡಗೈಯಲ್ಲಿ, ತಟ್ಟನೇ ಆಕೆಯ ಕೆನ್ನೆ ಚಿವುಟಿದ. ಗಲ್ಲ ಕೆಂಪಾಗಿತ್ತು. ಮೊದಲೆಲ್ಲಾ ಮೋಜೆಸ್ನ ಕಾರು ಹತ್ತಿದಾಗ ತನಗೆ ರಥದಲ್ಲಿ ಕುಳಿತಂತೆ ಆಗುತ್ತಿತ್ತು. ತಾನು ಆತನ ಕಾರಿಗೆ ಕಾಯುತ್ತಿದ್ದ ದಿನಗಳು ನೆನಪಾದವು. ಆಗೆಲ್ಲ ತಾನು ಫೈನಾನ್ಸೊಂದರಲ್ಲಿ ಕೆಲಸಕ್ಕಿದ್ದೆ. ಕಾಗದ ಪತ್ರಗಳ ಆಚೀಚೆಗೆ ಕೊಂಡುಕೊಡುವುದು, ಫೈನಾನ್ಸಿನ ಕೋಣೆ ಗಳನ್ನು ಸ್ವಚ್ಛಗೊಳಿಸುವುದು. ಹೆಲ್ಪರ್ ಕೆಲಸ. ಆಗಲೇ ಮೋಜೆಸ್ ಪರಿಚಯವಾಗಿದ್ದ. ಸಂಜೆ ಅವನ ಕಾರಲ್ಲಿಯೆ ತಾನು ಬರುವುದಿತ್ತು. ಡ್ರೈವರ್ ಪಕ್ಕದ ಸೀಟು ತನಗೆ ಮೀಸಲಿತ್ತು. ಪಟ್ಲದ ರೋಡಿನ ಡೊಂಕುಗಳಿಗೆ ಸರಿಯಾಗೇ, ಬೇಕೆಂತಲೇ ಆತ ಅಡ್ಡಾದಿಡ್ಡಿ ಓಡಿಸುವುದು, ತಾನು ಆತನ ಮೇಲೆ ಬೀಳುವುದು, ತೊಡೆ ತೊಡೆ ತಾಗುತ್ತಲೇ ಮತ್ತೆ ನಾಚಿ ಸರಿದುಕೊಳ್ಳುವುದು. ಇದೆಲ್ಲ ಸುಮಾರು ಎರಡು ಮೂರು ವರ್ಷ ನಡೆದಿತ್ತು. ಅಪರೂಪಕ್ಕೆ ಯಾವತ್ತಾದರೂ ಆ ಸೀಟು ಸಿಗದಿದ್ದರೆ ತಾನು ಎಷ್ಟು ಬೇಸರ ಮಾಡಿಕೊಳ್ಳುತ್ತಿದ್ದೆ. ಆಗೆಲ್ಲ ತನ್ನ ಸಮಾಧಾನ ಮಾಡುತ್ತಿದ್ದ ಆತ. ಆದರೆ ಅವನಾಗಲೀ ತಾನಾಗಲೀ ಎಂದೂ ಬಾಯಿ ಬಿಟ್ಟು ಪರಸ್ಪರರ ಮನಸ್ಸನ್ನು ಹಂಚಿಕೊಳ್ಳಲೇ ಇಲ್ಲ. ಈಗೆಂತಾ ವಿಚಾರ ಮಾಡೋದು.. ಮಾಡುವುದೇ ತಪ್ಪು. ಹೋದ ವಾರವೂ ಹೀಗೆ ನೆನಪಿನಲ್ಲೇ ಕಳೆದುಹೋಗಿ, ಇಟ್ಟ ಅನ್ನ ಸೀದು ಹೋಗಿ ಬ್ಯಾರಿ ಕೈಯಲ್ಲಿ ಬೈಸಿಕೊಂಡಿದ್ದಳು. ಕಾರು ಗೇರ್ ಬದಲಿಸಿ ಹೊರಟು ಹೋಗಿತ್ತು..

ಸುಮಯ್ಯ ರಸ್ತೆ ನೋಡತೊಡಗಿದಳು. ಕೈ ನಿಂತಿತು. ಎಲೆಗೆ ತುಂಬುತ್ತಿದ್ದ ತಂಬಾಕಿನ ಘಾಟು ನೆತ್ತಿಗೇರಿದಂತಾಗಿ ಮಬ್ಬಾದಂತಾಯಿತು. ಚಿತ್ರ ವಿಚಿತ್ರ.. ಅಯ್ಯೋ! ಎದೆಯೊಳಗೆ ನೋವಿನ ಮಿಡಿತ, ಅಲೆ ಅಲೆ ಎದ್ದಂಗಾಯಿತು. ವಿಪರೀತ ತಳಮಳ. ಕಣ್ಣು ಮುಚ್ಚಿದಳು. ಮುತ್ತಿಕ್ಕುತ್ತಿದೆ ನೊಣವೊಂದು ಮೊಜೆಸ್‌ನ ಹಣೆಯ ಮೇಲ್ಭಾಗಕ್ಕೆ. ಎಲ್ಲ ಆಳ ಅಗಲ ಆವರಿಸಿಕೊಂಡ ನೊಣ. ಬಾಯಮ್ಮನ ಕೆನ್ನೆಯ ಮೇಲೆ ಕೂತ ನೊಣವನ್ನ ಇವಳ ಬ್ಯಾರಿ ಮೆತ್ತಗೆ ಕೈಯಿಂದ ತೆಗೆಯುತ್ತಿದ್ದ. ಬಾಯಮ್ಮನ ಬಾಯಲ್ಲಿ ಬೀಡಾದ ಕೆಂಪು ಕೆಂಪು ರಸ. ನೊಣದ ಮೊರೆತ ಕಿವಿಯಿಂದ ತಲೆಯೊಳಗೆ. ಆ ಸದ್ದು ಗುಂಯ್ಗುಟ್ಟುವಿಕೆಗೆ ಆವರಿಸಿದ ಮಂಪರಿಗೆ ಆಕಳಿಸಿದಳು.

ಅರೆತೆರೆದ ಕಣ್ಣುಗಳ ಒಳಗೆ ನೊಣ ಆಕಾರದಲ್ಲಿ ಹಿಗ್ಗುತ್ತಾ ಈಗ ಕೈಕಾಲು ಕಳೆದುಕೊಂಡು ತೆವಳಲಾರಂಭಿಸಿತು. ಕಾಫಿಕಪ್ಪಿನ ಬುಡದಿಂದ ಎದ್ದು ಸರಿಯತೊಡಗಿತು. ನಿಧಾನ ಸುಮಯ್ಯಾ ಕೂತ ಸಣಬಿನ ಚೀಲದ ಒಳಹೊಕ್ಕು ಮೂತಿ ತಿವಿಯುತ್ತ, ಕಾಲುಗಳ ಸಂದಿಯಲ್ಲಿ ಮಿಸುಕಾಡುತ್ತಿದ್ದಂತೆ ಮರುಗಳಿಗೆಯಲ್ಲೇ ತೆವಳುವ ಅದರ ದೇಹ ತನ್ನ ದೇಹವನ್ನೇ ವ್ಯಾಪಿಸಿ, ಸುರುಳಿ ಸುರುಳಿಯಾಗಿ ಸುತ್ತಿ ಆಕೆಯನ್ನು ಹಿಂಡತೊಡಗಿದಂತೆ.. ಯೌವನದ ಭರವಸೆ, ಚಾನಮಾಜಿನ ಮೇಲೆ ಕೂತು ಹೇಳಿದ ಪಠಣ, ಆಶ್ರಮದ ಮಾಳಿಗೆ ಯಿಂದ ಕೇಳಿ ಬರುವ ಪ್ರಾರ್ಥನೆಯ ಸದ್ದು, ಇಗರ್ಜಿಗೆ ಹೊರಡುವ ಸಮಯದಲ್ಲಿ ಡೇವಿಡ್ ಡಿಸೋಜರ ಮನೆಯಿಂದ ಕೇಳಿಬರುವ ಯೇಸುನಾಮದ ಹಾಡುಗಳು ಎಲ್ಲವೂ ಗಾಳಿಯ ಅಲೆ ಗಳಲ್ಲಿ ತೇಲಿ ಹೋದಂತೆ.. ಸುಳಿಗಾಳಿಯ ನಿಟ್ಟುಸಿರು, ಆಕೆಯ ದೇಹವನ್ನೆ ವ್ಯಾಪಿಸಿದಂತಾಗಿ, ಮರುಕ್ಷಣ ಗಾಳಿಯ ನೀರವತೆಗೆ ಉಸಿರುಗಟ್ಟಿದಂತಾಗಿಎದುಸಿರು ಬರತೊಡಗಿತು.

# ಮೈಸೂರು- ಜಗನ್ಮೋಹನ ಅರಮನೆ



**ಜ**ಗನ್ಮೋಹನ ಪ್ಯಾಲೇಸ್ ಎಂದೇ ಸುಪ್ರಸಿದ್ಧವಾದ ಜಯಚಾಮ ರಾಜೇಂದ್ರ ಆರ್ಟ್ ಗ್ಯಾಲರಿಯನ್ನು 1861ರಲ್ಲಿ ಮೂರನೇ ಕೃಷ್ಣರಾಜ ಒಡೆಯರ್ ಪರ್ಯಾಯ ಅರಮನೆ ಯಾಗಿ ಕಟ್ಟಿಸಿದರು. ದೊರೆ ವಾಸಿಸುತ್ತಿದ್ದ ಮೂಲ ಅರಮನೆಯಾದ ಮೈಸೂರು ಪ್ಯಾಲೇಸ್ ದುರ ದೃಷ್ಟವಶಾತ್ ಬೆಂಕಿ ಆಕಸ್ಮಿಕದಿಂದ ಸುಟ್ಟು ಹೋದ ಕಾರಣ 1897ರಲ್ಲಿ ಹೊಸ ಅರಮನೆ ಕಟ್ಟುವ ಕೆಲಸ ಪ್ರಾರಂಭವಾಯಿತು. 1912ರಲ್ಲಿ ಅರಮನೆ ನಿರ್ಮಾಣ ಸಂಪೂರ್ಣಗೊಂಡಿತು.

ಅಲ್ಲಿಯವರೆಗೆ ಜಗನ್ಮೋಹನ ಪ್ಯಾಲೇಸ್ ಅನ್ನು ದೊರೆ ಕುಟುಂಬದವರು ಉಪಯೋಗಿಸುತ್ತಿ ದ್ದರು. 1902ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಸಿಂಹಾಸನವನ್ನೇರಿದಾಗ ಅದ್ದೂರಿ ಸಮಾ ರಂಭ ಇದೇ ಅರಮನೆಯಲ್ಲಿ ಏರ್ಪಡಿಸಲಾಗಿತ್ತು.

ಈ ಸಮಾರಂಭದಲ್ಲಿ ಅಂದಿನ ವೈಸರಾಯ್ ಮತ್ತು ಗವರ್ನರ್ ಜನರಲ್ ಆಗಿದ್ದ ಲಾರ್ಡ್ ಕರ್ಜನ್ ಸಾಕ್ಷಿಯಾಗಿದ್ದ. ಈ ಅರಮನೆಯಲ್ಲಿ ದೊರೆ ಒಡ್ಡೋಲಗ ನಡೆಸುವುದರ ಜೊತೆಗೆ ದಸರಾ ಸಂದರ್ಭದಲ್ಲಿ ಅದ್ದೂರಿ ದಸರಾ ದರ್ಬಾರ್ ಅನ್ನು ನಡೆಸಲಾಗುತ್ತಿತ್ತು. 1915ರಲ್ಲಿ ಈ ಅರಮನೆಯನ್ನು ಕಲಾಕ್ಷೇತ್ರವಾಗಿ ಪರಿವರ್ತಿಸಲಾಯಿತು. 1955ರಲ್ಲಿ ಜಯಚಾಮರಾಜೇಂದ್ರ ಒಡೆಯರ್ ಹೆಸರಿನಲ್ಲಿ ಈ ಅರಮನೆಗೆ ಶ್ರೀ ಜಯ ಚಾಮರಾಜೇಂದ್ರ ಆರ್ಟ್ ಗ್ಯಾಲರಿ ಎಂದು ಮರುನಾಮಕರಣ ಮಾಡಲಾಯಿತು.

ಈ ಆರ್ಟ್ ಗ್ಯಾಲರಿಯಲ್ಲಿ ಚಂದನ, ಅಮೃತಶಿಲೆ, ಪಿಂಗಾಣಿ ಮತ್ತು ಕಲ್ಲಿನಿಂದ ನಿರ್ಮಿಸಿದ ಅನುಪಮ ಕಲಾಸಂಗ್ರಹದ ಜೊತೆಗೆ ಪ್ರಾಚೀನ ಕಲಾಕೃತಿಗಳು, ಪ್ರಾಚೀನ ಸಂಗೀತ ಸಲಕರಣೆ ಗಳು, ಸುಪ್ರಸಿದ್ಧ ಕಲಾವಿದರಾದ ರಾಜಾ ರವಿವರ್ಮ ಮತ್ತು ರೋರಿಚ್ ರಚಿಸಿದ ಮೂಲ ತೈಲವರ್ಣ ಚಿತ್ರಗಳನ್ನು ಕಾಣಬಹುದಾಗಿದೆ. ಎರಡು ಸಾವಿರಕ್ಕೂ ಅಧಿಕ ತೈಲ ಚಿತ್ರಗಳನ್ನು ಇಲ್ಲಿ ಕಾಣಬಹುದಾಗಿದೆ. ಇದರ ಜೊತೆಗೆ ಯುದ್ಧದಲ್ಲಿ ಬಳಸಿದ ಶಸ್ತ್ರಾಸ್ತ್ರಗಳು, ಹಿತ್ತಾಳೆ ಸಾಮಾನುಗಳು, ಸಂಗೀತ ಸಾಧನಗಳು, ಸುಂದರ ವಿಗ್ರಹಗಳು ಮತ್ತು ಪ್ರಾಚೀನ ನಾಣ್ಯ ಹಾಗೂ ನೋಟುಗಳನ್ನೂ ಕಾಣಬಹುದು. ಕಲಾಚಿತ್ತಾರದ ಆಗರ, ಐತಿಹಾಸಿಕ ಕುತೂಹಲಕಾರಿ ಕಲಾ ವೈಭವದ ಪ್ರದರ್ಶನ, ಪ್ರಾಚೀನ ಸಲಕರಣೆ, ಅಂದಿನ ಕಾಲದ ಪ್ರಸಿದ್ಧ ಕಲಾಕಾರರ ಕಲಾಕೃತಿಗಳು ನಮ್ಮನ್ನು ದಿಗ್ಭ್ರಮೆಗೊಳಿಸುತ್ತದೆ ಈ ಆರ್ಟ್ ಗ್ಯಾಲರಿ ಬನ್ನಿ ನೋಡಲು....

**-ರಮೇಶ ನಾಯ್ಕ, ಉಪ್ಪುಂದ, ಬೈಂದೂರು**

# ಸಹಾಯ ಮಾಡಲು ಹಿಂಜರಿಯದಿರಿ



**ಒ**ಬ್ಬ ದೋಣಿಯ ಮಾಲೀಕ ಬಣ್ಣ ಮಾಸಿದ್ದ ತನ್ನ ದೋಣಿಗೆ ಬಣ್ಣ ಬಳಿಯಲು ಪೇಂಟರ್‌ಗೆ ಒಪ್ಪಿಸಿದನು. ಆ ಪೇಂಟರ್ ಆ ದೋಣಿಗೆ ಬಣ್ಣ ಹಚ್ಚುತ್ತಿರುವಾಗ ದೋಣಿಯ ಕೆಳಭಾಗದಲ್ಲಿ ಒಂದು ರಂಧ್ರವನ್ನು ಗಮನಿಸಿದನು. ರಂಧ್ರವನ್ನು ಸರಿಪಡಿಸಿ, ಬಣ್ಣ ಹಚ್ಚಿ ತನ್ನ ಕೆಲಸ ಮುಗಿಸಿ ಹೊರಟು ಹೋದನು.

ಎರಡು ದಿನಗಳ ನಂತರ ದೋಣಿಯ ಮಾಲೀಕರು ರೂ. ಒಂದು ಲಕ್ಷ ತಂದು ಪೇಂಟರ್‌ಗೆ ಕೊಟ್ಟ. ಆಗ ಪೇಟರ್ ನನ್ನ ಹಣವನ್ನು ಆಗಲೇ ಕೊಟ್ಟಿರುವಿರಲ್ಲಾ, ಮತ್ತೆ ಈ ಹಣ ಏಕೆ!! ಎಂದು ಆಶ್ಚರ್ಯಭರಿತ ಸಂದೇಹದಿಂದ ಕೇಳಿದನು.

ಇದು ನೀನು ಪೇಂಟ್ ಮಾಡಿದುದಕ್ಕಲ್ಲ, ನೀನು ದೋಣಿಯ ಆ ರಂಧ್ರವನ್ನು ಮುಚ್ಚಿ ಸರಿಪಡಿಸಿದುದಕ್ಕಾಗಿ! ಎಂದು ಕಣ್ಣೀರಿಡುತ್ತಾ ಆ ದೋಣಿಯ ಮಾಲಿಕ ಹೇಳಿದರು.

ಅದು ತುಂಬಾ ಚಿಕ್ಕದು. ಹಣ ತೆಗೆದುಕೊಳ್ಳುವಷ್ಟು ದೊಡ್ಡದಲ್ಲ ಎಂದನು ಪೇಂಟರ್.

ಅದು ಹಾಗಲ್ಲ, ನಿನಗೆ ಬಣ್ಣ ಬಳಿಯುವ ಕೆಲಸ ಒಪ್ಪಿಸಿದಾಗ ಆ ದೋಣಿಯಲ್ಲಿ ರಂಧ್ರವಿದೆ ಎಂದು ಹೇಳಲು ನಾನು ಮರೆತಿದ್ದೆ. ನಂತರ ನಮ್ಮ ಮಕ್ಕಳು ಸಮುದ್ರದಲ್ಲಿ ಮೀನು ಹಿಡಿಯಲು ದೋಣಿಯಲ್ಲಿ ಹೋದರು. ದೋಣಿಯ ರಂಧ್ರದ ಬಗ್ಗೆ ಅವರಿಗೆ ತಿಳಿದಿರಲಿಲ್ಲ, ನಾನೂ ಸಹ ಅವರಿಗೆ ಹೇಳಲು ಮರೆತಿದ್ದೆ. ಅವರು ಸಮುದ್ರಕ್ಕೆ ಹೋಗಿದ್ದಾರೆ ಎಂದು ತಿಳಿದು ನನಗೆ ವಿಪರೀತ ಭಯ ಶುರುವಾಯಿತು. ನಾನು ರಿಪೇರಿ ಮಾಡು ಎಂದು ನಿನಗೆ ಹೇಳುವುದನನ್ನ ಮರೆ ತಿದ್ದೆ. ಅವರು ಸುರಕ್ಷಿತವಾಗಿ ಹಿಂತಿರುಗಿದ ನಂತರ, ರಂಧ್ರವನ್ನು ತುಂಬಿ ದುರಸ್ತಿ ಮಾಡಿರು ವುದನ್ನು ನಾನು ನೋಡಿದೆ. ನಾನು ಹೇಳದಿದ್ದರೂ ನೀನು ಅದನ್ನು ಸರಿಮಾಡಿದುದ್ದಕ್ಕೆ ನಿನಗೆ ಹೇಗೆ ಕೃತಜ್ಞತೆ ಹೇಳಬೇಕೋ ತಿಳಿಯುತ್ತಿಲ್ಲ. ನಿನ್ನ ಈ ಚಿಕ್ಕ ಸಹಾಯ ನನ್ನ ಮಕ್ಕಳ ಜೀವ ಉಳಿ ಸಿತು ಎಂದೆನ್ನುತ್ತಾ ಆ ದುಡ್ಡನ್ನು ಅಲ್ಲಿಟ್ಟು ಹೊರಟು ಹೋದನು.

ಮಿತ್ರರೇ ಈ ಕಥೆಯ ಸಾರ ಇಷ್ಟೇ-ಯಾರು? ಏನು? ಏಕೆ? ಎಂದು ಆಲೋಚಿಸದೆ ಸಹಾಯ ಮಾಡಿರಿ, ಎಷ್ಟು ಸಣ್ಣದಾದರೂ ಸಹಾಯ ಮಾಡಲು ಹಿಂಜರಿಯದಿರಿ, ಏಕೆಂದರೆ ನೀವು ಮಾಡುವ ಒಂದು ಅತೀ ಚಿಕ್ಕ ಸಹಾಯವೂ ಇನ್ನೊಬ್ಬರಿಗೆ ಮೌಲ್ಯಯುಕ್ತವಾಗಿರಬಹುದು.

**- ಸಂಪಿಗೆ ವಾಸು, ಬಳ್ಳಾರಿ**

# ಬಡಾವಣೆ ಅಭಿವೃದ್ಧಿ: ಗ್ರಾ.ಪ್ರಂ. ಅನುಮೋದನೆ ಅಧಿಕಾರ, ಸುತ್ತೋಲೆ

• ಪ್ರಜೋದಯ ವರದಿ

**ಬೆಂಗಳೂರು:** ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸ್ಥಳೀಯ ಯೋಜನಾ ಪ್ರದೇಶ ಹೊರತುಪಡಿಸಿದ, ಪ್ರದೇಶಗಳಲ್ಲಿ ಬಡಾವಣೆ ಅಭಿವೃದ್ಧಿಗೆ ನಿಯಮಗಳನ್ನು ರೂಪಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಸುತ್ತೋಲೆ ಹೊರಡಿಸಿದೆ.

ಗ್ರಾಮ ಪಂಚಾಯಿತಿಯ ಸ್ಥಳೀಯ ಯೋಜನಾ ಪ್ರದೇಶದ ಹೊರಗೆ ಇರುವ ಹಾಗೂ ಭೂ ಪರಿವರ್ತನೆಗೆ ಒಳಗಾದ ಜಮೀನುಗಳಿಗೆ ಮಾತ್ರ ಈ ನಿಯಮ ಅನ್ವಯವಾಗುತ್ತದೆ. ಪೂರ್ವಾನು ಮೋದನೆ ಪಡೆದ ಈ ಬಡಾವಣೆಗಳಲ್ಲಿನ ನಿವೇಶನಗಳಿಗೆ ಗ್ರಾಮ ಪಂಚಾಯಿತಿಯೇ ಖಾತೆ ಮಾಡಿ ಕೊಡಲಿದೆ. ಭೂಪರಿವರ್ತನೆ ಇಲ್ಲದೆ ಅಭಿವೃದ್ಧಿಪಡಿಸಲಾದ ಬಡಾವಣೆಗಳಿಗೆ ಇದು ಅನ್ವಯವಾಗುವುದಿಲ್ಲ.

ಬಡಾವಣೆ ಅಭಿವೃದ್ಧಿಪಡಿಸುವುದಕ್ಕೂ ಮುನ್ನ ಸಂಬಂಧಿತ, ಪರಿವರ್ತಿತ ಜಮೀನಿನ ಮಾಲೀಕ ಬಡಾವಣೆಯ ವಿನ್ಯಾಸವನ್ನು ರಚಿಸಬೇಕು. ಬಡಾವಣೆಯಲ್ಲಿ ಇರಲಿರುವ ಸಾರ್ವಜನಿಕ ರಸ್ತೆಗಳು, ಉದ್ಯಾನ, ಚರಂಡಿ, ಒಳಚರಂಡಿ, ನೀರಿನ ಕೊಳವೆ ಮಾರ್ಗ, ತ್ಯಾಜ್ಯ ನೀರು ಸಂಸ್ಕರಣ ಘಟಕ, ವಿದ್ಯುತ್ ಜಾಲಗಳಿಗೆ ಸಂಬಂಧಿತ ಇಲಾಖೆ ಅಥವಾ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರ ಪಡೆಯಬೇಕು ಎಂದು ಸುತ್ತೋಲೆಯಲ್ಲಿ ಸೂಚಿಸಿದೆ.

ಈ ಎಲ್ಲಾ ದಾಖಲೆಗಳನ್ನು ಒಳಗೊಂಡ ಅರ್ಜಿಯನ್ನು ಗ್ರಾಮ ಪಂಚಾಯಿತಿಗೆ ಸಲ್ಲಿಸಿ, ಬಡಾ ವಣೆ ಅಭಿವೃದ್ಧಿಪಡಿಸಲು ಅನುಮತಿ ಪಡೆಯಬೇಕು. ಹೀಗೆ ಅಭಿವೃದ್ಧಿಪಡಿಸಲಾದ ಬಡಾವಣೆಯ ಲ್ಲಿನ ಸಾರ್ವಜನಿಕ ರಸ್ತೆಗಳು, ಉದ್ಯಾನ, ಚರಂಡಿ ಒಳಚರಂಡಿ ವ್ಯವಸ್ಥೆ, ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳು, ಸಾರ್ವಜನಿಕ ಬಳಕೆಯ ಪ್ರದೇಶಗಳನ್ನು ಹಕ್ಕು ಪರಿತ್ಯಾಜನಾ ಪತ್ರದ ಮೂಲಕ ಗ್ರಾಮ ಪಂಚಾಯಿತಿಗೆ ಬಿಟ್ಟುಕೊಡಬೇಕು. ಹೀಗೆ ಬಿಟ್ಟು ಕೊಟ್ಟ ನಂತರ ಅವುಗಳ ನಿರ್ವಹಣೆಯ ಹೊಣೆಗಾರಿಕೆಯು ಸಂಬಂಧಿತ ಗ್ರಾಮ ಪಂಚಾಯಿತಿಯದ್ದಾಗಿರಲಿದೆ ಎಂದು ವಿವರಿಸಿದೆ.

ಇನ್ನು ಬಡಾವಣೆಯ ಮೂಲೆ ನಿವೇಶನಗಳು, ನಾಗರಿಕ ಬಳಕೆ (ಸಿ.ಎ) ನಿವೇಶನಗಳು ಮತ್ತು ಮಧ್ಯಂತರ ನಿವೇಶನಗಳನ್ನು ಅಡಮಾನ ಒಪ್ಪಂದದ ಅಡಿಯಲ್ಲಿ ಗ್ರಾಮ ಪಂಚಾಯಿತಿಗೆ ಒಪ್ಪಿಸ ಬೇಕು. ನಿಗದಿತ ಅವಧಿಯಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಿದರೆ, ಅಡಮಾನ ಒಪ್ಪಂದವನ್ನು ರದ್ದುಪಡಿಸಬೇಕು ಮತ್ತು ನಿವೇಶನಗಳನ್ನು ಬಡಾವಣೆ ಅಭಿವೃದ್ಧಿದಾರರಿಗೆ ಹಿಂತಿರುಗಿಸಬೇಕು ಎಂದು ಸೂಚಿಸಿದೆ.

ಅಭಿವೃದ್ಧಿಪಡಿಸಲಾದ ಬಡಾವಣೆಯಲ್ಲಿರುವ ಮೂಲಭೂತ ಸೌಕರ್ಯಗಳು ಯಾವುದೇ ದೋಷದಿಂದ ಕೂಡಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶದಿಂದ, ಅಭಿವೃದ್ಧಿದಾರರು ಗ್ರಾಮ ಪಂಚಾಯಿತಿಗೆ ಖಾತರಿ ಒದಗಿಸಬೇಕು. ಮೂಲ ಸೌಕರ್ಯ ಅಭಿವೃದ್ಧಿಗೆ ತಗುಲಿರುವ ಒಟ್ಟು ವೆಚ್ಚದ ಶೇ.10ರಷ್ಟನ್ನು ಬ್ಯಾಂಕ್ ಭದ್ರತೆ ರೂಪದಲ್ಲಿ, ಒಂದು ವರ್ಷಕ್ಕೆ ಗ್ರಾಮ ಪಂಚಾಯಿತಿ ಇಂಜಿನೀಯರಿಂಗ್ ಇಲಾಖೆಯಲ್ಲಿ ಇರಿಸಬೇಕು. ಒಂದು ವರ್ಷದ ನಂತರ ಅದನ್ನು ವಾಪಸ್ ಪಡೆಯಬಹುದಾಗಿದೆ ಎಂದು ತಿಳಿಸಿದೆ.

# ಆರ್‌ಎಸ್‌ಎಸ್‌ನವರು ದೇವರಿಗಿಂತ ದೊಡ್ಡವರಾ

• ಪ್ರಜೋದಯ ವರದಿ



**ಬೆಂಗಳೂರು:** ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ನೋಂದಣಿ ಆಗುವುದಿಲ್ಲ, ದೇಣಿಗೆ ಲೆಕ್ಕ ಕೊಡುವುದಿಲ್ಲ ಎಂದರೆ ಅವರು ದೇವರಿಗಿಂತ ದೊಡ್ಡವರೇ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಪ್ರಶ್ನಿಸಿದರು.

ಸುದ್ದಿಗಾರರ ಜೊತೆ ಭಾನುವಾರ ಮಾತನಾಡಿದ ಅವರು, ಆರ್‌ಎಸ್‌ಎಸ್ ಕಾನೂನು ಪ್ರಕಾರ ನಡೆದುಕೊಳ್ಳಬೇಕು. ಆರ್‌ಎಸ್‌ಎಸ್‌ಗೆ ದೇಣಿಗೆ ಕೊಡುವವರು ಯಾರು ಎಂಬುದು ತಿಳಿಯಬೇಕು. ದೇವಾಲಯದ ಹುಂಡಿ ಹಣವೂ ಲೆಕ್ಕ ನೀಡಿ, ದೇವಾಲಯದ ಜೀರ್ಣೋದ್ಧಾರಕ್ಕೆ ಬಳಸುತ್ತಾರೆ. ಇವರು ದೇವರಿಗಿಂತ ದೊಡ್ಡವರೆಂದರೆ ಕೇಳಬೇಕೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಚಿತ್ತಾಪುರದಲ್ಲಿ ಕಾರ್ಯಕ್ರಮ ಮಾಡಲು 11 ಸಂಘಟನೆಗಳು ಅನುಮತಿ ಕೋರಿವೆ. ಅಧಿ ಕಾರಿಗಳು ಶಾಂತಿ ಸಭೆ ನಡೆಸು ತ್ತಾರೆ. ಕಾರ್ಯಕ್ರಮದ ಬಗ್ಗೆ ಅಧಿಕಾರಿಗಳು ನ್ಯಾಯಾಲಯಕ್ಕೆ ವರದಿ ನೀಡಲಿದ್ದಾರೆ. ಅದರ ಪ್ರಕಾರ ನ್ಯಾಯಾಲಯ ತೀರ್ಮಾನಿಸಲಿದೆ. ಆ ತೀರ್ಮಾನವನ್ನು ನಾವು ಪಾಲಿಸುತ್ತೇವೆಂದು ಸ್ಪಷ್ಟಪಡಿಸಿದರು.

**ಕಾನೂನು ಪಾಲಿಸಲೇಬೇಕು**

ನ.2ರಂದು ಆರ್‌ಎಸ್‌ಎಸ್ ಪಥ ಸಂಚಲನ ಮಾಡುತ್ತೇವೆಂದು ಕಲ್ಲಡ್ಕ ಪ್ರಭಾಕರ್ ಭಟ್ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, ಕಲ್ಲಡ್ಕ ಪ್ರಭಾಕರ್ ಭಟ್ ಕಾನೂನು, ಸಂವಿಧಾನಕ್ಕಿಂತ ದೊಡ್ಡವರೇ. ಕಾನೂನು ಮೀರಿ ಮಾಡಿದರೆ ಸರ್ಕಾರ ಸುಮ್ಮನಿರುತ್ತದೆಯೇ. ಕಲ್ಲಡ್ಕ ಪ್ರಭಾಕರ್ ಭಟ್ ಅಲ್ಲ, ಅವರಪ್ಪನಾದರೂ ಅಷ್ಟೇ, ಕಾನೂನು ಪ್ರಕಾರವೇ ನಡೆದು ಕೊಳ್ಳಬೇಕೆಂದರು.

ಆರ್‌ಎಸ್‌ಎಸ್ ದೇಣಿಗೆ ಬಗ್ಗೆ ನಿಮ್ಮ ಸರ್ಕಾರ ಈ ಹಿಂದೆ ಯಾಕೆ ತನಿಖೆ ಮಾಡಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್, ಅದೇ ನಮ್ಮಿಂದ ಆಗಿರುವ ತಪ್ಪು. ಸರ್ದಾರ್ ವಲ್ಲಭ ಬಾಯಿ ಪಟೇಲ್ ಅವರಿಂದ ಹಿಡಿದು ಇಂದಿರಾ ಗಾಂಧಿವರೆಗೆ ದೊಡ್ಡ ಮನಸ್ಸು ಮಾಡಿದ ಕಾರಣ ಆರ್‌ಎಸ್‌ಎಸ್‌ನವರು ಈ ಥರ ಬೆಳೆದಿದ್ದಾರೆ. ಹಿಂದುಳಿದವರು, ದಲಿತರನ್ನು ಕಾಲಾಳು ಮಾಡಿಕೊಂಡಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

## ಭಾರತ ಜೊತೆಗಿನ ಸಂಬಂಧಕ್ಕೆ ಧಕ್ಕೆ ತಂದ ಪಾಕ್ ಸ್ನೇಹ ಇಲ್ಲ : ಅಮೇರಿಕಾ

• ಪ್ರಜೋದಯ ವರದಿ

**ವಾಷಿಂಗ್ಟನ್:** ಪಾಕಿಸ್ತಾನ ಜೊತೆಗಿನ ಪಾಲು ದಾರಿಕೆಯನ್ನು ಮತ್ತಷ್ಟು ಹೆಚಿಸಲು ಅಮೇರಿಕಾ ಬಯಸುತ್ತದೆ. ಅದರೆ, ಭಾರತದೊಂದಿಗೆ ಹೊಂದಿರುವ ಐತಿಹಾಸಿಕ ಮತ್ತು ಮಹತ್ವದ ಸಂಬಂಧಕ್ಕೆ ಧಕ್ಕೆ ತಂದುಕೊಂಡು ಇಂತಹ ಬಾಂಧವ್ಯಕ್ಕೆ ನಾವು ಮುಂದಾಗುವುದಿಲ್ಲ ಎಂದು ಅಮೇರಿಕಾ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಆಸಿಯಾನ್ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಮಲೇಷ್ಯಾದ ಕ್ವಾಲಾಲಂಪುರಕ್ಕೆ ತೆರಳುವ ಮುನ್ನ, ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಈ ವಿಚಾರ ದಲ್ಲಿ ಭಾರತದ ಆತಂಕ ಸಹಜವಾದುದು. ಆದರೆ, ಅಮೇರಿಕಾ ಬೇರೆ ಬೇರೆ ದೇಶಗಳೊಂದಿಗೆ ದ್ವಿಪಕ್ಷೀಯ ಸಂಬಂಧ ಹೊಂದಿರಬೇಕಾಗುತ್ತದೆ ಎಂಬುದನ್ನು ಭಾರತ ಅರ್ಥ ಮಾಡಿಕೊಳ್ಳಬೇಕು. ಅದೇ ರೀತಿ ಪಾಕಿಸ್ತಾನದೊಂದಿಗಿನ ರಕ್ಷಣಾ ಸಂಬಂಧ ವೃದ್ಧಿಗೆ ನಾವು ಅವಕಾಶ ಹೊಂದಿದ್ದೇವೆ ಎಂದು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ದೇಶಾದ್ಯಂತ ಎಸ್‌ಐಆರ್: ಆಯೋಗದಿಂದ ಇಂದು ಅಧಿಕೃತ ಮಾಹಿತಿ

• ಪ್ರಜೋದಯ ವರದಿ




**ನವದೆಹಲಿ:** ದೇಶಾದ್ಯಂತ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಗೆ (ಎಸ್‌ಐಆರ್) ಭಾರತೀಯ ಚುನಾವಣಾ ಆಯೋಗ ಮುಂದಾಗಿದ್ದು ಆ ಬಗ್ಗೆ ಮಹತ್ವದ ವಿಚಾರಗಳ ತಿಳಿಸಲು ಅ.27ರ ಸೋಮವಾರ ಸಂಜೆ 4.15ಕ್ಕೆ ಸುದ್ದಿಗೋಷ್ಠಿ ನಡೆಸಲಿದೆ.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, ಚುನಾವಣಾ ಆಯುಕ್ತ ಸುಖ್‌ಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಮಾತನಾಡಲಿದ್ದಾರೆ. ಮೊದಲ ಹಂತವು 2026ರಲ್ಲಿ ವಿಧಾನಸಭಾ ಚುನಾವಣೆಗಳನ್ನು ನಡೆಸುವ ರಾಜ್ಯಗಳನ್ನು ಒಳಗೊಂಡಂತೆ 10ರಿಂದ 15 ರಾಜ್ಯಗಳನ್ನು ಒಳಗೊಳ್ಳುತ್ತದೆ. ಹೊಸ ಮತದಾರರ ನೋಂದಣಿ, ಮೃತ ಹೆಸರು ಅಳಿಸುವಿಕೆ, ನಕಲಿ ನಮೂದುಗಳನ್ನು ತೆಗೆದು ಹಾಕುವುದು ಮತ್ತು ವರ್ಗಾವಣೆಗಳನ್ನು ಒಳಗೊಂಡ ಮತ ದಾರರ ಪಟ್ಟಿಯನ್ನು ನವೀಕರಿಸಲು ಮತ್ತು ಶುದ್ಧೀಕರಿಸಲು ನಿರ್ಣಾಯಕ ಪ್ರಕ್ರಿಯೆಯಾಗಿದೆ.

ಆಯೋಗದ ಈ ಉಪಕ್ರಮವು ವಿಶೇಷವಾಗಿ ತಮಿಳುನಾಡು, ಪಶ್ಚಿಮ ಬಂಗಾಳ, ಕೇರಳ, ಅಸ್ಸಾಂ ಮತ್ತು ಪುದುಚೇರಿ ಯಂತಹ ಶೀಘ್ರದಲ್ಲೇ ಚುನಾವಣೆಗಳು ನಡೆಯಲಿರುವ ರಾಜ್ಯಗಳ ಮೇಲೆ ಕೇಂದ್ರೀಕರಿಸಿದೆ. ಈ ರಾಜ್ಯಗಳಲ್ಲಿ 2026ರಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದ್ದು, ಮತದಾರರ ಪಟ್ಟಿಯ ನಿಖರತೆಯು ಚುನಾವಣಾ ಪ್ರಕ್ರಿಯೆಯ ವಿಶ್ವಾಸಾರ್ಹತೆಯನ್ನು ಖಚಿತಪಡಿಸುತ್ತದೆ.

ಚುನಾವಣಾ ಸಿದ್ಧತೆಗಳು ಅತ್ಯಂತ ತುರ್ತಾಗಿ ಅಗತ್ಯವಿರುವ ರಾಜ್ಯಗಳಲ್ಲಿ ಈ ಹಂತವು ಪ್ರಾರಂಭವಾಗಲಿದೆ. ತಮಿಳುನಾಡಿನಲ್ಲಿ ಡಿಎಂಕೆ ಮತ್ತು ಎಐಎಡಿಎಂಕೆ ನಡುವೆ ತೀವ್ರ ಸ್ಪರ್ಧೆಯಿದ್ದರೆ, ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ವಿರುದ್ಧ ಟಿಎಂಸಿ ಅಧಿಕಾರಕ್ಕೆ ಸವಾಲು ಹಾಕುವುದು ಪ್ರಮುಖ ವಿಷಯವಾಗಿದೆ. ಕೇರಳದಲ್ಲಿ ಎಲ್‌ಡಿಎಫ್- ಯುಡಿಎಫ್ ಸ್ಪರ್ಧೆ, ಅಸ್ಸಾಂನಲ್ಲಿ ಬಿಜೆಪಿಯ ಬಲವಾದ ಹಿಡಿತ ಮತ್ತು ಪುದುಚೇರಿಯಲ್ಲಿ ಕಾಂಗ್ರೆಸ್-ಡಿಎಂಕೆ ಮೈತ್ರಿ ಕೂಟದ ಪಾತ್ರವನ್ನು ಸೂಕ್ಷ್ಮವಾಗಿ ಗಮನಿಸಲಾಗುವುದು.

ಈ ರಾಜ್ಯಗಳಲ್ಲಿ ಮತದಾರರ ಪಟ್ಟಿಯಲ್ಲಿನ ಯಾವ ದೋಷಗಳು ಚುನಾವಣಾ ಫಲಿತಾಂಶಗಳ ಮೇಲೆ ಪರಿಣಾಮ ಬೀರಬಹುದು. ಆದ್ದರಿಂದ ಸಮಯೋಚಿತತೆಯು ನಿರ್ಣಾಯಕವಾಗಿದೆ.

## ವಿಶ್ವ ಕುಸ್ತಿ : ಸೆಮಿಗೆ ಸುಜೀತ್ ಕಲ್ಕಲ್

**ನೋವಿಸಾದ್:** ಭಾರತದ ಸುಜೀತ್ ಕಲ್ಕಲ್ ಅವರು 23 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಶಿಪ್‌ನಲ್ಲಿ ಭಾನುವಾರ ಸೆಮಿಫೈನಲ್ ಪ್ರವೇಶಿಸಿದರು.

ಪುರುಷರ 65 ಕೆ.ಜಿ. ಸ್ಪರ್ಧೆಯಲ್ಲಿ ಛಾಪು ಮೂಡಿಸಿರುವ ಸುಜೀತ್ ಅವರು ಎಂಟರ ಘಟ್ಟದ ಪಂದ್ಯದಲ್ಲಿ 42ರಿಂದ ಬಷೀರ್ ಮಗೊಮೆಡೊವ್ ಅವರನ್ನು ಮಣಿಸಿದರು. ತೀವ್ರ ಪೈಪೋಟಿ ಇದ್ದ ಪಂದ್ಯದಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು ಎದುರಾಳಿಯ ವಿರುದ್ಧ ಮೇಲುಗೈ ಸಾಧಿಸಿದರು. ಇದಕ್ಕೂ ಮುನ್ನ ಸುಜೀತ್ ಅವರು ಮೊದಲ ಸುತ್ತಿನಲ್ಲಿ 12-2 ರಿಂದ ಮಾಲ್ಡೋವಾದ ಫಿಯೊಡರ್ ಸೀವ್‌ದರಿ ವಿರುದ್ಧ ಹಾಗೂ ಎರಡನೇ ಸುತ್ತಿನಲ್ಲಿ 11-0ಯಿಂದ ಪೋಲೆಂಡ್‌ನ ಡಾಮಿನಿಕ್ ಜೇಕಬ್ ವಿರುದ್ಧ ಗೆಲುವು ಸಾಧಿಸಿದ್ದರು.

ನಾಲ್ಕರ ಘಟ್ಟದಲ್ಲಿ ಅವರು ಜಪಾನ್‌ನ ಯೂಟೊ ನಿಶಿಯುಶಿ ವಿರುದ್ಧ ಸೆಣಸಲಿದ್ದಾರೆ. ಆದರೆ, ಶುಭಂ (61 ಕೆ.ಜಿ.) ಹಾಗೂ ವಿಕ್ಕಿ (97 ಕೆ.ಜಿ.) ಅವರು ಕ್ವಾರ್ಟರ್ ಫೈನಲ್‌ನಲ್ಲಿ ಸೋಲುವುದರೊಂದಿಗೆ ಅಭಿಯಾನ ಮುಗಿಸಿದರು.

# ಎಮಿ, ಲಿನ್ಸೆ ಅಮೋಘ ಆಟ: ಇಂಗ್ಲೆಂಡ್ ಜಯ

• ಪ್ರಜೋದಯ ವರದಿ

**ವಿಶಾಖಪಟ್ಟಣಂ:** ಲಿನ್ಸೆ ಸ್ಮಿತ್ ಅಮೋಘ ಬೌಲಿಂಗ್ ಮತ್ತು ಎಮಿ ಜೋನ್ಸ್ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಇಂಗ್ಲೆಂಡ್ ತಂಡವು ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಕೊನೆಯ ಲೀಗ್ ಪಂದ್ಯದಲ್ಲಿ ಜಯ ಭೇರಿ ಬಾರಿಸಿತು.

ಎಸಿಎವಿಡಿಸಿಎ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು 8 ವಿಕೆಟ್‌ಗಳಿಂದ ನ್ಯೂಜಿಲೆಂಡ್ ಎದುರು ಜಯಿಸಿತು. ಅಂಕಪಟ್ಟಿಯಲ್ಲಿ 2ನೇ ಸ್ಥಾನದಲ್ಲಿರುವ ಇಂಗ್ಲೆಂಡ್ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿದೆ.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಲಿನ್ಸೆ ಸ್ಮಿತ್ (30ಕ್ಕೆ3) ಮತ್ತು ನ್ಯಾಟ್ ಶಿವರ್ ಬ್ರಂಟ್ (31ಕ್ಕೆ2) ಅವರ ಬೌಲಿಂಗ್‌ನಿಂದಾಗಿ ನ್ಯೂಜಿಲೆಂಡ್ ತಂಡವು 38.2 ಓವರ್‌ಗಳಲ್ಲಿ 168 ರನ್ ಗಳಿಸಿತು. ಜಾರ್ಜಿಯಾ ಪ್ಲಿಮರ್ (43 ರನ್) ಮತ್ತು ಅಮೆಲಿಯಾ ಕೆರ್ (35 ರನ್) ಆವರು ತಂಡಕ್ಕೆ ಬಲ ತುಂಬಿದರು. ಗುರಿ ಬೆನ್ನಟ್ಟಿದ ತಂಡವು ಕೇವಲ 29.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 172 ರನ್ ಗಳಿಸಿ ಸುಲಭ



ಜಯಸಾಧಿಸಿತು.

ಎಮಿ ಜೋನ್ಸ್ (ಔಟಾಗದೇ 86ರನ್, 92ಎಸೆತ, 11 ಬೌಂಡರಿ, 1 ಸಿಕ್ಸರ್) ಮತ್ತು ಟ್ಯಾಮಿ ಬೆಮೌಂಟ್ (40ರನ್, 38ಎಸೆತ, 7ಬೌಂಡರಿ) ಉತ್ತಮ ಆರಂಭ ನೀಡಿದರು. ಅದರಿಂದಾಗಿ ತಂಡವು ಜಯಿಸಿತು.

ನ್ಯೂಜಿಲೆಂಡ್ ತಂಡವು ಈಗಾಗಲೇ ಸೆಮಿಫೈನಲ್ ರೇಸ್‌ನಿಂದ ಹೊರಬಿದ್ದಿತ್ತು.

**ಸಂಕ್ಷಿಪ್ತ ಸ್ಕೋರು**

ನ್ಯೂಜಿಲೆಂಡ್: 38.2 ಓವರ್‌ಗಳಲ್ಲಿ 168 (ಜಾರ್ಜಿಯಾ ಪ್ಲಿಮರ್ 43, ಅಮೆಲಿಯಾ ಕೆರ್ 35, ಸೋಫಿ ಡಿವೈನ್ 23, ಮ್ಯಾಡಿ ಗ್ರೀನ್ 18, ಲಿನ್ಸೆ ಸ್ಮಿತ್ 30ಕ್ಕೆ3, ನ್ಯಾಟ್ ಶಿವರ್ ಬ್ರಂಟ್ 31ಕ್ಕೆ2, ಅಲಿಸ್ ಕ್ಯಾಪ್ಸಿ 34ಕ್ಕೆ2)

ಇಂಗ್ಲೆಂಡ್: 29.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 172 (ಎಮಿ ಜೋನ್ಸ್ ಔಟಾಗದೇ 86, ಟ್ಯಾಮಿ ಬೀಮೌಂಟ್ 40, ಹೀದರ್ ನೈಟ್ 33, ಸೋಫಿ ಡಿವೈನ್ 20ಕ್ಕೆ1, ಲಿಯಾ ತಹುಹು 9ಕ್ಕೆ1)

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 8 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ್ತಿ: ಎಮಿ ಜೋನ್ಸ್.

# ಕರುಣ್ ನಾಯರ್ ಶತಕ: ಟೀಂ ಇಂಡಿಯಾ ರೇಸ್‌ನಲ್ಲಿ ಕನ್ನಡಿಗ

• ಪ್ರಜೋದಯ ವರದಿ

**ಶಿವಮೊಗ್ಗ:** ಇತ್ತೀಚೆಗಷ್ಟೇ ಭಾರತ ತಂಡದಿಂದ ಹೊರಬಿದ್ದಿದ್ದ ಕನ್ನಡಿಗ ಕರುಣ್ ನಾಯರ್ ರಣಜಿ ಟ್ರೋಫಿಯಲ್ಲಿ ಮತ್ತೆ ಅಬ್ಬರ ಶತಕದ ಸಿಡಿಸುವ ಮೂಲಕ ಮತ್ತೆ ಭಾರತ ತಂಡದ ಬಾಗಿಲು ತಟ್ಟುತ್ತಿದ್ದಾರೆ.

2025-26ರ ರಣಜಿ ಟ್ರೋಫಿಯ 2ನೇ ಸುತ್ತು ಅ.25 ರಿಂದ ಆರಂಭವಾಗಿದ್ದು, ಕರ್ನಾಟಕ ತಂಡ ಗೋವಾ ತಂಡವನ್ನು ಎದುರಿಸುತ್ತಿದೆ. ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಕರ್ನಾಟಕ ಪರ 33 ವರ್ಷದ ಕರುಣ್ ನಾಯರ್ ಸ್ಮರಣೀಯ ಇನ್ನಿಂಗ್ಸ್ ಆಡಿದರು. ತಂಡದ ಪರ ಅತ್ಯಧಿಕ ರನ್ ಬಾರಿಸಿದ ಕರುಣ್ 174 ರನ್ ಬಾರಿಸಿ ಅಜೇಯರಾಗಿ ಉಳಿದರು.

ಗೋವಾ ವಿರುದ್ಧ 267 ಎಸೆತ ಗಳನ್ನು ಎದುರಿಸಿದ ಕರುಣ್ ನಾಯರ್ 3 ಸಿಕ್ಸರ್ ಮತ್ತು 14 ಬೌಂಡರಿ ಸಹಿತ 174 ರನ್ ಕಲೆಹಾಕಿದರು. ಅವರ ಈ ಅಮೋಘ ಇನ್ನಿಂಗ್ಸ್ ಮೂಲಕ ಕರ್ನಾಟಕ ತಂಡ 371 ರನ್ ಗಳಿಸಿದೆ.

ಅದಕ್ಕೆ ಉತ್ತರವಾಗಿ ಮೊದಲ ಇನ್ನಿಂಗ್ಸ್ ಆರಂಭಿಸಿರುವ ಗೋವಾ 2ನೇ ದಿನದಾಟದ ಅಂತ್ಯಕ್ಕೆ 1 ವಿಕೆಟ್



ನಷ್ಟಕ್ಕೆ 28 ರನ್ ಗಳಿಸಿದೆ. ಕರ್ನಾಟಕ ಮೊದಲ ಇನ್ನಿಂಗ್ಸ್‌ನಲ್ಲಿ ಕೇವಲ 65 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತ್ತು, ಆದರೆ ಕರುಣ್ ನಾಯರ್ ಏಕಾಂಗಿ ಹೋರಾಟ ನಡೆಸಿ ತಂಡವನ್ನು 300 ರನ್‌ಗಳ ಗಡಿ ದಾಟಿಸಿದರು.


ಕೆಲವು ತಿಂಗಳ ಹಿಂದೆ ಕರುಣ್ ನಾಯರ್ ಅವರಿಗೆ ಭಾರತ ಟೆಸ್ಟ್ ತಂಡದಲ್ಲಿ ಆಡುವ ಅವಕಾಶ ಸಿಕ್ಕಿತ್ತು. ಆದರೆ ಆ ಸರಣಿಯಲ್ಲಿ ಕರುಣ್ ನಿರೀಕ್ಷಿತ ಪ್ರದರ್ಶನ ನೀಡಲಾಗಲಿಲ್ಲ. ಹೀಗಾಗಿ ಕೇವಲ ಒಂದು ಸರಣಿಯ ನಂತರ ಅವರನ್ನು ತಂಡದಿಂದ ಕೈಬಿಡಲಾಯಿತು. ಆದಾಗ್ಯೂ ಛಲ ಬಿಡದ ಕರುಣ್ ಈ ಶತಕದ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಇದು ಕರುಣ್ ನಾಯರ್ ಅವರ 25ನೇ ಪ್ರಥಮ ದರ್ಜೆ ಶತಕ ಕೂಡ ಆಗಿದೆ.

**ಇಂಗ್ಲೆಂಡ್ ಸರಣಿಯಲ್ಲಿ ಕರುಣ್ ನಾಯರ್ ವೈಫಲ್ಯ**

ಇಂಗ್ಲೆಂಡ್‌ನಲ್ಲಿ ನಡೆದ ಟೆಸ್ಟ್ ಸರಣಿಗಾಗಿ ಕರುಣ್ ನಾಯರ್ ಅವರನ್ನು ಟೀಂ ಇಂಡಿಯಾಕ್ಕೆ ಆಯ್ಕೆ ಮಾಡಲಾಯಿತು. ಆದಾಗ್ಯೂ, ಈ ಪ್ರವಾಸದಲ್ಲಿ ಅವರು ಒಂದೇ ಒಂದು ಮಹತ್ವದ ಇನ್ನಿಂಗ್ಸ್ ಆಡಲಿಲ್ಲ. ಆಡಿದ ಎಂಟು ಇನ್ನಿಂಗ್ಸ್‌ಗಳಲ್ಲಿ ಒಂದರಲ್ಲಿ ಮಾತ್ರ 50 ರನ್‌ಗಳ ಗಡಿ ದಾಟಿದರು, ಅದರಿಂದಾಗಿ ಇತ್ತೀಚಿನ ಭಾರತ-ವೆಸ್ಟ್ ಇಂಡೀಸ್ ಟೆಸ್ಟ್ ಸರಣಿಗೆ ಅವರನ್ನು ತಂಡದಿಂದ ಹೊರಗಿಡಲಾಗಿತ್ತು.

## ಬ್ಯೂರ್‌ವೆಸ್ಟ್‌ನಿಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ

• ಪ್ರಜೋದಯ ವರದಿ



**ಮಾಸ್ಕೋ:** ಅಣ್ವಸ್ತ್ರ ಸಜ್ಜಿತ ಶಕ್ತಿಶಾಲಿ ಬ್ಯೂರ್‌ವೆಸ್ಟ್‌ನಿಕ್ ಕ್ರೂಸ್ ಕ್ಷಿಪಣಿ ಪರೀಕ್ಷೆಯನ್ನು ಯಶಸ್ವಿಯಾಗಿ ನೆರವೇರಿಸಲಾಗಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಭಾನುವಾರ ಹೇಳಿದ್ದಾರೆ. ಈ ಕ್ಷಿಪಣಿ ನಿಯೋಜನೆಗೆ ಅಗತ್ಯವಿ ರುವ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವಂತೆ ಸಶಸ್ತ್ರ ಪಡೆಗಳಿಗೆ ಅವರು ಆದೇಶಿಸಿದ್ದಾರೆ.

ಈ ಕ್ಷಿಪಣಿ ಕಾರ್ಯಾಚರಣೆ ವ್ಯಾಪ್ತಿಗೆ ಮಿತಿ ಇಲ್ಲ. ಇದು ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತೊಯ್ಯುವುದು ಮಾತ್ರ ವಲ್ಲದೇ, ಅಣುಶಕ್ತಿಯಿಂದಲೇ ಕಾರ್ಯ ನಿರ್ವಹಿಸುವುದು ವಿಶೇಷ. ಕ್ಷಿಪಣಿ ಪರೀಕ್ಷೆ ಬಳಿಕ ಸೇನಾ ಸಿಬ್ಬಂದಿ ಮುಖ್ಯಸ್ಥ ಹಾಗೂ ಸೇನೆಯ ಇತರ ಅಧಿಕಾರಿಗಳ ಜೊತೆ ವರ್ಚುವಲ್ ಆಗಿ ಪುಟಿನ್ ಸಭೆ ನಡೆಸಿದರು.

ಬ್ಯೂರ್‌ವೆಸ್ಟ್‌ನಿಕ್ ಬಹಳ ಶಕ್ತಿಶಾಲಿ ಕ್ರೂಸ್ ಕ್ಷಿಪಣಿಯಾಗಿದ್ದು, ಪರೀಕ್ಷಾರ್ಥ ಪ್ರಯೋಗಗಳ ವೇಳೆ ನಿರಂತರ ವಾಗಿ 15 ಗಂಟೆ ಹಾರಾಟ ನಡೆಸಿ ತನ್ನ ಸಾಮರ್ಥ್ಯ ಸಾಬೀತುಪಡಿಸಿದೆ. 14 ಸಾವಿರ ಕಿ.ಮೀ.ನಷ್ಟು ದೂರ ಕ್ರಮಿಸಿದೆ ಎಂದು ಪುಟಿನ್ ಹೇಳಿದರು.

**ಭೇಟಿ:** ಇದಕ್ಕೂ ಮುನ್ನ, ಉಕ್ರೇನ್ ವಿರುದ್ಧ ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಗಳ ಮೇಲ್ವಿಚಾ ರಣೆ ನಡೆಸುತ್ತಿರುವ ಚೀಫ್ ಜನರಲ್ ಸ್ಟಾಫ್ ಜನರಲ್ ವಲೇರಿ ಗೆರಾಸಿಮೋವ್ ಅವರನ್ನು ಭೇಟಿ ಮಾಡಿದ ಪುಟಿನ್, ಕಾರ್ಯಾಚರಣೆ ಕುರಿತು ಚರ್ಚಿಸಿದರು. ಉಕ್ರೇನ್‌ನ 10 ಸಾವಿರಕ್ಕೂ ಅಧಿಕ ಸೈನಿಕರನ್ನು ನಮ್ಮ ಪಡೆಗಳು ಸುತ್ತುವರಿದಿವೆ ಎಂದು ಗೆರಸಿಮೋವ್ ಈ ವೇಳೆ ವಿವರಿಸಿದರು.

# ಸಂಪುಟ ವಿಸ್ತರಣೆ: ಸಿಎಂಗೆ ಹೈಕಮಾಂಡ್ ಸೂಚನೆ

• ಪ್ರಜೋದಯ ವರದಿ



**ಧಾರವಾಡ:** ಎರಡೂವರೆ ವರ್ಷಕ್ಕೆ ಸಂಪುಟ ವಿಸ್ತರಣೆ ಮಾಡುವಂತೆ ಹೈಕಮಾಂಡ್ ಸೂಚನೆ ನೀಡಿರುವುದಾಗಿ ಕಿತ್ತೂರು ಉತ್ಸವದಲ್ಲಿ ಈ ವಿಷಯವನ್ನು ನನಗೆ ತಿಳಿಸಿದರು ಎಂದು ಶಾಸಕ ಎನ್.ಎಚ್. ಕೋನರೆಡ್ಡಿ ಅವರು ತಿಳಿಸಿದರು.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿ, ನಾನೂ ಸಚಿವ ಸ್ಥಾನದ ಆಕಾಂಕ್ಷಿ ಎಂದು ಪದೇಪದೇ ಹೇಳುವುದು ಸರಿಯಲ್ಲ. ಶಾಸಕರ ಕೆಲಸದ ವಿವರ ಪಡೆದು ತೀರ್ಮಾನ ಕೈಗೊಳ್ಳುವುದಾಗಿ ಹೈಕಮಾಂಡ್ ಹೇಳಿದೆ. ಸಿ.ಎಂ. ಬದಲಾ ವಣೆ, ಸಂಪುಟ ವಿಸ್ತರಣೆ ವಿಚಾರ ಕುರಿತು ಶಾಸಕರು ಏನು ಮಾತನಾಡಬಾರದು ಎಂದು ಹೈಕಮಾಂಡ್ ಸೂಚನೆ ನೀಡಿದೆ. ಆ ಸೂಚನೆಗೆ ಬದ್ಧನಾಗಿರುತ್ತೇನೆಂದು ಪ್ರತಿಕ್ರಿ ಯಿಸಿದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಇಲಾಖೆಯಲ್ಲಿ ಬಹಳಷ್ಟು ಸುಧಾರಣೆ ತಂದಿದ್ದಾರೆ. ಈ ಹಿಂದೆ ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾಗಿದ್ದಾಗಲೂ ಅವರು ಚೆನ್ನಾಗಿ ಕೆಲಸ ಮಾಡಿದ್ದಾರೆ. ಅವರೊಬ್ಬ ಸಮರ್ಥ ನಾಯಕ. ಅಂಥಹ ಸಚಿವರನ್ನು ಉಳಿಸಿಕೊಂಡು ಉಳಿದವರನ್ನು ಬದಲಾವಣೆ ಮಾಡುವುದು, ಬಿಡುವುದು ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ವಿವೇಚನೆಗೆ ಬಿಟ್ಟದ್ದು ಎಂದು ಉತ್ತರಿಸಿದರು.


## ರಾಜ್ಯದಲ್ಲಿ ಎರಡು ದಿನ ಭಾರಿ ಮಳೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ವಿವಿಧೆಡೆ ಸೋಮವಾರ ಮತ್ತು ಮಂಗಳವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿಯ ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಸೋಮವಾರ ಆರೆಂಜ್ ಅಲರ್ಟ್ ನೀಡಲಾಗಿದ್ದು, ಈ ಜಿಲ್ಲೆಗಳ ಕೆಲವೆಡೆ ನಿರಂತರ ಗಾಳಿಯೊಂದಿಗೆ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ. ದಕ್ಷಿಣ ಕನ್ನಡ ಜಿಲ್ಲೆಯ ಒಂದೆರಡು ಕಡೆ ಗಂಟೆಗೆ 30ರಿಂದ 40 ಕಿ.ಮೀ. ವೇಗದಲ್ಲಿ ಗಾಳಿಯೊಂದಿಗೆ ಭಾರಿ ಮಳೆಯಾಗುವ ಸಂಭವವಿದೆ. ಉತ್ತರ ಹಾಗೂ ದಕ್ಷಿಣ ಒಳ ನಾಡಿನ ಎಲ್ಲಾ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ.

ಉತ್ತರ ಒಳನಾಡಿನ ಬೆಳಗಾವಿ ಮತ್ತು ಧಾರವಾಡದಲ್ಲಿ ನಿರಂತರ ಗಾಳಿಯೊಂದಿಗೆ



ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬಾಗಲಕೋಟೆ, ಬೀದರ್, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ, ರಾಯ ಚೂರು, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಯಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಬಳ್ಳಾರಿ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿತ್ರದುರ್ಗ, ಚಿಕ್ಕಬಳ್ಳಾಪುರ, ದಾವಣಗೆರೆ, ಕೋಲಾರ, ಕೊಡಗು, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಮತ್ತು ವಿಜಯನಗರ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗುವ ಸಂಭವವಿದೆ.

ಕರಾವಳಿಯ ಎಲ್ಲಾ ಹಾಗೂ ದಕ್ಷಿಣ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮಂಗಳವಾರವೂ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಮುಂದಿನ 1 ವಾರ ಮಳೆ ಮುಂದು ವರಿಯುವ ಬಗ್ಗೆ ಇಲಾಖೆ ಮುನ್ಸೂಚನೆ ನೀಡಿದೆ.

## ದಿಶಾಗೆ ಚಿನ್ನದ ಪದಕ : ಸಿಮೆಂಟ್ ಮಂಜು ಅಭಿನಂದನೆ



ಸಕಲೇಶಪುರ: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ ಕಲಬುರ್ಗಿಯಲ್ಲಿ ಪ್ರಸ್ತುತ ಸಾಲಿನ ಎಂ.ಎಸ್ಸಿ ಗಣಿತ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ಗಳಿಸಿದ ತಾಲ್ಲೂಕಿನ ಬೆಳಗೋಡು ಹೋಬಳಿಯ ಜಮ್ಮನಹಳ್ಳಿ ಗ್ರಾಮದ ಶಿಕ್ಷಕ ಹರೀಶ್ ರೈ ಮತ್ತು ಮಂಜುಳಾ ಅವರ ಪುತ್ರಿ ದಿಶಾ ಹೆಚ್.ರೈ ಅವರಿಗೆ ಶಾಸಕ ಸಿಮೆಂಟ್ ಮಂಜು ಅವರು ಅಭಿನಂದನೆ ಸಲ್ಲಿಸಿದರು.

ದಿಶಾ ಅವರ ಈ ಸಾಧನೆಗೆ ಗೌರವ ಸೂಚಕವಾಗಿ ಮನೆಗೆ ಭೇಟಿ ನೀಡಿದ ಶಾಸಕರು, ಗ್ರಾಮದ ಪ್ರತಿಭಾವಂತ ವಿದ್ಯಾರ್ಥಿನಿ ದಿಶಾ ಅವರ ಯಶಸ್ಸು ಯುವಜನರಿಗೆ ಸ್ಫೂರ್ತಿ ದಾಯಕವಾಗಿದೆ ಎಂದು ಪ್ರಶಂಸಿಸಿದರು.

ಕುನಿಗನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪ್ರಕಾಶ್, ಮುಖಂಡರಾದ ಅಬ್ಬನ ಕೃಷ್ಣಮೂರ್ತಿ, ಶಿವಕುಮಾರ್, ಪ್ರಭು, ರಾಕೇಶ್ ಉಪಸ್ಥಿತರಿದ್ದರು.



ಚನ್ನರಾಯಪಟ್ಟಣ: ತಾಲ್ಲೂಕು ಟಿಎಪಿಸಿಎಂಎಸ್‌ನ ನಿರ್ದೇಶಕ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾದ ತೋಟಿ ನಾಗರಾಜ್ ಅವರನ್ನು ತೋಟಿ ಗ್ರಾಮಸ್ಥರು ಅಭಿನಂದಿಸಿದರು. ಬೆಳಗೀಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಉಪಾಧ್ಯಕ್ಷೆ ಭಾರತಿ ಕೃಷ್ಣಮೂರ್ತಿ, ಮಾಜಿ ಅಧ್ಯಕ್ಷ ಮಂಜು, ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಮಹೇಶ್, ಪ್ರಮುಖರಾದ ಮಹೇಶ್, ನಂಜುಂಡೇಗೌಡ, ರವಿ, ಹರೀಶ್, ಮೋಹನ್, ಅಣ್ಣೇಗೌಡ, ಸಂಪತ್ತು ಇದ್ದರು.

## ಮಾತೃಭೂಮಿ ವೃದ್ಧಾಶ್ರಮದಲ್ಲಿ ಸಾಮಾಜಿಕ ಜಾಗೃತಿ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಎನ್.ಎ.ಡಿ. ಜೆಡ್ ಮ್ಯಾನೇಜ್ಮೆಂಟ್ ಸರ್ವೀಸ್‌ಗಳ ನೇತೃತ್ವದಲ್ಲಿ ಪಟ್ಟಣದ ಜ್ಯೋತಿ ಅಂಗ್ಲ ಮಾಧ್ಯಮ ಶಾಲೆಯವರಿಂದ ಮಾತೃಭೂಮಿ ವೃದ್ಧಾಶ್ರಮಕ್ಕೆ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಭೇಟಿ ನೀಡಿ ಸಾಮಾಜಿಕ ಜಾಗೃತಿ ಕಾರ್ಯಕ್ರಮ ನಡೆಸಿದರು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ವೃದ್ಧರೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿ, ಅಗತ್ಯ ಮನೆ ಉಪಯೋಗಿ ವಸ್ತುಗಳನ್ನು ನೀಡುವ ಮೂಲಕ ಸಹಾಯ ಹಸ್ತ ಚಾಚಿದರು.

ನಾಗಣ್ಣ ಜೈಹಿಂದ್ ಹಾಗೂ ಮುಖ್ಯಶಿಕ್ಷಕ ರಂಗನಾಥ್ ಮಾತನಾಡಿ, ವಿದ್ಯಾರ್ಥಿಗಳ ಸಾಮಾಜಿಕ ಜವಾ ಬ್ದಾರಿಯ ಮನೋಭಾವವನ್ನು ಶ್ಲಾಘಿಸಿ ಇಂತಹ ಚಟುವಟಿಕೆಗಳು ಮುಂದುವರಿಯುವಂತೆ ಪ್ರೇರೇಪಿಸಿ ಮಕ್ಕಳು ಬೆಳೆದ ನಂತರ ತಮ್ಮ ತಂದೆ-ತಾಯಿಯನ್ನು ಅನಾಥಾ ಶ್ರಮಕ್ಕೆ ಸೇರಿಸುವ ಬದಲು ಉತ್ತಮ ಜೀವನ ನಡೆಸಿ ಅವರ ಸೇವೆ ಮಾಡುವುದು ಅನನ್ಯ ವಾದದ್ದು ಎಂದರು.

ಈ ಸಮಯದಲ್ಲಿ ಶಾಲೆಯ ಸ್ಥಾಪಕ ನದೀಮ್, ಹುಡಾ ಫಾತಿಮಾ, ರಯಾನ್, ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನವಿಲೆ ಹೊಸೂರು ಗ್ರಾಮದ ಲಕ್ಷ್ಮೀದೇವಿ ಮಹಿಳಾ ಸ್ವ-ಸಹಾಯ ಸಂಘದ 30ನೇ ವಾರ್ಷಿಕೋತ್ಸವ

# ಕುಟುಂಬ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಮುಖ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದೇಶ ಅಭಿವೃದ್ಧಿ ಹೊಂದಲು ಮಹಿಳೆಯರ ಆರ್ಥಿಕ ಶಿಸ್ತಿನಿಂದ ಸಾಧ್ಯವಾಗಿದ್ದು ಕುಟುಂಬ ನಡೆಸುವಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ನವಿಲೆ ಹೊಸೂರು ಗ್ರಾಮದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಶ್ರೀ ಲಕ್ಷ್ಮೀದೇವಿ ಮಹಿಳಾ ಸ್ವ-ಸಹಾಯ ಸಂಘದ ವತಿಯಿಂದ ಹಮ್ಮಿಕೊಂಡಿದ್ದ 30ನೇ ವರ್ಷದ ವಾರ್ಷಿಕೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕುಟುಂಬದ ನಿರ್ವಹಣೆಯಲ್ಲಿ ಮಹಿಳೆಯರ ಪಾತ್ರ ಮುಖ್ಯವಾಗಿದ್ದು, ತನ್ನ ಗಂಡ ದುಡಿದು ತರುವ ಹಣವನ್ನು ಹಿತಿ ಮಿತಿಯಾಗಿ ಬಳಸಿ ಉಳಿತಾಯಕ್ಕೂ ಹೆಚ್ಚಿನ ಆದ್ಯತೆ ನೀಡುತ್ತಾರೆ. ಅವರ ಈ ಮನೋಭಾವದಿಂದ ದೇಶ ಇಂದು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸಾಲಿನಲ್ಲಿ ಭಾರತ ದೇಶವು ಕೂಡ ಸ್ಥಾನ ಪಡೆಯಲು ಸಾಧ್ಯವಾಗಿದೆ ಎಂದರು.

ಗ್ರಾಮದ ಶ್ರೀ ಲಕ್ಷ್ಮಿದೇವಿ ಸಂಘವು ಕಳೆದ 30 ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿದ್ದು ಇಲ್ಲಿಯವರೆಗೆ ಸುಮಾರು 1 ಕೋಟಿ 28 ಲಕ್ಷ ವಹಿವಾಟನ್ನು ನಡೆಸಿದೆ. ಸಂಘದಲ್ಲಿರುವ ಅನೇಕರು ಸಂಘದಲ್ಲಿ ಸಿಗುವ ಸಾಲವನ್ನು ಉತ್ತಮ ರೀತಿಯಲ್ಲಿ ಸದ್ಬಳಿಕೆ ಮಾಡಿಕೊಂಡು ಕುಟುಂಬ ನಿರ್ವಹಣೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಮುಂದಿನ ದಿನಗಳಲ್ಲೂ ಸಂಘ ಇದೇ ರೀತಿಯಲ್ಲಿ ಅಭಿವೃದ್ಧಿ ಹೊಂದಲಿ ಎಂದರು.



ನವಿಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಈಗಾಗಲೇ ಕೃಷಿ ಪತ್ತಿನ ವ್ಯಾಪ್ತಿಯ ಸ್ವ-ಸಹಾಯ ಸಂಘಗಳಿಗೆ 80 ಲಕ್ಷ ರೂ. ಸಾಲ ನೀಡಲಾಗಿದೆ. ಮುಂಬರುವ ದಿನಗಳಲ್ಲೂ ಉತ್ತಮವಾಗಿ ನಿರ್ವಹಣೆ ಮಾಡುತ್ತಿರುವ ಸಂಘಗಳಿಗೆ ಹೆಚ್ಚಿನ ಸಾಲ ಸೌಲಭ್ಯ ಕಲ್ಪಿಸುವಂತೆ ತಿಳಿಸಲಾಗಿದೆ. ಸಕಾಲದಲ್ಲಿ ಸಾಲ ಮರುಪಾವತಿ ಮಾಡಿದರೆ ಬಡ್ಡಿ ಕೂಡ ಕಡಿಮೆಯಾಗಲಿದೆ ಎಂದು ಮಾಹಿತಿ ನೀಡಿದರು.

ನವಿಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರಾವರಿ ಯೋಜನೆಗಳು, ರಸ್ತೆ, ಒಳಚರಂಡಿ ನಿರ್ಮಾಣದ ಜೊತೆಗೆ ದೇವಾಲಯಗಳ ಜೀರ್ಣೋದ್ಧಾರಕ್ಕೆ ಸೇರಿ ವಿವಿಧ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಮುಂಬರುವ ದಿನಗಳಲ್ಲಿ ಗ್ರಾಮದ ಅಂಬೇಡ್ಕರ್ ಸಮು ದಾಯ ಭವನ ನವೀಕರಣಕ್ಕೆ ಅನುದಾನ ಕಲ್ಪಿಸಲಾಗುವುದೆಂದು ಭರವಸೆ ನೀಡಿದರು.

ಶ್ರೀ ಲಕ್ಷ್ಮಿದೇವಿ ಸ್ವ-ಸಹಾಯ ಸಂಘದ ಹಿರಿಯ ಸದಸ್ಯರನ್ನು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಸನ್ಮಾನಿಸಿದರು.

ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪವಿತ್ರ ಪರಮೇಶ್, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹೊಸೂರು ಚಂದ್ರಪ್ಪ, ಉದ್ಯಮಿ ಚಿಪ್ಪಿನ ಚಂದ್ರು, ಕೃಷಿ ಪತ್ತಿನ ಅಧ್ಯಕ್ಷ ಕುಮಾರಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ವಿ.ಎನ್.ಮಂಜುನಾಥ್, ಶ್ರೀ ನವಿಲೆ ನಾಗೇಶ್ವರ ನೀರು ಬಳಕೆದಾರರ ಸಂಘದ ಅಧ್ಯಕ್ಷ ಎನ್.ಬಿ. ನಾಗರಾಜ್, ಜಿಲ್ಲಾ ವೀರಶೈವ ಸಮಾಜ ಕಾರ್ಯದರ್ಶಿ ಎಂ.ಎಸ್. ಸುರೇಶ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷೆ ಜ್ಯೋತಿ ಬಸವರಾಜ್, ನಕ್ಷತ್ರ ಸಂಜೀವಿನಿ ಮಹಿಳಾ ಒಕ್ಕೂಟದ ಅಧ್ಯಕ್ಷೆ ರತ್ನಮ್ಮ ಚಂದ್ರಪ್ಪ, ಕಾರ್ಯದರ್ಶಿ ಭಾರತಿ, ನವಿಲೆ ಕೃಷಿ ಪತ್ತಿನ ಸಹ ಕಾರ್ಯದರ್ಶಿ ಶೋಭಾ, ಸಂಘದ ಸರ್ವ ಸದಸ್ಯರು ಹಾಗೂ ಗ್ರಾಮಸ್ಥರು ಪಾಲ್ಗೊಂಡಿದ್ದರು.

# ನಕ್ಸಲ್ ಮುಕ್ತ ಭಾರತ ಸನ್ನಿಹಿತ : ಮೋದಿ

• ಪ್ರಜೋದಯ ವರದಿ

**ನವದೆಹಲಿ :** ಆಪರೇಷನ್ ಸಿಂಧೂರ್ ಪ್ರತಿಯೊಬ್ಬ ಭಾರತೀಯನಲ್ಲಿ ಹೆಮ್ಮೆ ಮೂಡಿಸಿದೆ ಎಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಮಾವೋವಾದಿ ಭಯೋತ್ಪಾದನೆಗೆ ಕೊನೆ ಹಾಡುವ ಕಾಲ ಸನ್ನಿಹಿತವಾಗಿದೆ ಎಂದು ಹೇಳಿದ್ದಾರೆ

ಮಾವೋವಾದಿ ಬಾಧಿತ ಪ್ರದೇಶಗಳಲ್ಲಿ ಕತ್ತಲು ತುಂಬಿತ್ತು. ಈ ಬಾರಿಯ ದೀಪಾವಳಿ ಅಂತಹ ಪ್ರದೇಶಗಳಲ್ಲಿ ಬೆಳಕಿನ ದೀಪ ಬೆಳಗಿಸಲಾಗಿದೆ. ಇದರಿಂದ ಈ ಪ್ರದೇಶಗಳಲ್ಲಿ ಸಂತೋಷ ತುಂಬಿದೆ, ಕೆಲವೇ ದಿನಗಳಲ್ಲಿ ದೇಶ ಮಾವೋವಾದಿ, ನಕ್ಸಲ್ ಮುಕ್ತ ಭಾರತವಾಗಲಿದೆ ಎಂದಿದ್ದಾರೆ

ಆಕಾಶವಾಣಿಯ ಮನ್ ಕಿ ಬಾತ್ ಸರಣಿಯ 127ನೇ ಸಂಚಿಕೆಯಲ್ಲಿ ದೇಶವಾಸಿಗಳನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ನಕ್ಸಲ್ ಬಾಧಿತ ಪ್ರದೇಶಗಳಲ್ಲಿ ಜನರು ತಮ್ಮ ಮಕ್ಕಳ ಭವಿಷ್ಯವನ್ನು ಅಪಾಯಕ್ಕೆ ಸಿಲುಕಿಸಿದ ಮಾವೋವಾದಿ ಭಯೋತ್ಪಾದನೆಯ ಸಂಪೂರ್ಣ ನಿರ್ಮೂಲನೆ ಬಯಸಿದ್ದಾರೆ. ಅಂತಹ ಕಾಲ ಸಮೀಪಿಸಿದೆ. ಕೆಲವು ದಿನಗಳ ಹಿಂದೆ ದೀಪಾವಳಿಯನ್ನು ಆಚರಿಸಿದ್ದೆವು ಮತ್ತು ಈಗ ಹೆಚ್ಚಿನ ಸಂಖ್ಯೆಯ ಜನರು ಛತ್ ಪೂಜೆಯಲ್ಲಿ ನಿರತರಾಗಿದ್ದಾರೆ. ಛತ್‌ನ ಮಹಾಪರ್ವ ಸಂಸ್ಕೃತಿ, ಪ್ರಕೃತಿ ಮತ್ತು ಸಮಾಜದ ನಡುವಿನ ಆಳವಾದ ಏಕತೆಯ ಪ್ರತಿಬಿಂಬವಾಗಿದೆ ಎಂದು ಹೇಳಿದರು.

ಸಮಾಜದ ಪ್ರತಿಯೊಂದು ವಿಭಾಗ ಛತ್



ಘಾಟ್‌ಗಳಲ್ಲಿ ಒಟ್ಟಿಗೆ ಸೇರುತ್ತದೆ. ದೃಶ್ಯ ಭಾರತದ ಸಾಮಾಜಿಕ ಏಕತೆಗೆ ಅತ್ಯಂತ ಸುಂದರವಾದ ಉದಾಹರಣೆಯಾಗಿದೆ. ಹಬ್ಬಗಳ ಸಂದರ್ಭದಲ್ಲಿ, ನಿಮ್ಮೆಲ್ಲರಿಗೂ ಪತ್ರ ಬರೆದಿದ್ದೇನೆ. ಪತ್ರದಲ್ಲಿ, ವರ್ಷದ ಹಬ್ಬಗಳನ್ನು ಇನ್ನಷ್ಟು ರೋಮಾಂಚಕಗೊಳಿಸಿದ ದೇಶದ ಸಾಧನೆಗಳನ್ನು ಉಲ್ಲೇಖಿಸಿದ್ದು, ನಾಗರಿಕರಿಂದ ಉತ್ತಮ ಸ್ಪಂದನೆ ದೊರೆತಿದೆ ಎಂದು ತಿಳಿಸಿದ್ದಾರೆ

ಐದು ವರ್ಷಗಳ ಹಿಂದೆ, ಗುಜರಾತ್‌ನ ಅರಣ್ಯ ಇಲಾಖೆಯ ತಂಡಗಳು ಅಹಮದಾಬಾದ್ ಬಳಿಯ ಧೋಲೆರಾ ಬಳಿ ಮ್ಯಾಂಗ್ರೋವ್‌ಗಳನ್ನು ನೆಡಲು ಪ್ರಾರಂಭಿಸಿದವು ಮತ್ತು ಇಂದು, ಧೋಲೆರಾ ಕರಾವಳಿಯಲ್ಲಿ ಮ್ಯಾಂಗ್ರೋವ್‌ಗಳು 3,500 ಹೆಕ್ಟೇರ್‌ಗಳಲ್ಲಿ ಹರಡಿವೆ. ಈ ಮ್ಯಾಂಗ್ರೋವ್‌ಗಳ ಪರಿಣಾಮ ಗೋಚರಿಸುತ್ತದೆ. ಪ್ರದೇಶದಾದ್ಯಂತ. ಅಲ್ಲಿನ ಪರಿಸರ ವ್ಯವಸ್ಥೆಯಲ್ಲಿ ಡಾಲ್ಫಿನ್‌ಗಳ ಸಂಖ್ಯೆ ಹೆಚ್ಚಾಗಿದೆ ಎಂದಿದ್ದಾರೆ.

### ಕರ್ನಾಟಕ ಸೇರಿ ವಿವಿಧೆಡೆ ಬೆಳೆಯುವ ಕಾಫಿ ಜಗತ್ಪ್ರಸಿದ್ಧಿ

ನವದೆಹಲಿ : ಕರ್ನಾಟಕ ಸೇರಿ ದೇಶದ ವಿವಿಧೆಡೆ ಬೆಳೆಯುವ ಕಾಫಿ ಜಗತ್ಪ್ರಸಿದ್ಧಿ ಪಡೆಯುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ಕರ್ನಾಟಕ, ಕೇರಳ, ತಮಿಳುನಾಡು ಸೇರಿ ದೇಶದ ವಿವಿಧೆಡೆ ಬೆಳೆಯುತ್ತಿರುವ ಕಾಫಿ, ಜಾಗತಿಕವಾಗಿ ಪ್ರಸಿದ್ಧಿ ಪಡೆಯುತ್ತಿದೆ. ಇತ್ತೀಚೆಗೆ, ಈಶಾನ್ಯ ಭಾರತದಲ್ಲೂ ಕಾಫಿ ಬೆಳೆಯಲಾಗುತ್ತಿದ್ದು, ಭಾರತದ ವಿವಿಧ ಬಗೆಯ ಕಾಫಿಗೆ ಇರುವ ಗುರುತನ್ನು ಬಲಪಡಿಸುತ್ತಿದೆ ಎಂದಿದ್ದಾರೆ. ಭಾರತೀಯ ಕಾಫಿ ಪ್ರಪಂಚದಾದ್ಯಂತ ಬಹಳ ಜನಪ್ರಿಯವಾಗುತ್ತಿದೆ. ಕರ್ನಾಟಕದ ಚಿಕ್ಕಮಗಳೂರು, ಕೊಡಗು ಮತ್ತು ಹಾಸನ, ತಮಿಳುನಾಡಿನ , ಪಳನಿ, ಶೇವರಾಯ್, ನೀಲಗಿರಿ ಮತ್ತು ಅಣ್ಣಾಮಲೈ ಪ್ರದೇಶಗಳಾಗಿರಬಹುದು. ಕರ್ನಾಟಕ-ತಮಿಳುನಾಡು ಗಡಿಯಲ್ಲಿರುವ ನೀಲಗಿರಿ ಪ್ರದೇಶವಾಗಿರಬಹುದು ಅಥವಾ ಕೇರಳದ ವಯನಾಡ್, ತಿರುವಾಂಕೂರು ಮತ್ತು ಮಲಬಾರ್ ಪ್ರದೇಶಗಳಾಗಿರಬಹುದು. ದೇಶದ ವಿವಿಧೆಡೆ ಬೆಳೆಯುವ ಕಾಫಿಯ ವೈವಿಧ್ಯತೆ ನಿಜಕ್ಕೂ ಗಮನಾರ್ಹವಾಗಿದೆ ಎಂದು ಅವರು ಹೇಳಿದರು.

ಕೊರಾಪುಟ್ (ಒಡಿಶಾ) ಕಾಫಿ ಕೂಡ ಜನಪ್ರಿಯತೆಯನ್ನು ಗಳಿಸುತ್ತಿದೆ ಎಂದು ಮೋದಿ ಅವರು, ಕೆಲವರು, ಕಾಫಿ ಕೃಷಿಯ ಮೇಲಿನ ತಮ್ಮ ಉತ್ಸಾಹವನ್ನು ಮುಂದುವರಿಸಲು ಲಾಭದಾಯಕ ಕಾರ್ಪೊರೇಟ್ ಉದ್ಯೋಗಗಳನ್ನು ತೊರೆದಿದ್ದಾರೆಂದೂ ಶ್ಲಾಘಿಸಿದರು. ಕೆಲಸ ಬಿಟ್ಟು ಕಾಫಿ ಬೆಳೆಯಲು ಮುಂದಾದವರು ಯಶಸ್ಸು ಗಳಿಸಿದ್ದಾರೆ. ಹಲವು ಮಹಿಳೆಯರ ಜೀವನ ಸಹ ಇದರಿಂದ ಹಸನಾಗಿದೆ. ವಿಶಿಷ್ಟ ವಾತಾವರಣಕ್ಕೆ ಹೆಸರುವಾಸಿಯಾಗಿರುವ ಕೊರಾಪುಟ್ ಪ್ರದೇಶದಲ್ಲಿ ಅತ್ಯುತ್ತಮ ದರ್ಜೆಯ ಅರೇಬಿಕಾ ಕಾಫಿ ಬೆಳೆಯಲಾಗುತ್ತದೆ. ಇಲ್ಲಿ 5,000 ಹೆಕ್ಟೇರ್ ಪ್ರದೇಶದಲ್ಲಿ ಕಾಫಿ ಬೆಳೆಯಲಾಗುತ್ತಿದೆ. ದೇಶದ ಒಟ್ಟು ಕಾಫಿ ಉತ್ಪನ್ನದ ಪೈಕಿ ಶೇ.70ರಷ್ಟನ್ನು ಕರ್ನಾಟಕದಲ್ಲೇ ಬೆಳೆಯಲಾಗುತ್ತಿದೆ. ನಂತರದ ಸ್ಥಾನದಲ್ಲಿ ಕೇರಳ, ತಮಿಳುನಾಡು, ಆಂಧ್ರ ಪ್ರದೇಶ ಮತ್ತು ಒಡಿಶಾಗಳಿವೆ.

ಹಿಂದಿನದಕ್ಕೆ ಹೋಲಿಸಿದರೆ ಏಡಿಗಳು ಮತ್ತು ಇತರ ಜಲಚರಗಳ ಸಂಖ್ಯೆಯೂ ಹೆಚ್ಚಾಗಿದೆ. ವಲಸೆ ಹಕ್ಕಿಗಳು ಸಹ ಈಗ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ಗುಜರಾತ್‌ನ ಕಚ್‌ನಲ್ಲಿ ಮ್ಯಾಂಗ್ರೋವ್ ಕಲಿಕಾ ಕೇಂದ್ರವನ್ನು ಸಹ ಸ್ಥಾಪಿಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಪರ್ವತಗಳು ಮತ್ತು ಬಯಲು ಪ್ರದೇಶಗಳಲ್ಲಿ ಮಣ್ಣನ್ನು ಒಟ್ಟಿಗೆ ಬಂಧಿಸುವ ಕಾಡುಗಳಿರುವಂತೆ, ಸಮುದ್ರ ತೀರಗಳಲ್ಲಿ ಮ್ಯಾಂಗ್ರೋವ್‌ಗಳಿಗೆ ಸಮಾನವಾದ ಪ್ರಾಮುಖ್ಯತೆ ಇದೆ. ಮ್ಯಾಂಗ್ರೋವ್‌ಗಳು ಉಪ್ಪು ನೀರು ಮತ್ತು ಸಮುದ್ರದ ಜೌಗು ಭೂಮಿಯಲ್ಲಿ ಬೆಳೆಯುತ್ತವೆ. ಸಮುದ್ರ ಪರಿಸರ ವ್ಯವಸ್ಥೆಯ ಪ್ರಮುಖ ಭಾಗವಾಗಿದೆ. ಸುನಾಮಿಗಳು ಅಥವಾ ಚಂಡಮಾರುತಗಳಂತಹ ವಿಪತ್ತುಗಳು ಸಂಭವಿಸಿದಾಗ ಈ ಮ್ಯಾಂಗ್ರೋವ್‌ಗಳು ಬಹಳ ಸಹಾಯಕವಾಗಿವೆ ಎಂದು ತಿಳಿಸಿದ್ದಾರೆ

**ಸರ್ದಾರ್ 150ನೇ ವರ್ಷ ವಿಶೇಷ**

ಸರ್ದಾರ್ ಪಟೇಲ್ ಅವರ 150 ನೇ ಜನ್ಮ ದಿನಾಚರಣೆ ಇಡೀ ದೇಶಕ್ಕೆ ಬಹಳ ವಿಶೇಷವಾದ ಸಂದರ್ಭವಾಗಿದೆ. ಆಧುನಿಕ ಕಾಲದಲ್ಲಿ ಸರ್ದಾರ್ ಪಟೇಲ್ ರಾಷ್ಟ್ರದ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರು ಎಂದು ಪ್ರಧಾನಿ ನರೇಂದ್ರ ಮೋದಿ ಗುಣಗಾನ ಮಾಡಿದ್ದಾರೆ.

ಗಾಂಧೀಜಿಯಿಂದ ಪ್ರೇರಿತರಾಗಿ ಸ್ವಾತಂತ್ರ್ಯ ಚಳವಳಿಗೆ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡ ಸರ್ದಾರ್ ಅವರು ಖೇಡಾ ಸತ್ಯಾಗ್ರಹದಿಂದ ಬೋರ್ಸಾದ್ ಸತ್ಯಾಗ್ರಹದವರೆಗಿನ ಹಲವಾರು ಚಳವಳಿಗಳಿಗೆ ಅವರ ಕೊಡುಗೆಗಳು ಇಂದಿಗೂ ಸ್ಮರಣೀಯವಾಗಿವೆ ಎಂದಿದ್ದಾರೆ. ಅಕ್ಟೋಬರ್ 31 ರಂದು ಸರ್ದಾರ್ ಸಾಹೇಬ್ ಅವರ ಜನ್ಮ ದಿನಾಚರಣೆಯಂದು ದೇಶಾದ್ಯಂತ ಆಯೋಜಿಸಲಾದ ಏಕತಾ ಓಟದಲ್ಲಿ ಭಾಗವಹಿಸಲು ಹೆಮ್ಮೆಯಾಗಿದೆ ಎಂದರು.

## ಬರಹಳ್ಳಕ್ಕೆ ಸೇರುತ್ತಿದೆ ಜಾವಗಲ್ ಕೆರೆ ನೀರು

» ಮೊದಲನೇ ಪುಟದಲ್ಲಿ

ಬರಹಳ್ಳಕ್ಕೆ ಹೆಚ್ಚಾಗಿ ಹರಿದು ಹೋಗುತ್ತಿದ್ದ ನೀರಿನ ಪ್ರಮಾಣವನ್ನು ಅಧಿಕಾರಿಗಳು, ಗ್ರಾಮಸ್ಥರು, ಗ್ರಾಮ ಪಂಚಾಯಿತಿ ಸದಸ್ಯರು, ಮಾಜಿ ಸದಸ್ಯರುಗಳ ಸಹಕಾರದೊಂದಿಗೆ ಮರಳು ಮೂಟೆ ಕಟ್ಟಿ ನೀರಿನ ಪ್ರಮಾಣ ಕಡಿಮೆ ಮಾಡಿದರು. ನಾಗಲಾಪುರ ಕಟ್ಟೆಯಿಂದ ಜಾವಗಲ್ ಕೆರೆ ವರೆಗಿನ 3 ಕಿ.ಮೀ. ಫೀಡರ್ ಚಾನೆಲ್ ಮೇಲ್ಭಾಗದಲ್ಲಿರುವ ಜಮೀನಿನವರು, ಬಸ್ ನಿಲ್ದಾಣ ಪಕ್ಕದಲ್ಲಿರುವ ವರ್ತಕರು, ಹೌಸಿಂಗ್ ಬೋರ್ಡ್ ಖಲಂದರ್ ನಗರ ನಿವಾಸಿಗಳು ತ್ಯಾಜ್ಯಗಳನ್ನು ನಾಲೆಗೆ ಹಾಕಿ, ನಾಲೆ ಮುಚ್ಚಲು ಕಾರಣವಾಗಿದ್ದಾರೆ. ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿ ನಾಲೆಗೆ ಅಡ್ಡಲಾಗಿ ಕೆಲವರು ಪರವಾನಗೆ ಪಡೆಯದೇ ಹರಿಯುವ ನೀರಿಗೆ ಅಡ್ಡಲಾಗಿ ತಗಡು, ಇನ್ನಿತರ ತ್ಯಾಜ್ಯಗಳನ್ನು ತುಂಬಿರುತ್ತಾರೆ. ಈ ಬಗ್ಗೆ ಗ್ರಾಮ ಪಂಚಾಯತ್ ಸಣ್ಣ ನೀರಾವರಿ ಇಲಾಖೆಯವರು ಕೂಡಲೇ ಕ್ರಮ ಕೈಗೊಂಡು ಅಡ್ಡಗಟ್ಟುವಿಕೆ, ತ್ಯಾಜ್ಯ ತುಂಬದಂತೆ ಕ್ರಮ ತೆಗೆದು ಕೊಳ್ಳುವಂತೆ ಗ್ರಾಮಸ್ಥರು ಒತ್ತಾಯಪಡಿಸಿದ್ದಾರೆ.

ಸಣ್ಣ ನೀರಾವರಿ ಇಲಾಖೆಯ ಎಇಇ ಸುಂದರರಾಜು ಅವರು ಮಾತನಾಡಿ, ಮಳೆಯಿಂದ ಹಾನಿಗೊಂಡ ಪ್ರದೇಶಕ್ಕೆ ಭೇಟಿ ನೀಡಿ ಪರಿಶೀಲಿಸುತ್ತಿದ್ದು, ಪ್ರಸ್ತುತ ಸುರಿಯುತ್ತಿರುವ ಭಾರೀ ಮಳೆಯಿಂದ ಜಾವಗಲ್ ದೊಡ್ಡಕೆರೆಗೆ ನೀರು ಹರಿದು ಬರುವ ಪೋಷಕ ಕಾಲುವೆಯು ಹಾನಿಯಾಗಿ ಅಪಾರ ಪ್ರಮಾಣದ ನೀರು ಸೋರಿಕೆಯಾಗಿ ಜಾವಗಲ್ ಗ್ರಾಮದ ಹಲವು ಮನೆಗಳಿಗೆ ನೀರು ಹರಿದು ಜನ ವಾಸ್ತವ್ಯಕ್ಕೆ ತೊಂದರೆಯಾಗಿರುತ್ತದೆ. ಗ್ರಾಮ ಪಂಚಾಯಿತಿಯ ಸಹಯೋಗದೊಂದಿಗೆ ತಾತ್ಕಾಲಿಕವಾಗಿ ನಾಲೆಯನ್ನು ಸ್ವಚ್ಛಗೊಳಿಸಿ ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಪರಿಸ್ಥಿತಿಯ ಸಮಸ್ಯೆಗಳ ಕುರಿತು ಮನೆ ಸರ್ಕಾರದ ಕಾರ್ಯದರ್ಶಿಯವರೊಂದಿಗೆ ಮೌಖಿಕವಾಗಿ ಚರ್ಚಿಸಲಾಗಿದ್ದು, ನಾಲೆಯ ದುರಸ್ತಿ ಹಾಗೂ ಸದರಿ ಸಮಸ್ಯೆಗಳ ಬಗ್ಗೆ ಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಮಾಜಿ ಸಚಿವರು ಸೂಚಿಸಿದ್ದಾರೆಂದರು.

## ನಗರದಲ್ಲಿ ಆರ್‌ಎಸ್‌ಎಸ್ ಆಕರ್ಷಕ ಪಥ ಸಂಚಲನ

» ಮೊದಲನೇ ಪುಟದಿಂದ

ಜೈ ಶ್ರೀರಾಮ್, ವಂದೇ ಮಾತರಂ, ನಾವೆಲ್ಲಾ ಒಂದು, ನಾವೆಲ್ಲಾ ಹಿಂದು, ಎದೆ ತಟ್ಟಿ ಹೇಳು ನಾನೊಬ್ಬ ಹಿಂದು, ಜಮ್ಮು ಮತ್ತು ಕಾಶ್ಮೀರ ಭಾರತ ಮಾತೆಯ ಸಿಂಧೂರ ಎಂಬ ವಿವಿಧ ಘೋಷಣೆಗಳು ಮೊಳಗಿದವು. ಮಹಿಳೆಯರು, ಮಕ್ಕಳು ಸಾಂಪ್ರದಾಯಿಕ ಉಡುಗೆ ಧರಿಸಿ, ಕೇಸರಿ ಭಾವುಟ ಹಿಡಿದು ಸ್ವಯಂ ಸೇವಕರನ್ನು ಸ್ವಾಗತಿಸಿದರು. ಕೆಲ ಮಕ್ಕಳು ಸ್ವಾತಂತ್ರ್ಯ ಹೋರಾಟಗಾರರ ವೇಷ ಭೂಷಣದಲ್ಲಿ ಗಮನ ಸೆಳೆದರು. ಶಾಸಕ ಹೆಚ್.ಪಿ.ಸ್ವರೂಪ್ ಅವರು ಪುಷ್ಪವೃಷ್ಠಿ ಮೂಲಕ ಗೌರವಿಸಿದರು.

**ಆರ್‌ಎಸ್‌ಎಸ್‌ಗೆ ನೂರು-ಪಂಚ ಪರಿವರ್ತನೆ**

ಆರ್‌ಎಸ್‌ಎಸ್‌ಗೆ ನೂರು ವರ್ಷ ಪೂರೈಸಿದ ಹಿನ್ನಲೆಯಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಥ ಸಂಚಲನವನ್ನು ರಾಷ್ಟ್ರಾದ್ಯಂತ ಹಮ್ಮಿಕೊಳ್ಳಲಾಗಿದೆ. ಹಿಂದುತ್ವ, ಸ್ವದೇಶಿ ಚಿಂತನೆಗಳನ್ನು ಆದ್ಯತೆಯಾಗಿಟ್ಟುಕೊಂಡು ಕೆಲಸ ಮಾಡುತ್ತಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ 100ನೇ ವರ್ಷದ ಆಚರಣೆಗೆ ಪಂಚ ಪರಿವರ್ತನೆ ಯೋಜನೆ ಹಾಕಿ ಕೊಂಡಿದೆ. ಕುಟುಂಬ ಪ್ರಬೋಧನ, ಪರಿಸರ ಸಂರಕ್ಷಣೆ, ಸಾಮರಸ್ಯ, ಸ್ವದೇಶಿ ಚಿಂತನೆ, ನಾಗರಿಕ ಶಿಷ್ಟಾಚಾರ ಧ್ಯೇಯೋದ್ದೇಶಗಳನ್ನು ಒಳಗೊಂಡಿದೆ.

## ಶಿಕ್ಷಣವಿದ್ದರೂ ಅಲ್ಪನಾಗುತ್ತಿರುವ ಮನುಷ್ಯ

» ಮೊದಲನೇ ಪುಟದಿಂದ

ಕಾರ್ಯಕ್ರಮಗಳಿಗೆ ಸರ್ಕಾರದಿಂದ ಇದೂವರೆಗೂ ಅನುದಾನ ಅಥವಾ ಆರ್ಥಿಕ ನೆರವು ಸಿಗುತ್ತಿಲ್ಲ. ಸರ್ಕಾರದ ಆಶ್ರಯದಲ್ಲಿ ನಡೆಯಬೇಕಿದೆ. ಸರ್ಕಾರದ ಗಮನ ಸೆಳೆದು ಸರ್ಕಾರದ ಮಟ್ಟದಿಂದಲೇ ಸಹಕಾರ ಕಲ್ಪಿಸುವಂತೆ ಮನವಿ ಮಾಡಲಾಗುವುದೆಂದರು.

ಮಕ್ಕಳ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸಿ.ಎನ್.ಅಶೋಕ್ ಅವರು ಮಾತನಾಡಿ, ಮಕ್ಕಳಲ್ಲಿರುವ ಸಾಹಿತ್ಯ ಪ್ರತಿಭೆಯನ್ನು ಮುಖ್ಯ ಭೂಮಿಕೆಗೆ ತರುವ ಪ್ರಯತ್ನ ಯಶಸ್ವಿಯಾಗಿದ್ದು ನಿರಂತರವಾಗಿ ಮುಂದುವರಿಯಲಿದೆ. ಆದಿಚುಂಚನಗಿರಿ ಮಠದ ಶ್ರೀಗಳು ಭದ್ರ ಬುನಾದಿ ಹಾಕಿಕೊಟ್ಟಿರುವ ಮಕ್ಕಳ ಸಾಹಿತ್ಯ ಪರಿಷತ್ ಹೆಮ್ಮರವಾಗಿ ಬೆಳೆದು ದೆಹಲಿ ವರೆಗೂ ತಲುಪಿದೆ. ಮುಂದಿನ ದಿನಗಳಲ್ಲಿ ಅಮೇರಿಕಾ ಹಾಗು ದುಬೈನಲ್ಲಿ ಆಚರಣೆ ಮಾಡಲಾಗುತ್ತಿದೆ ಎಂದರು.

ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಆಗಮಿಸಿದ್ದ ಜಿಲ್ಲಾಧ್ಯಕ್ಷರು ತಮ್ಮ ಕಾರ್ಯಕ್ಷೇತ್ರದ ಬಗ್ಗೆ ಮಾಹಿತಿ ನೀಡಿದರು. ಮುಂದಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಲಾಯಿತು. ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಸಿ.ಎನ್. ವೆಂಕಟೇಶ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್, ಪರಿಷತ್ ಪ್ರಧಾನ ಕಾರ್ಯದರ್ಶಿ ಸಿದ್ದೇಶ್ ಇತರರಿದ್ದರು.

## ಮತದಾರರ ಋಣ ತೀರಿಸುವುದು ನನ್ನ ಜವಾಬ್ದಾರಿ



• ಪ್ರಜೋದಯ ವರದಿ

**ಬೇಲೂರು:** ಮತ ನೀಡಿ ಚುನಾವಣೆಯಲ್ಲಿ ಗೆಲುವು ಸಾಧಿಸಲು ಕಾರಣರಾದ ಸಾರ್ವಜನಿಕರ ಋಣ ತೀರಿಸುವುದು ನನ್ನ ಜವಾಬ್ದಾರಿ. ಅನು ದಾನಕ್ಕಾಗಿ ಸರ್ಕಾರದೊಂದಿಗೆ ಸಂಘರ್ಷ ಮಾಡಲು ನಾನು ಸಿದ್ದನಿದ್ದೇನೆಂದು ಶಾಸಕ ಹೆಚ್.ಕೆ. ಸುರೇಶ್ ಅವರು ಹೇಳಿದರು.

ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ ಲಕ್ಷ್ಮೀಪುರ ಹಾಗು ಪ್ರಸಾದಿಹಳ್ಳಿಯಲ್ಲಿ ಕಾಂಕ್ರಿಟ್ ರಸ್ತೆ ಉದ್ಘಾಟಿಸಿ ಮಾತನಾಡಿದ ಅವರು, ಲೋಕೋಪಯೋಗಿ ಇಲಾಖೆಯಿಂದ ಸುಮಾರು 68 ಲಕ್ಷ ರೂ. ವೆಚ್ಚದಲ್ಲಿ 395 ಮೀಟರ್ ಉದ್ದದ ಕಾಂಕ್ರಿಟ್ ರಸ್ತೆ ನಿರ್ಮಿಸ ಲಾಗಿದೆ. ಗ್ರಾಮೀಣ ಭಾಗಕ್ಕೆ ಮೂಲಸೌಕರ್ಯ ಒದಗಿಸುವುದು ನಮ್ಮ ಕರ್ತವ್ಯ. ಹಳ್ಳಿಗಳ ಉದ್ದಾರವಾಗದೆ ದೇಶ ಉದ್ದಾರವಾಗದು. ಹಳ್ಳಿಗಳ ಉದ್ದಾರಕ್ಕೆ ನಾನು ಸರ್ಕಾರದ ಜೊತೆ ಸಂಘರ್ಷಕ್ಕೂ ಸಿದ್ದ ಎಂದರು.

ತಾಲ್ಲೂಕಿನ ಮತದಾರರು ನನ್ನ ಮೇಲೆ ನಂಬಿಕೆ ಇಟ್ಟು ಮತ ನೀಡಿದ್ದಾರೆ. ಅವರ ಕನ ಸನ್ನು ನನಸು ಮಾಡಬೇಕಾದುದ್ದು ನನ್ನ ಜವಾಬ್ದಾರಿ. ಹಲವಾರು ವರ್ಷಗಳಿಂದ ಲಕ್ಷ್ಮೀಪುರ ಹಾಗು ಪ್ರಸಾದಿಹಳ್ಳಿ ರಸ್ತೆ ಹದಗೆಟ್ಟಿತ್ತು. ಚುನಾವಣೆ ಮೊದಲು ಸನ್ಯಾಸಿಹಳ್ಳಿ ವ್ಯಾಪ್ತಿಯ ಮತದಾರ ಪ್ರಭುಗಳು ರಸ್ತೆ ಸರಿಪಸಬೇಕೆಂದು ಮನವಿ ಮಾಡಿದ್ದರು. ಈಗ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇನೆ. ಬೇಲೂರು ತಾಲ್ಲೂಕಿನ ಅಭಿವೃದ್ಧಿಗಾಗಿ ಸಂಬಂಧಪಟ್ಟ ಸಚಿವರ ಭೇಟಿ ಮಾಡಿ ಅನುದಾನ ತರುತ್ತಿದ್ದೇನೆಂದರು.

ಸನ್ಯಾಸಿಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ವೆಂಕಟೇಶ್, ಶ್ರೀಧರ್, ಖಾದರ್, ರವಿ, ಉಪ್ಪಾರ ಸಂಘದ ತಾಲ್ಲೂಕು ಅಧ್ಯಕ್ಷ ಸುರೇಶ್ ಘಟ್ಟದಳ್ಳಿ, ಕಾರ್ಯದರ್ಶಿ ವಸಂತಕುಮಾರ್, ಸನ್ಯಾಸಿಹಳ್ಳಿ ಕೃಷಿ ಪತ್ತಿನ ಸಹಕಾರ ಬ್ಯಾಂಕ್ ಸದಸ್ಯ ಅಣ್ಣಪ್ಪ, ಜಯಮೂರ್ತಿ ಇತರರಿದ್ದರು.

## ತಮಿಳುನಾಡಿಗೆ ಹೆಚ್ಚುವರಿ ನೀರು ಹರಿಸಲಾಗಿದೆ : ಡಿ.ಕೆ.ಶಿವಕುಮಾರ್

• ಪ್ರಜೋದಯ ವರದಿ



**ಮಂಡ್ಯ:** ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ತಮಿಳುನಾಡಿಗೆ ವರ್ಷಕ್ಕೆ 177.25 ಟಿಎಂಸಿ ಅಡಿ ನೀರು ಹರಿಸಬೇಕಿತ್ತು. ಪ್ರಸಕ್ತ ವರ್ಷ ಉತ್ತಮ ಮಳೆ ಸುರಿದ ಕಾರಣ ಜೂನ್‌ನಿಂದ ಇಲ್ಲಿಯವರೆಗೆ 273 ಟಿಎಂಸಿ ಅಡಿ ನೀರು ಹರಿದು ಹೋಗಿದೆ. ಅಂದರೆ ಹೆಚ್ಚುವರಿಯಾಗಿ 96 ಟಿಎಂಸಿ ಅಡಿ ನೀರನ್ನು ತಮಿಳುನಾಡಿಗೆ ಹರಿಸಲಾಗಿದೆ.

ಈ ವರ್ಷ ತಮಿಳುನಾಡು ಹಾಗೂ ಕರ್ನಾ ಟಕದ ಕಾವೇರಿ ನದಿ ನೀರು ಹಂಚಿಕೆ ಸಮಸ್ಯೆ ಪ್ರಕೃತಿದತ್ತವಾಗಿ ನಿವಾರಣೆಯಾಗಿದೆ. ಕಾವೇರಿ ನದಿ ಮೈದುಂಬಿ ಹರಿಯುತ್ತಿದ್ದು, ಪ್ರಸಕ್ತ ವರ್ಷ ಮೊದಲ ಬಾರಿಗೆ ಜೂನ್‌ನಲ್ಲೇ ಡ್ಯಾಂ ಭರ್ತಿಯಾಗಿ ಇತಿಹಾಸ ಬರೆದಿದೆ. ಬೆಂಗಳೂರಿಗೆ ವರ್ಷಕ್ಕೆ 31 ಟಿಎಂಸಿ ನೀರು ಕುಡಿಯುವ ನೀರಿಗೆ ಬೇಕಿದೆ. ಅಂದರೆ ಪ್ರತಿ ತಿಂಗಳು ಬೆಂಗಳೂರಿಗೆ 2.60 ಟಿಎಂಸಿ ನೀರಿನ ಅವಶ್ಯವಿದೆ. ಡ್ಯಾಂ ಭರ್ತಿ ಯಾಗಿರುವುದರಿಂದ ನೀರಿನ ಸಮಸ್ಯೆ ತಲೆದೋರುವುದಿಲ್ಲವೆಂದು ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಕಾವೇರಿ ಜಲಾನಯನ ಪ್ರದೇಶದ ಹಾರಂಗಿ, ಕೆಆರ್‌ಎಸ್, ಕಬಿನಿ, ಹೇಮಾವತಿ ಜಲಾಶಯಗಳು ಅಕ್ಟೋಬರ್‌ನಲ್ಲಿ ಭರ್ತಿಯಾಗಿ, 115 ಟಿಎಂಸಿ ಅಡಿ ನೀರು ಸಂಗ್ರಹವಿದೆ. ಇದರ ಜೊತೆಗೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಕಾವೇರಿ ನೀರಾವರಿ ನಿಗಮದ 6,576 ಕೆರೆಗಳು ಸಂಪೂರ್ಣವಾಗಿ ಭರ್ತಿಯಾಗಿವೆ. ಇದರ ಜೊತೆಗೆ ಸಣ್ಣ ನೀರಾವರಿ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಯ ಕೆರೆಗಳು ಸಂಪೂರ್ಣ ಭರ್ತಿಯಾಗಿದ್ದು, ಕೃಷಿ ಚಟುವಟಿಕೆಗೆ ಅನುಕೂಲವಾಗಿದೆ ಎಂದು ತಿಳಿಸಿದ್ದಾರೆ.

ಬಿಳಿಗೊಂಡ್ಲು ಜಲಮಾಪನ ಕೇಂದ್ರದಿಂದ ಜೂನ್‌ನಲ್ಲಿ 42.256 ಟಿಎಂಸಿ ಅಡಿ, ಜುಲೈ ನಲ್ಲಿ 103.514 ಟಿಎಂಸಿ ಅಡಿ, ಆಗಸ್ಟ್‌ನಲ್ಲಿ 51.943 ಟಿಎಂಸಿ, ಸೆಪ್ಟೆಂಬರ್‌ನಲ್ಲಿ 40.790 ಟಿಎಂಸಿ, ಅಕ್ಟೋಬರ್‌ನಲ್ಲಿ 31.344 ಟಿಎಂಸಿ ಅಡಿ ಸೇರಿ ಈ ವರ್ಷ ತಮಿಳುನಾಡಿಗೆ ಇದುವರೆಗೆ 273 ಟಿಎಂಸಿ ಅಡಿ ನೀರು ಹರಿದು ಹೋಗಿದೆ.

ಬೀದರ್‌ನಿಂದ ಚಾಮರಾಜನಗರದವರೆಗೆ, ಬಳ್ಳಾರಿಯಿಂದ ಕೋಲಾರದವರೆಗೆ ರಾಜ್ಯದಾದ್ಯಂತ ಉತ್ತಮ ಮಳೆಯಾಗಿದೆ. ಜಲಾಶಯಗಳು, ಕೆರೆ ಕಟ್ಟೆಗಳು ಭರ್ತಿ ಯಾಗಿರುವುದರಿಂದ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು ಮತ್ತು ಕೃಷಿಗೆ ತೊಂದರೆ ಇಲ್ಲ. ನಮ್ಮ ಸರ್ಕಾರ ವರುಣನ ಕೃಪೆಗೆ ಪಾತ್ರವಾಗಿದೆ ಎಂದು ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

## ಬಂಗಾಳಕೊಲ್ಲಿಯಲ್ಲಿ ವಾಯುಭಾರ ಕುಸಿತ : ಕರ್ನಾಟಕದ ಮೇಲೂ ಪರಿಣಾಮ

• ಪ್ರಜೋದಯ ವರದಿ

**ಭುವನೇಶ್ವರ:** ಬಂಗಾಳಕೊಲ್ಲಿಯಲ್ಲಿ ಭಾನುವಾರ ಉಂಟಾದ ವಾಯುಭಾರ ಕುಸಿತವು ತೀವ್ರಗೊಂಡು ಪೂರ್ವ ಕರಾವಳಿಯತ್ತ ನಿಧಾನವಾಗಿ ಚಲಿಸುತ್ತಿದ್ದು, ಆಂಧ್ರ ಪ್ರದೇಶ, ಕರ್ನಾಟಕ ಸೇರಿ ದಕ್ಷಿಣದ ರಾಜ್ಯಗಳಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಹೇಳಿದೆ.




ಬಂಗಾಳಕೊಲ್ಲಿಯಲ್ಲಿ ಉಂಟಾದ ವಾಯುಭಾರ ಕುಸಿತವು ತೀವ್ರಗೊಂಡು ಪೂರ್ವ ಕರಾವಳಿಯತ್ತ ನಿಧಾನವಾಗಿ ಚಲಿಸುತ್ತಿದೆ. ಪರಿಣಾಮ ಒಡಿಶಾ ಸರ್ಕಾರವು ಎಲ್ಲಾ 30 ಜಿಲ್ಲೆಗಳನ್ನು ಕಟ್ಟೆಚ್ಚರದಲ್ಲಿರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಕ್ಟೋಬರ್ 28 ರ ಸಂಜೆ ಅಥವಾ ರಾತ್ರಿ, ಆಂಧ್ರ ಪ್ರದೇಶದ ಕಾಕಿನಾಡದ ಸುತ್ತಮುತ್ತಲಿನ ಮಚಲಿಪಟ್ಟಣ ಮತ್ತು ಕಳಿಂಗಪಟ್ಟಣಂ ನಡುವೆ ಆಂಧ್ರಪ್ರದೇಶದ ಕರಾವಳಿಯನ್ನು ತೀವ್ರ ಚಂಡಮಾರುತವಾಗಿ ದಾಟುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

ಗರಿಷ್ಠ ಗಾಳಿಯ ವೇಗ ಗಂಟೆಗೆ 90-100 ಕಿ.ಮೀ. ಮತ್ತು ಗಂಟೆಗೆ 110 ಕಿ.ಮೀ. ವೇಗದಲ್ಲಿ ಬೀಸಲಿದೆ. ಅಕ್ಟೋಬರ್ 28 ಮತ್ತು 29 ರಂದು ಒಡಿಶಾ ಅತಿ ಹೆಚ್ಚು ಮಳೆಯಾಗಲಿದೆ ಎಂದು ಹೇಳಿದೆ. ಒಡಿಶಾದ ಹಲವಾರು ದಕ್ಷಿಣ ಮತ್ತು ಕರಾವಳಿ ಜಿಲ್ಲೆಗಳಿಗೆ ಹವಾಮಾನ ಇಲಾಖೆ ಕೆಂಪು, ಕಿತ್ತಳೆ ಮತ್ತು ಹಳದಿ ಎಚ್ಚರಿಕೆಗಳನ್ನು ನೀಡಿದೆ. ಅಲ್ಲಿ ಪ್ರತ್ಯೇಕ ಸ್ಥಳಗಳಲ್ಲಿ 20 ಸೆಂ.ಮೀ.ಗಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ.

ಒಡಿಶಾದ ಕಂದಾಯ ಮತ್ತು ವಿಪತ್ತು ನಿರ್ವಹಣಾ ಸಚಿವ ಸುರೇಶ್ ಪೂಜಾರಿ ಅವರು ಮಾತನಾಡಿ, ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ರಕ್ಷಣಾ ಮತ್ತು ಪರಿಹಾರ ಕಾರ್ಯಾಚರಣೆಗಳಿಗೆ ಸಿಬ್ಬಂದಿ ಮತ್ತು ಯಂತ್ರೋಪಕರಣಗಳು ಸಿದ್ಧವಾಗಿವೆ ಎಂದು ಹೇಳಿದರು.

ಒಡಿಶಾದಾದ್ಯಂತ ಭಾರೀ ಮಳೆಯಾಗಲಿದ್ದು, ಮೇಲ್ಮೈ ಗಾಳಿ ಬೀಸುವ ಸಾಧ್ಯತೆ ಇರುವುದರಿಂದ ತಗ್ಗು ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಕರಾವಳಿ ಮತ್ತು ದಕ್ಷಿಣ ಪ್ರದೇಶಗಳಲ್ಲಿನ 15 ಜಿಲ್ಲೆಗಳು ಮುಂಬರುವ ಚಂಡಮಾರುತದ ಪ್ರಭಾವಕ್ಕೆ ಒಳಗಾಗಲಿವೆ ಎಂದು ಸಚಿವರು ಹೇಳಿದರು.

ಏತನ್ಮಧ್ಯೆ, ಪರಿಸ್ಥಿತಿಯ ತುರ್ತು ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ದಕ್ಷಿಣ ಮತ್ತು ಕರಾವಳಿ ಪ್ರದೇಶಗಳಲ್ಲಿನ ಸುಮಾರು ಏಳು ಜಿಲ್ಲೆಗಳು ಸರ್ಕಾರಿ ನೌಕರರ ರಜೆಯನ್ನು ರದ್ದುಗೊಳಿಸಿವೆ.

**ಆಂಧ್ರ ಪ್ರದೇಶದಲ್ಲೂ ಮಳೆ**

ಹವಾಮಾನ ತನ್ನ ಇತ್ತೀಚಿನ ಹೇಳಿಕೆಯಲ್ಲಿ, ಆಗ್ನೇಯ ಬಂಗಾಳ ಕೊಲ್ಲಿಯ ಮೇಲಿನ ವಾಯುವ್ಯವು ಕಳೆದ 6 ಗಂಟೆಗಳಲ್ಲಿ ಗಂಟೆಗೆ 10 ಕಿ.ಮೀ ವೇಗದಲ್ಲಿ ಪಶ್ಚಿಮ-ವಾಯುವ್ಯಕ್ಕೆ ಚಲಿಸಿ, ಆಳವಾದ ವಾಯುವ್ಯವಾಗಿ ತೀವ್ರಗೊಂಡು, ಬೆಳಿಗ್ಗೆ 5.30 ಕ್ಕೆ ಪೋರ್ಟ್ ಬ್ಲೇರ್ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು) ನಿಂದ ಪಶ್ಚಿಮಕ್ಕೆ 610 ಕಿ.ಮೀ., ಚೆನ್ನೈ (ತಮಿಳುನಾಡು)ದಿಂದ ಪೂರ್ವ-ಆಗ್ನೇಯಕ್ಕೆ 790 ಕಿ.ಮೀ., ವಿಶಾಖಪಟ್ಟಣ (ಆಂಧ್ರಪ್ರದೇಶ) ದಿಂದ 850 ಕಿ.ಮೀ., ಕಾಕಿನಾಡ (ಆಂಧ್ರ ಪ್ರದೇಶ)ದಿಂದ ಆಗ್ನೇಯಕ್ಕೆ 840 ಕಿ.ಮೀ. ಮತ್ತು ಗೋಪಾಲಪುರ (ಒಡಿಶಾ)ದಿಂದ ಆಗ್ನೇಯಕ್ಕೆ 950 ಕಿ.ಮೀ. ದೂರದಲ್ಲಿ ಕೇಂದ್ರೀಕೃತವಾಗಿದೆ ಎಂದು ಹೇಳಿದರು.

ಮುಂದಿನ 24 ಗಂಟೆಗಳಲ್ಲಿ ಪಶ್ಚಿಮ-ವಾಯುವ್ಯ ದಿಕ್ಕಿಗೆ ಚಲಿಸುವ ಸಾಧ್ಯತೆ ಇದೆ, ನಂತರ ನೈಋತ್ಯ ಮತ್ತು ಪಕ್ಕದ ಪಶ್ಚಿಮ-ಮಧ್ಯ ಬಂಗಾಳ ಕೊಲ್ಲಿಯ ಮೇಲೆ ಚಂಡಮಾರುತದ ಬಿರುಗಾಳಿಯಾಗಿ ಮತ್ತಷ್ಟು ತೀವ್ರಗೊಳ್ಳುತ್ತದೆ.

ನಂತರ, ಅದು ವಾಯುವ್ಯ ದಿಕ್ಕಿಗೆ, ನಂತರ ಉತ್ತರ-ವಾಯುವ್ಯ ದಿಕ್ಕಿಗೆ ಚಲಿಸುವ ಸಾಧ್ಯತೆ ಇದೆ ಮತ್ತು ಅಕ್ಟೋಬರ್ 28 ರ ಬೆಳಿಗ್ಗೆ ತೀವ್ರ ಚಂಡಮಾರುತವಾಗಿ ಪರಿಣಮಿಸುವ ಸಾಧ್ಯತೆ ಇದೆ ಎಂದು ಹೇಳಿದೆ. ಮಾತ್ರವಲ್ಲದೇ ವಾಯುಭಾರ ಕುಸಿತದ ಪರಿಣಾಮ ನೆರೆಯ ಆಂಧ್ರ ಪ್ರದೇಶ, ಕೇರಳ ಮತ್ತು ಕರ್ನಾಟಕದ ಮೇಲೂ ಆಗಲಿದೆ ಎಂದು ಹೇಳಲಾಗಿದೆ.

## ಸಿದ್ದರಾಮಯ್ಯಗಾಗಿ ತ್ಯಾಗಕ್ಕೆ ಮುಂದಾದ ಸಚಿವರು

» ನಾಲ್ಕನೇ ಪುಟದಲ್ಲಿ

ಸಾಧ್ಯತೆ ಇದೆ. ಕೃಷ್ಣಬೈರೇಗೌಡ ಮತ್ತು ದಿನೇಶ್ ಇಬ್ಬರಿಗೂ ಪಕ್ಷದ ಸಾಂಸ್ಥಿಕ ಜವಾಬ್ದಾರಿಯನ್ನು ನೀಡಬಹುದೆಂದು ತಿಳಿದುಬಂದಿದೆ.

ನವೆಂಬರ್ ವೇಳೆಗೆ ಸಿದ್ದರಾಮಯ್ಯ ಸಂಪುಟ ಪುನಾರಚನೆ ಮಾಡಿದರೆ, ಇದು ಮುಂಬರುವ ಐದು ಪಾಲಿಕೆ ಮತ್ತು ಜಿಲ್ಲಾ ಹಾಗು ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಹೊಸ ಶಕ್ತಿ ನೀಡಿದಂತಾಗುತ್ತದೆ. ಆಡಳಿತ ವಿರೋಧಿ ಅಲೆಯನ್ನು ಹೋಗಲಾಡಿಸಲು ಪಕ್ಷಕ್ಕೆ ಸಹಾಯ ಮಾಡುತ್ತದೆ ಎಂದು ಕಾಂಗ್ರೆಸ್ ಶಾಸಕರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ.

ಬಿಹಾರ ಚುನಾವಣೆಯ ನಂತರ ಸಿದ್ದರಾಮಯ್ಯ ಸಂಪುಟ ಪುನಾರಚನೆ ಮಾಡಿದರೆ, ಅದು ಡಿ.ಕೆ. ಶಿವಕುಮಾರ್ ಅವರಿಗೆ ಹಿನ್ನಡೆಯಾಗುತ್ತದೆ. ಆದರೆ, ಹೈಕಮಾಂಡ್ ಮುಖ್ಯಮಂತ್ರಿಯನ್ನು ಬದಲಾಯಿಸುವ ಅಪಾಯವನ್ನು ತೆಗೆದುಕೊಳ್ಳುತ್ತದೆಯೇ ಅಥವಾ ಸಿದ್ದರಾಮಯ್ಯ ಅವರನ್ನೇ ಮುಂದುವರಿಸುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

## ಟ್ರಂಪ್ ಕ್ಯಾತೆಗೆ ಭಾರತ ತಿರುಗೇಟು


• ಪ್ರಜೋದಯ ವರದಿ

**ವಾಷಿಂಗ್ಟನ್ :** ರಷ್ಯಾದಿಂದ ತೈಲ ಖರೀದಿ ಮಾಡುವುದನ್ನು ಭಾರತ ಸಂಪೂರ್ಣವಾಗಿ ನಿಲ್ಲಿಸಲಿದೆ ಎಂದು ಮತ್ತೊಮ್ಮೆ ಪುನರುಚ್ಚರಿಸಿರುವ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆಗೆ ತಿರುಗೇಟು ನೀಡಿರುವ ಭಾರತ ಇಂಧನ ಆಯ್ಕೆಗಳು ಅಮೇರಿಕಾದ ಇಚ್ಛೆಯಿಂದಲ್ಲ ಬದಲಾಗಿ ರಾಷ್ಟ್ರೀಯ ಹಿತಾಸಕ್ತಿಯಿಂದ ರೂಪಿಸಲ್ಪಟ್ಟಿವೆ ಎಂದು ಹೇಳಿದೆ.

ಭಾರತ ವರ್ಷದ ಅಂತ್ಯದ ವೇಳೆಗೆ ರಷ್ಯಾದಿಂದ ತೈಲ ಖರೀದಿ ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಲಿದೆ ಎನ್ನುವ ಭರವಸೆ ಇದೆ, ಈಗಾಗಲೇ ಭಾರತದ ಪ್ರಧಾನಿ ನರೇಂದ್ರ ಮೋದಿ ಅವರು ಈ ನಿಟ್ಟಿನಲ್ಲಿ ಭರವಸೆ ನೀಡಿದ್ದಾರೆಂದು ಟ್ರಂಪ್ ತಿಳಿಸಿದ್ದಾರೆ

ಏರ್ ಫೋರ್ಸ್ ಒನ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ರಷ್ಯಾದಿಂದ ತೈಲ ಖರೀದಿ ಮಾಡುವುದನ್ನು ಭಾರತ ನಿಲ್ಲಿಸಲಿದೆ ಎಂದು ಪದೇ ಪದೇ ಪುನರುಚ್ಚರಿಸುತ್ತಿರುವ ಡೊನಾಲ್ಡ್ ಟ್ರಂಪ್, ಚೀನಾ ರಷ್ಯಾದ ತೈಲ ಖರೀದಿ ಗಣನೀಯವಾಗಿ ಕಡಿತಗೊಳಿಸಿದ್ದು, ಇದೇ ಹಾದಿಯಲ್ಲಿ ಭಾರತವೂ ಸಾಗಲಿದೆ ಎಂದು ತಿಳಿಸಿದ್ದಾರೆ

ಈಗಾಗಲೇ ರಷ್ಯಾದ ತೈಲ ದೈತ್ಯ



ಕಂಪನಿಗಳಾದ ರೋಸ್ನೆಫ್ಟ್ ಮತ್ತು ಲುಕೋಯಿಲ್ ಮೇಲೆ ಹೊಸ ನಿರ್ಬಂಧ ವಿಧಿಸಿರುವ ಹಿನ್ನೆಲೆಯಲ್ಲಿ ತೈಲ ಖರೀದಿಯೂ ಕಡಿಮೆ ಆಗಲಿದೆ ಎಂದಿದ್ದಾರೆ

ರಷ್ಯಾದೊಂದಿಗಿನ ಚೀನಾದ ತೈಲ ವ್ಯವಹಾರಗಳನ್ನು ಪ್ರಸ್ತಾಪಿಸುತ್ತೀರಾ ಎನ್ನುವ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಡೊನಾಲ್ಡ್ ಈ ಸಂಬಂಧ ಮಾತುಕತೆ ನಡೆಯಲಿದೆ ಎಂದಷ್ಟೇ ಹೇಳಿದ್ದಾರೆ. ರಷ್ಯಾದಿಂದ ಭಾರತ ತೈಲ ಖರೀದಿ ಮಾಡುವುದಾಗಿ ಭರವಸೆ ನೀಡಿದೆ, ರಾತ್ರೋರಾತ್ರಿ ತೈಲ ಖರೀದಿ ನಿಲ್ಲಿಸಲು ಸಾಧ್ಯವಿಲ್ಲ ಎನ್ನುವ ಅರಿವಿದೆ ಇದಕ್ಕಾಗಿ ವರ್ಷದ ಅಂತ್ಯದ ವೇಳೆಗೆ, ಭಾರತ ಬಹುತೇಕ ಶೂನ್ಯಕ್ಕೆ ತೈಲ ಖರೀದಿಯ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂದಿದ್ದಾರೆ

ನ್ಯಾಟೋ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅವರೊಂದಿಗಿನ ಶ್ವೇತಭವನದಲ್ಲಿ ನಡೆದ ಸಭೆಯಲ್ಲಿ ಈ ಹೇಳಿಕೆಯನ್ನು ಪುನುರುಚ್ಚರಿಸಿದ ಡೊನಾಲ್ಡ್ ಟ್ರಂಪ್ ಅವರು ಭಾರತ, ರಷ್ಯಾದಿಂದ ತೈಲ ಖರೀದಿ ನಿಲ್ಲಿಸುವುದಾಗಿ ತಿಳಿಸಿದೆ ಎಂದು ಹೇಳಿದ್ದಾರೆ

ರಷ್ಯಾದಿಂದ ಭಾರತ ತೈಲ ಖರೀದಿ ಮಾಡುವುದನ್ನು ಭಾರತ ನಿಲ್ಲಿಸಲಿದೆ ಎನ್ನುವ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಗೆ ಭಾರತ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಭಾರತದ ಇಂಧನ ನೀತಿಯು ಸ್ವತಂತ್ರವಾಗಿ ಉಳಿದಿದೆ ಮತ್ತು ಸ್ಥಿರ ಬೆಲೆಗಳು ಮತ್ತು ವಿಶ್ವಾಸಾರ್ಹ ಪೂರೈಕೆ ಸರಪಳಿಗಳನ್ನು ಖಚಿತಪಡಿಸಿಕೊಳ್ಳುವತ್ತ ಗಮನಹರಿಸಿದೆ ಎಂದು ಭಾರತ ಸ್ಪಷ್ಟಪಡಿಸಿದೆ.

ಕಚ್ಚಾ ತೈಲ ಆಮದಿನ ಮೇಲಿನ ನಿರ್ಧಾರಗಳನ್ನು ಬಾಹ್ಯ ಒತ್ತಡವನ್ನಲ್ಲ, ರಾಷ್ಟ್ರೀಯ ಹಿತಾಸಕ್ತಿ ಗಳನ್ನು ಗಮನದಲ್ಲಿಟ್ಟುಕೊಂಡು ತೆಗೆದುಕೊಳ್ಳಲಾಗುತ್ತದೆ ಎಂದು ಕೇಂದ್ರ ಸರ್ಕಾರ ಒತ್ತಿ ಹೇಳಿದೆ. ವ್ಯಾಪಾರ, ತಂತ್ರಜ್ಞಾನ ಮತ್ತು ಕಚ್ಚಾ ವಸ್ತುಗಳ ಪ್ರವೇಶದ ಕುರಿತು ಅಮೇರಿಕಾ ಮತ್ತು ಚೀನಾ ನಡುವೆ ಹೆಚ್ಚುತ್ತಿರುವ ಘರ್ಷಣೆಯ ಮಧ್ಯೆ, ಏಷ್ಯಾ ಪ್ರವಾಸದ ಭಾಗವಾಗಿ, ದಕ್ಷಿಣ ಕೊರಿಯಾದಲ್ಲಿ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಡೊನಾಲ್ಡ್ ಟ್ರಂಪ್ ಅವರ ನಿಗದಿತ ಸಭೆಗೆ ಮುಂಚಿತವಾಗಿ ಈ ಹೇಳಿಕೆಗಳು ಬಂದಿರುವುದು ಕುತೂಹಲ ಕೆರಳಿಸಿದೆ

## ಅ.28 ರಂದು ಸುವರ್ಣ ಮಹೋತ್ಸವ

• ಪ್ರಜೋದಯ ವರದಿ

**ಹಾಸನ :** ನಗರದ ಸರ್ಕಾರಿ ಇಂಜಿನೀಯರಿಂಗ್ ಕಾಲೇಜು ಮೈದಾನದಲ್ಲಿ ಅ.28 ರಂದು ಮಧ್ಯಾಹ್ನ 2 ಗಂಟೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಸಂಸ್ಥಾಪನೆಗೊಂಡು 50 ವರ್ಷಗಳಾದ ಹಿನ್ನಲೆಯಲ್ಲಿ ಸುವರ್ಣ ಮಹೋತ್ಸವವನ್ನು ಆಯೋಜಿಸಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಭೈರೇಗೌಡ, ಇಂಧನ ಸಚಿವರೂ ಆದ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ ಜಾರ್ಜ್ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರು ಕಾರ್ಯಕ್ರಮ ಉದ್ಘಾಟಿಸುವರು.

ಕನಾಟಕ ವಿಧಾನ ಪರಿಷತ್ ಉಪ ಸಭಾಪತಿ ಎಂ.ಕೆ.ಪ್ರಾಣೇಶ್, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ, ಶೃಂಗೇರಿ ಶಾಸಕ ಬಿ.ಡಿ.ರಾಜೇಗೌಡ, ಕರ್ನಾಟಕ ರಾಜ್ಯ ಗೃಹ ಮಂಡಳಿಯ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ, ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಅವರು ಗೌರವ ಉಪಸ್ಥಿತಿ ವಹಿಸಲಿದ್ದಾರೆ. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದ ಶ್ರೇಯಸ್ ಎಂ.ಪಟೇಲ್, ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ, ಹನಿವಾಸಿ, ಭಾರತೀಯ ಕೋಶದ ಉಪಾಧ್ಯಕ್ಷರಾದ ಡಾ.ಆರತಿ ಕೃಷ್ಣ, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಶಾಸಕರಾದ ಡಾ.ಸಿ.ಎನ್.ಬಾಲಕೃಷ್ಣ, ಎ.ಮಂಜು, ಹೆಚ್.ಕೆ. ಸುರೇಶ್, ಸಿಮೆಂಟ್ ಮಂಜು, ವಿಧಾನ ಪರಿಷತ್ ಸದಸ್ಯರು, ಮಹಾನಗರ ಪಾಲಿಕೆಯ ಮಹಾಪೌರರಾದ ಗಿರೀಶ್ ಚನ್ನವೀರಪ್ಪ, ಚಿಕ್ಕಮಗಳೂರು ಜಿಲ್ಲೆಯ ಶಾಸಕರುಗಳಾದ ಹೆಚ್.ಡಿ. ತಮ್ಮಯ್ಯ, ಜೈರಾಮ್ ರಮೇಶ್, ಎಸ್.ಎಲ್.ಬೋಜೇಗೌಡ, ಜಿ. ಹೆಚ್.ಶ್ರೀನಿವಾಸ್, ಕೆ.ಎಸ್. ಆನಂದ್, ನಯನ ಮೋಟಮ್ಮ, ವಿಧಾನ ಪರಿಷತ್ ಶಾಸಕರುಗಳಾದ ಸಿ.ಟಿರವಿ, ಧನಂಜಯ ಸರ್ಜಿ ಮುಂತಾದವರು ಭಾಗವಹಿಸಲಿದ್ದಾರೆ.

## ಎಷ್ಟೇ ಶ್ರೀಮಂತಿಕೆಯಿದ್ದರೂ ಆರೋಗ್ಯ ಇಲ್ಲದಿದ್ದರೆ ಶೂನ್ಯ

• ಪ್ರಜೋದಯ ವರದಿ

**ಸಕಲೇಶಪುರ:** ಪ್ರತಿಯೊಬ್ಬರಿಗೂ ಆರೋಗ್ಯ ಬಹಳ ಮುಖ್ಯವಾಗಿದ್ದು, ಆರೋಗ್ಯ ಇಲ್ಲದ್ದಿದ್ದರೆ ಎಲ್ಲವೂ ಶೂನ್ಯವೆಂದು ಶಾಸಕ ಸಿಮೆಂಟ್ ಮಂಜು ಅವರು ಹೇಳಿದರು.

ಪಟ್ಟಣದ ಲಯನ್ಸ್ ಸಭಾಂಗಣದಲ್ಲಿ ಲಯನ್ಸ್ ಇಂಟರ್ ನ್ಯಾಷನಲ್‌ನ ಲಯನ್ಸ್ ಕ್ಲಬ್ ಹಾಗೂ ಲಿಯೊ ಕ್ಲಬ್, ಕೆ.ಎಂ.ಸಿ. ಆಸ್ಪತ್ರೆ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಸಂಸ್ಕೃತಿ ಕಾರ್ಡಿಯಾಕ್ ಕೇಂದ್ರದಿಂದ ಹಮ್ಮಿಕೊಂಡಿದ್ದ ಆರೋಗ್ಯ ಉಚಿತ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ನಾವು ಆರೋಗ್ಯ ಲೆಕ್ಕಿಸದೆ ದುಡಿಯುತ್ತೇವೆ. ಆದರೆ, ರೋಗ್ಯ ಕೈಕೊಟ್ಟಾಗ ದುಡಿದ ಹಣ ಆಸ್ಪತ್ರೆಗೆ ಸುರಿಯುತ್ತೇವೆ. ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯಾಘಾತದಂತಹ ರೋಗಗಳು ಹೆಚ್ಚುತ್ತಿವೆ. ಆರೋಗ್ಯದತ್ತ ಪ್ರತಿಯೊಬ್ಬರೂ ಕಾಳಜಿ ವಹಿಸಬೇಕೆಂದರು.



ಲಯನ್ಸ್ ಸಂಸ್ಥೆ ಅಧ್ಯಕ್ಷ ಗಿರೀಶ್ ಅವರು ಮಾತನಾಡಿ, ಲಯನ್ಸ್ ಸಂಸ್ಥೆ ಸಾಮಾಜಿಕ ಸೇವೆ ಮತ್ತು ಮಾನವೀಯ ಕಾರ್ಯಗಳಿಗೆ ಬದ್ಧವಾಗಿದೆ. ಸಂಸ್ಥೆಯ ಮೂಲ ಧ್ಯೇಯವೇ ಸೇವೆಯಾಗಿದ್ದು ಅದನ್ನು ನಿರಂತರವಾಗಿ ಮಾಡುತ್ತಿದ್ದೇವೆಂದರು.

ಸಂಸ್ಥೆಯು ಹಲವು ಸಮಾಜ ಮುಖಿ ಕಾರ್ಯಗಳನ್ನು ನಿರಂತರವಾಗಿ ಕೈಗೊಂಡಿದ್ದು, ಈ ಆರೋಗ್ಯ ಶಿಬಿರವೂ ಅದರಲ್ಲಿ ಒಂದು ಮಹತ್ವದ ಹಂತವಾಗಿದೆ. ಕ್ಯಾನ್ಸರ್ ಸೇರಿ ಹಲವು ಗಂಭೀರ ಕಾಯಿಲೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಇದು ಸಹಾಯ ಮಾಡಲಿದೆ. ವೈದ್ಯರಾದ ನವೀನ್ ಚಂದ್ರಶೆಟ್ಟಿ, ಸುಧಾಕರ್ ಹಾಗೂ ಅವರ ತಂಡದ ಸಲಹೆಯಿಂದ ಈ ಶಿಬಿರ ಹಮ್ಮಿಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಸೇವಾ ಕಾರ್ಯಗಳನ್ನು ಕೈಗೊಳ್ಳುವ ಉದ್ದೇಶವಿದೆ ಎಂದು ಹೇಳಿದರು.

ಶಿಬಿರದಲ್ಲಿ ಸಾಮಾನ್ಯ ಆರೋಗ್ಯ ತಪಾಸಣೆ, ಮೂಳೆ ತಪಾಸಣೆ, ಸ್ನಾಯು-ಸಂಧಿ ತಪಾಸಣೆ, ರಕ್ತದೊತ್ತಡ ಪರೀಕ್ಷೆ, ಮಧುಮೇಹ ತಪಾಸಣೆ, ನರ ಮತ್ತು ಹೃದಯ ಸಂಬಂಧಿತ ತಪಾಸಣೆ ಸೇರಿ ವಿವಿಧ ಸೇವೆಗಳು ಸ್ಥಳೀಯ ಜನತೆಗೆ ಉಚಿತವಾಗಿ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗಿತ್ತು. ಶಿಬಿರದಲ್ಲಿ ಸ್ನಾಯು ನೋವು, ರಕ್ತದೊತ್ತಡ, ಹೃದಯ ಸಮಸ್ಯೆ ಹಾಗೂ ಮಧುಮೇಹ ಮುಂತಾದ ಕಾಯಿಲೆಗಳ ಕುರಿತು ತಪಾಸಣೆ ಮತ್ತು ಮಾರ್ಗದರ್ಶನ ನೀಡಲಾಯಿತು.

ಶಿಬಿರದಲ್ಲಿ ಭಾಗವಹಿಸಿದ ತಜ್ಞ ವೈದ್ಯರಲ್ಲಿ ಡಾ. ಭೂಷಣ್ ಶೆಟ್ಟಿ (ಕಿಡ್ನಿ ಮತ್ತು ಮೂತ್ರರೋಗ ತಜ್ಞ), ಡಾ. ವೈಶಾಕ್ ಭಟ್ (ಬೆನ್ನುಮೂಳೆ ಮತ್ತು ಎಲುಬು ತಜ್ಞ), ಡಾ. ಅಭಿಷೇಕ್ ಕೃಷ್ಣ (ಕ್ಯಾನ್ಸರ್ ತಜ್ಞ) ಹಾಗೂ ಡಾ. ಮಧುಕರ್ (ಹೃದಯ ರೋಗ ತಜ್ಞ), ಲಯನ್ಸ್ ಸಂಸ್ಥೆಯ ವಿಶ್ವನಾಥ್, ಜೈ ಶಂಕರ್, ಪ್ರಭಾಕರನ್, ಮೀನಾಕ್ಷಿ, ಖಾದರ್ ಇತರರಿದ್ದರು.

## ಧರ್ಮ ಪರಿಪಾಲನೆ ಅಗತ್ಯತೆ ಹೆಚ್ಚಿದೆ

» ಮೊದಲನೇ ಪುಟದಿಂದ

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿಮೆಂಟ್ ಮಂಜು ಮಾತನಾಡಿದರು. ಕಾರ್ಜುವಳ್ಳಿ ಮಠದ ಶ್ರೀ ಸದಾಶಿವ ಸ್ವಾಮೀಜಿ, ಯಸಳೂರು ಮಠದ ಶ್ರೀ ಚನ್ನಸಿದ್ದೇಶ್ವರ ಸ್ವಾಮೀಜಿ, ಕೊಡ್ಲಿಪೇಟೆಯ ಶ್ರೀ ಸದಾಶಿವ ಸ್ವಾಮೀಜಿ, ತಣ್ಣೀರುಹಳ್ಳ ಮಠದ ಶ್ರೀ ವಿಜಯಕುಮಾರ ಸ್ವಾಮೀಜಿ, ಕೊಳ್ಳೆಗಾಲದ ಶ್ರೀ ಶಿವಮೂರ್ತಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಮಾಜಿ ಸಚಿವ ಹೆಚ್.ಕೆ. ಕುಮಾರಸ್ವಾಮಿ, ಬಿಜೆಪಿ ಮುಖಂಡರಾದ ಬೇಳೂರು ರಾಘವೇಂದ್ರ, ಡಾ.ಧನಂಜಯ್ ಸರ್ಜಿ, ಅನಿಲ್, ಜೆಡಿಎಸ್ ಮುಖಂಡ ದ್ಯಾವೇಗೌಡ, ಕಾಂಗ್ರೆಸ್ ಮುಖಂಡ ಮುರಳಿ ಮೋಹನ್, ತಾಲ್ಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಕಟ್ಟಾಯ ಶಿವಕುಮಾರ್ ಮತ್ತಿತರರಿದ್ದರು.

**ಪತ್ರಿಕಾ ಪ್ರಕಟಣೆ**

ಹಾಸನ ತಾಲ್ಲೂಕು, ಕಸಬಾ ಹೋಬಳಿ, ಸರ್ಕಾರಿ ತಟ್ಟೆಕೆರೆ ಗ್ರಾಮದ ಹಳೇ ಸರ್ವೆ ನಂ:19/5, ಹೊಸ ಸರ್ವೆ ನಂ:19/31 ರ 0-07.00 ಗುಂಟೆ ಆಸ್ತಿಗೆ ದಿನಾಂಕ: 06-03-1995 ರಂದು ಕ್ರಯ ಪತ್ರ ನಂಬರ್ 4767/1994-95 ರಲ್ಲಿ ಗಿಡ್ಡಮ್ಮ ಕೋಂ ಚಿಕ್ಕೇಗೌಡ ಆದ ಇವರಿಗೆ ನೋಂದಣಿಯಾಗಿದ್ದು ಸದರಿ ಕ್ರಯಪತ್ರವನ್ನು ಹಾಸನ ತಾಲ್ಲೂಕು, ಕಸಬಾ ಹೋಬಳಿ, ಸರ್ಕಾರಿ ತಟ್ಟೆಕೆರೆ ಗ್ರಾಮದ ವಾಸಿಯಾಗಿದ್ದು, ಹನುಮಂತೇಗೌಡರವರ ಮಗನಾದ ಭೀಮೇಗೌಡರು ಬರೆದುಕೊಟ್ಟ ಕ್ರಯ ಪತ್ರ ಕಳೆದು ಹೋಗಿದ್ದು ಈ ಬಗ್ಗೆ ಯಾರಿಗಾದರು ಮೇಲ್ಕಂಡ ನಂಬರಿನ ಕ್ರಯಪತ್ರ ಸಿಕ್ಕಿದಲ್ಲಿ ಗಿಡ್ಡಮ್ಮ ಕೋಂ ಚಿಕ್ಕೇಗೌಡ ಮಂಡಿಗನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹಾಸನ ತಾಲ್ಲೂಕು ರವರಿಗಾಗಲೀ ಅಥವಾ ನಮ್ಮ ಪರ ವಕೀಲರಾದ ಕೆ.ಆರ್ ಮಂಚೇಗೌಡ, ಬಿ.ಎ. ಎಲ್.ಎಲ್.ಬಿ, ಒಕ್ಕಲಿಗರ ಸಂಘ ಬಿಲ್ಡಿಂಗ್, ಬಿ.ಎಮ್ ರಸ್ತೆ, ಹಾಸನ ಇವರಿಗಾಗಲೀ ಹಿಂದಿರುಗಿಸುವಂತೆ ಈ ಮೂಲಕ ವಿನಂತಿಸಿ ಈ ಪತ್ರಿಕಾ ಪ್ರಚುರಣೆಯನ್ನು ಪ್ರಚುರಪಡಿಸಲಾಗಿರುತ್ತದೆ.

ಸ್ಥಳ: ಹಾಸನ ದಿನಾಂಕ: 24-10-2025

ಕೆ.ಆರ್ ಮಂಚೇಗೌಡ, ವಕೀಲರು

ಮೊ: 9448885602

ಗಿಡ್ಡಮ್ಮ ಕೋಂ ಚಿಕ್ಕೇಗೌಡ

ಮೊ: 9008965750

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019